ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 18 ಏಪ್ರಿಲ್ 28–ಮೇ 4, 1997 ಬೆಲೆ ರೂ. 2.00

ಮೇ ದಿನ 1997



ಮೇ ದಿನ 1997 ಶೋಷಣೆಯ ವಿರುದ್ಧ ಹಾಗೂ ಶೋಷಣಾ ವ್ಯವಸ್ಥೆಯ ವಿರುದ್ಧ ಸಮರಧೀರ ಹೋರಾಟಗಳ ಮೂಲಕ ಒಂದು ಪರ್ಯಾಯ ವ್ಯವಸ್ಥೆಗಾಗಿ ಶ್ರಮಿಂಸಲು ಕಾರ್ಮಿಕ ವರ್ಗವನ್ನು ಪುನಶ್ಚೇತನಗೊಳಿಸಲಿ

– ಇದು ಸಿಐಟಿಯು ಮೇ ದಿನದ ಪ್ರಣಾಳಿಕೆಯ ಹಾರ್ದಿಕ ಹಾರೈಕೆ.

ಮೇ ದಿನ 8 ಗಂಟೆಗಳ ಕೆಲಸ, ಎಂಟು ಗಂಟೆಗಳ ಮನರಂಜನೆ, ಎಂಟು ಗಂಟೆಗಳ ಕಾಲ ವಿಶ್ರಾಂತಿ ಎಂಬ ಕರೆ ನೀಡಿತು. ಆಗ ಬಂಡವಾಳಶಾಹಿಗಳು ಕಾರ್ಮಿಕರನ್ನು ದೀರ್ಘ ಕಾಲ ದುಡಿಸಿ ಶೋಷಣೆಯಿಂದ ತಮ್ಮ ಲಾಭ ಪೇರಿಸಿಕೊಳ್ಳುತ್ತಿದ್ದರೆ ಈಗ ಪಾಶ್ಚಿಮಾತ್ಯ ಮುಂದುವರಿದ ದೇಶಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಮನಬಂದಂತೆ ಬಳಸಿ ಮಾನವರ ಬದಲು ಯಂತ್ರಗಳನ್ನೇ ಬಳಸಿ ತಮ್ಮ ಲಾಭ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದರಿಂದ ಕಮ್ಮಿ ದುಡಿದು ಕಮ್ಮಿ ಸಂಬಳ ಪಡೆಯಿರಿ ಇಲ್ಲವೇ ಕೆಲಸ ಬಿಡಿ ಎಂಬ ಸ್ಥಿತಿಯನ್ನು ಕಾರ್ಮಿಕ ವರ್ಗಕ್ಕೆ ಸೃಷ್ಟಿಸಿಟ್ಟಿದ್ದಾರೆ. ದುಡಿತದ ಅವಧಿಯಲ್ಲಿ ಕಡಿತ, ದುಡಿತದ ವಾರದ ದಿನಗಳಲ್ಲಿ ಕಡಿತ - ಈ ಭಯಾನಕ ಸಮಸ್ಯೆಯನ್ನು ಕಾರ್ಮಿಕ ವರ್ಗ ಎದುರಿಸಬೇಕಾಗಿದೆ. ನಿಯಮಿತ ಉದ್ಯೋಗಾವಕಾಶಗಳು ಕಮ್ಮಿಯಾಗುತ್ತಿವೆ. ತಾತ್ಕಾಲಿಕ ಸ್ವರೂಪದ ಅರೆಕಾಲಿಕ ಸ್ವರೂಪದ ಉದ್ಯೋಗಾವಕಾಶಗಳ ಸಂಖ್ಯೆ ಹೆಚ್ಚುತ್ತಿದೆ.

ಭಾರತದಲ್ಲೂ ಖಾಸಗೀಕರಣವೇ ಮುಖ್ಯ ಅಂಗವಾಗಿರುವ ಉದಾರೀಕರಣದ ಧೋರಣೆಯಿಂದಾಗಿ ಸಾರ್ವಜನಿಕ ವಲಯವನ್ನು ನಿರ್ದಯವಾಗಿ ಕಳಚಿ ಹಾಕಲಾಗುತ್ತಿದೆ. ಉಚ್ಚ ತಂತ್ರಜ್ಞಾನದ ಕೈಗಾರಿಕಾ ಕ್ರಾಂತಿಯ ಹೆಸರಿನಲ್ಲಿ ಕೈಗಾರಿಕೆಗಳನ್ನೇ ನಾಶ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಇದರಿಂದ ಕಾರ್ಮಿಕವರ್ಗ ಬೀದಿ ಪಾಲಾಗುತ್ತಿದೆ.

– ಭಾರತದ 92% ರಷ್ಟು ಶ್ರಮಜೀವಿಗಳು ದುಡಿಯುವ ಅಸಂಘಟಿತ ವಲಯದಲ್ಲಿ ಕಾರ್ಮಿಕರಿಗೆ ಈಗಲೂ ಜೀವನ ನಡೆಸಲು ಅಗತ್ಯವಾದಷ್ಟೂ ಸಂಬಳ ಸಿಗುತ್ತಿಲ್ಲ. ಐಎಂಎಫ್-ವಿಶ್ವಬ್ಯಾಂಕ್ ಹೇರಿದ 'ಸಂರಚನಾ ಹೊಂದಾಣಿಕೆ ಕಾರ್ಯಕ್ರಮ'ದ ಹೆಸರಿನಲ್ಲಿ ಸಂಘಟಿತ ವಲಯದಲ್ಲಿನ ಕಾರ್ಮಿಕರನ್ನು ಅಸಂಘಟಿತ ವಲಯಕ್ಕೆ ಎಸೆಯಲಾಗುತ್ತಿದೆ. ಇದರಿಂದ ಅಸಂಘಟಿತ ವಲಯದಲ್ಲಿನ ಕಾರ್ಮಿಕರ ಸಂಖ್ಯೆ ಇನ್ನಷ್ಟು ಹೆಚ್ಚಿದೆಯಷ್ಟೇ ಅಲ್ಲ, ಕುಶಲ ಹಾಗೂ ಅತಿಕುಶಲ ಕಾರ್ಮಿಕರ ಸಂಖ್ಯೆಯೂ ಈ ವಲಯದಲ್ಲಿ ಹೆಚ್ಚುತ್ತಿದೆ. ಆದರೂ ಕನಿಷ್ಟ ಕೂಲಿಯ ಬೇಡಿಕೆ ಈಡೇರುತ್ತಿಲ್ಲ. ಆದ್ದರಿಂದ ಈ ಮೇ ದಿನದಂದು ಭಾರತದ ಕಾರ್ಮಿಕ ವರ್ಗ ಅಗತ್ಯ ಆಧಾರಿತ ಸಂಬಳಕ್ಕಾಗಿ ಬಲಿಷ್ಟ

ಪುಟ 2 ಕ್ಕೆ

ಹೊಸ ಸರಕಾರ ಜನರಲ್ಲಿ ಹೊಸದೊಂದು ವಿಶ್ವಾಸ ಮೂಡಿಸಬೇಕು

– ಸುರ್ಜಿತ್

ಮಾರ್ಚ್ 30ರಂದು ಕಾಂಗ್ರೆಸ್(ಐ) ಅಧ್ಯಕ್ಷ ಸೀತಾರಾಂ ಕೇಸರಿಯವರ ಪತ್ರದಿಂದ ಆರಂಭವಾದ ರಾಜಕೀಯ ಬಿಕ್ಕಟ್ಟು ಐ.ಕೆ.ಗುಜ್ರಾಲ್ ಸಂಯುಕ್ತರಂಗದ ಹೊಸ ಮುಖಂಡರಾಗಿ ಆಯ್ಕೆಯಾಗಿ ಏಪ್ರಿಲ್ 22ರಂದು ಹೊಸ ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಸ್ವಲ್ಪ ತಿಳಿಯಾದಂತಾಗಿದೆ. ಹೊಸ ನಾಯಕನನ್ನು ಆರಿಸುವಲ್ಲಿ ಸಂಯುಕ್ತ ರಂಗದಲ್ಲಿ ಸಮಸ್ಯೆಗಳು ಬಂದವು. ಆದರೆ ಐಕ್ಯತೆಯ ಆಕಾಂಕ್ಷೆಯಿಂದಾಗಿ ಕೊನೆಗೆ ಎಲ್ಲಾ ಘಟಕ ಪಕ್ಷಗಳು ಗುಜ್ರಾಲ್‌ರವರನ್ನು ಆರಿಸಿದವು. ಈ ಪ್ರಕ್ರಿಯೆಯಲ್ಲಿ ಕುಪಿತಗೊಂಡಂತೆ ಕಂಡ ಟಿ.ಎಂ.ಸಿ. ಸರಕಾರ ಸೇರದಿರಲು ನಿರ್ಧರಿಸಿತು. ಹತ್ತು ತಿಂಗಳ ಹಿಂದೆ ಸಂಯುಕ್ತ ರಂಗದ ಪಕ್ಷಗಳಲ್ಲಿ ಒಡಕು ತಂದು ತನ್ನ ಸರಕಾರಕ್ಕೆ ವಿಶ್ವಾಸಮತ ಗಳಿಸಬಹುದು ಎಂದು ಬಿಜೆಪಿ ಭಾವಿಸಿದಂತೆ ಈ ಬಾರಿ ಕಾಂಗ್ರೆಸ್ ಅಂತಹುದೇ ವಿಧಾನದಿಂದ ತಾನೇ ಸರಕಾರ ರಚಿಸಬಹುದುದೆಂದು ಭಾವಿಸಿತು. ಹತ್ತು ತಿಂಗಳ ಹಿಂದಿನ ಬಿಜೆಪಿ ಲೆಕ್ಕಾಚಾರದಂತೆ ಕಾಂಗ್ರೆಸ್ ಲೆಕ್ಕಾಚಾರಗಳೂ ತಲೆಕೆಳಗಾದವು.

ಸರಕಾರ ರಚಿಸುವ ತನ್ನ ದಾವೆಯನ್ನು ಸಂಯುಕ್ತರಂಗ ಹೊಸ ನಾಯಕನನ್ನು ಆರಿಸುವ ಮೊದಲೇ ಕಾಂಗ್ರೆಸ್ ಹಿಂತೆಗೆದುಕೊಳ್ಳಬೇಕಾಯಿತು. ಅತ್ತ ಸಂಯುಕ್ತ ರಂಗ ಸರಕಾರ ಮತ್ತೆ ಸರಕಾರ ರಚಿಸದಂತೆ ಸಾಧ್ಯವಾದ ಎಲ್ಲಾ ಪ್ರಯತ್ನ ನಡೆಸಿದ, ಸಂಯುಕ್ತ ರಂಗಕ್ಕೆ ಮತ್ತೆ ಅವಕಾಶ ಕೊಡಬೇಡಿ, ಅದು ನೀತಿ ಬಾಹಿರ ಎಂದೆಲ್ಲಾ ಹೇಳಿದ ವಾಜಪೇಯಿಯವರಿಗೂ ಗುಜ್ರಾಲ್‌ರವರ ಆಯ್ಕೆಯ ನಂತರ, ನಿರಾಳವೆನಿಸಿತಂತೆ ಏಕೋ? ದೇವೇಗೌಡರನ್ನು ಅಧಿಕಾರದಿಂದಿಳಿಸಲು ಕಾಂಗ್ರೆಸ್ಸಿನ ಕೈಜೋಡಿಸಿದ ಅವರು ಈಗ ದೇವೇಗೌಡರು ಬಲಿಪಶುವಾದರು ಎಂದು ಮೊಸಳೆ ಕಣ್ಣೀರು ಹಾಕುತ್ತಿದ್ದಾರೆ.

ರಾಜಕೀಯ ಅಸ್ಥಿರತೆ ತೋರಿದ ಅವಧಿ

ನಿಜಕ್ಕೂ ಈ ಮೂರು ವಾರಗಳ ಅವಧಿ ಬಂಡವಾಳಶಾಹಿ ಭೂಮಾಲೀಕರ ಪಕ್ಷಗಳಲ್ಲಿನ ಅಂತರ್ವೈರುಧ್ಯವನ್ನು ಬಯಲಿಗೆಳೆದಿದೆ; ದೇಶವನ್ನು ತಟ್ಟಿರುವ ರಾಜಕೀಯ ಅಸ್ಥಿರತೆಯನ್ನು ಸ್ಪಷ್ಟವಾಗಿ ತೋರಿರುವ ಅವಧಿ ಇದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಏಪ್ರಿಲ್ 22ರಂದು ನಡೆದ ವಿಶ್ವಾಸಮತದ ಮೇಲಿನ ಚರ್ಚೆ ಏಪ್ರಿಲ್ 11ರಂದು ದೇವೇಗೌಡರು ಕೇಳಿದ ವಿಶ್ವಾಸಮತದ ಮೇಲಿನ ಚರ್ಚೆಗಿಂತ ಭಿನ್ನವಾಗಿತ್ತು ಎಂದೂ ಸುರ್ಜಿತ್ ಅಭಿಪ್ರಾಯಪಡುತ್ತಾರೆ. ಏಪ್ರಿಲ್ 22ರಂದು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಸಂಯುಕ್ತ ರಂಗದ ಮೇಲೆ ಕೆಂಡ ಕಾರಿದವು. ಕಾಂಗ್ರೆಸ್ಸಿನ ಸಂತೋಷ್ ಮೋಹನ್ ದೇಬ್ ದೇವೇಗೌಡರ ಸರಕಾರಕ್ಕೆ ಬೆಂಬಲ ಹಿಂತೆಗೆದುಕೊಂಡ ತನ್ನ ಮುಖಂಡರ ಕ್ರಮವನ್ನು ಮತ್ತೆ ಸಮರ್ಥಿಸಿಕೊಂಡು ಅವರಿಂದ ಏನಾದರೂ ಗಿಟ್ಟಿಸಬಹುದೆಂದು ನಿರೀಕ್ಷಿಸಿದಂತಿತ್ತು. ಅತ್ತ ಬಿಜೆಪಿ ಸಂಯುಕ್ತ ರಂಗದ ಮೇಲೆ ಮಾಡಿದ ಮಾತಿನ ಪ್ರಹಾರದಲ್ಲಿ ಸಿಪಿಐ(ಎಂ) ಅದರ ಮುಖ್ಯ ಗುರಿಯಾಗಿತ್ತು. ಇದು ಸಹಜವೇ. ಏಕೆಂದರೆ ಕೋಮುವಾದದ ವಿರುದ್ಧ ನಿರಂತರ ಹೋರಾಡುತ್ತಾ ಬಿಜೆಪಿಯ ಪುಷ್ಕೃತ್ಯಗಳನ್ನು ಹೊರಗೆಳೆಯುತ್ತಾ ಬಂದಿರುವುದು ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ತಾನೇ? ಈ ಚರ್ಚೆಯಲ್ಲಿ ಸಿಪಿಐ(ಎ)ನ ಮುಖಂಡ ಸೋಮನಾಥ ಚಟರ್ಜಿಯವರು "13 ದಿನಗಳ ಆಳ್ವಿಕೆಯಲ್ಲಿ ನೀವು ಮಾಡಿದ್ದೇನು? ವಿಶ್ವಾಸಮತ ಗೆಲ್ಲುವುದಿಲ್ಲ ಎಂದು ಗೊತ್ತಿದ್ದೂ ವಿದೇಶೀ ಬಹುರಾಷ್ಟ್ರೀಯ ಕಂಪನಿ ಎನ್ರೋನ್ ಯೋಜನೆಗೆ ಅಂಗೀಕಾರ ನೀಡಿದ್ದು ತಾನೇ?" ಎಂದು ಬಿಜೆಪಿಯ ಹುಸಿ ರಾಷ್ಟ್ರವಾದದ ಹೂರಣವನ್ನು ಮತ್ತೊಮ್ಮೆ ಬಿಚ್ಚಿಟ್ಟರು. ಇಂತಹವರು ಸರಕಾರ ರಚಿಸಲು ಮುಂದೆಯೂ ಸಿಪಿಐ(ಎಂ) ಖಂಡಿತಾ ಬಿಡುವುದಿಲ್ಲ "ನೀವು ಮಾಜಿ ಪ್ರಧಾನಿಯಾಗಿಯೇ ಇರಬೇಕು" ಎಂದು ಅವರು ಸಾರಿದರು.

ಅಯೋಧ್ಯಾ, ಕಾಶಿ, ಮಥುರಾ ಬಗ್ಗೆ ಹಲವು ಸದಸ್ಯರು ಎತ್ತಿದ ಪ್ರಶ್ನೆಗಳಿಗೆ ವಾಜಪೇಯಿಯವರು ಉತ್ತರಿಸಲಾಗದೇ ಹೋದುದು ಕೂಡಾ ಈ ಚರ್ಚೆಯಲ್ಲಿ ಸ್ಪಷ್ಟವಾಗಿ ಕಂಡು ಬಂತು. ಬಾಬ್ರಿ ಮಸೀದಿ ಧ್ವಂಸದ ಬಗ್ಗೆ ಮತ್ತೆ ಮತ್ತೆ ಕೇಳಿದಾಗ ಅದೊಂದು ದುರ್ಘಟನೆ ಎಂದು ಹೇಳಿದ ಮರುಕ್ಷಣವೇ ಅಲ್ಲಿ ವಿವಾದವೊಂದಿತ್ತು, ಇದನ್ನು ಎಲ್ಲರೂ ಒಪ್ಪಿದ್ದಾರೆ ಎಂದು ಒಣ ತರ್ಕಕ್ಕಿಳಿದರು. ಇಲ್ಲವಾದರೆ ಪೂಜಾ ಸ್ಥಳಗಳ ಕುರಿತಾದ ಮಸೂದೆಯನ್ನು ಅಂಗೀಕರಿಸಿದಾಗ ಅದರಿಂದ ಅಯೋಧ್ಯಾ ಕಟ್ಟಡಗಳಿಗೇಕೆ ವಿನಾಯ್ತಿ ನೀಡಲಾಯಿತು ಎಂದು ಒಂದು ಗಹನ ವಾದವೊಡ್ಡುವಂತೆ ಕೇಳಿದರು. ಇದು ಅವರ ಅಜ್ಞಾನದ ಅಥವಾ ಠಕ್ಕುತನದ ಪ್ರದರ್ಶನವೆಂಬುದು ಸ್ಪಷ್ಟ. ಏಕೆಂದರೆ ಆ ಕಾಯ್ದೆಯನ್ನು ಅಂಗೀಕರಿಸುವಾಗ ಆಗಲೇ ಬಾಬ್ರಿ ಮಸೀದಿ/ರಾಮಜನ್ಮ ಭೂಮಿ

ಪುಟ 7 ಕ್ಕೆ

ಕೊಚ್ಚಿಯಲ್ಲಿ ಸಿಐಟಿಯು 9ನೇ ರಾಷ್ಟ್ರ ಸಮ್ಮೇಳನ

ದೇಶದ ಎಲ್ಲಾ ಭಾಗಗಳಿಂದ ಬಂದ 2500 ಪ್ರತಿನಿಧಿಗಳು ಭಾಗವಹಿಸಿದ್ದ ಸಿಐಟಿಯುನ 9ನೇ ಅಖಿಲ ಭಾರತ ಸಮ್ಮೇಳನ ಕೇರಳ ರಾಜ್ಯದ ಕೊಚ್ಚಿಯಲ್ಲಿ ವಿ.ಜೆ.ಭಾಸ್ಕರನ್ ನಗರದಲ್ಲಿ ಭಾರೀ ವಿಜೃಂಭಣೆಯಿಂದ ಏಪ್ರಿಲ್ 21ರಂದು ಆರಂಭವಾಯಿತು. ಸಿಐಟಿಯು ಅಧ್ಯಕ್ಷ ಇ.ಬಾಲಾನಂದನ್‌ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ "ಇನ್ನು ಸ್ವಲ್ಪವೂ ಸಮಯ ವ್ಯರ್ಥ ಮಾಡದೆ ವಿಶ್ವಬ್ಯಾಂಕ್-ಐಎಂಎಫ್ ಹೇರಿದ ಆರ್ಥಿಕ ಧೋರಣೆಗಳನ್ನು ಹಿಮ್ಮೆಟ್ಟಿಸಲು ಒಂದಾಗೋಣ" ಎಂದು ದೇಶದ ಎಲ್ಲಾ ಕಾರ್ಮಿಕ ಸಂಘಟನೆಗಳಿಗೆ ಕರೆ ನೀಡುವುದರೊಂದಿಗೆ ಸಮ್ಮೇಳನದ ಕಲಾಪಗಳು ಆರಂಭವಾದವು.

"ಬದುಕಿನ ಮೇಲಿನ ಧಾಳಿಗಳನ್ನೆದುರಿಸಲು ಕಾರ್ಮಿಕ ವರ್ಗದ ಐಕ್ಯ ಕಾರ್ಯಾಚರಣೆ ಅತ್ಯಗತ್ಯ"

ಸಮ್ಮೇಳನದ ಅಧ್ಯಕ್ಷ ಭಾಷಣ "ಮೂಡಿ ಬರುತ್ತಿರುವ ಹೊಸ ವಿಶ್ವ ವ್ಯವಸ್ಥೆ ಹಾಗೂ ಭಾರತದಲ್ಲಿನ ಪರಿಸ್ಥಿತಿಗಳ ಬಗ್ಗೆ ಗಮನ ಕೇಂದ್ರೀಕರಿಸುತ್ತಾ ವಿಶ್ವಾದ್ಯಂತ ದುಡಿಯುವ ಜನರ ಕೆಲಸ ಮತ್ತು ಬದುಕಿನ ಮೇಲೆ ಹೊಸ-ಹೊಸ ಸಾಮ್ರಾಜ್ಯಶಾಹಿ ಧಾಳಿಗಳ ವಿರುದ್ಧ ಅಂತರ್ರಾಷ್ಟ್ರೀಯ ರಂಗದಲ್ಲೂ, ದೇಶದಲ್ಲೂ ಕಾರ್ಮಿಕ ವರ್ಗ ಐಕ್ಯ ಕಾರ್ಯಾಚರಣೆಗಿಳಿಯಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಕಾರ್ಮಿಕ ಸಂಘಗಳ ನಡುವೆ ಐಕ್ಯತೆಯನ್ನು ವ್ಯಾಪಕಗೊಳಿಸಲು ಎಲ್ಲಾ ಕಾರ್ಮಿಕ ಸಂಘಗಳ ಮಹಾ ಒಕ್ಕೂಟ ರಚಿಸಬೇಕೆಂಬ ಸಿಐಟಿಯುನ ಪ್ರಸ್ತಾಪವನ್ನು ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಗಹನ ಪರಿಶೀಲಿಸಬೇಕು ಎಂದು ಬಾಲಾನಂದನ್ ಮತ್ತೊಮ್ಮೆ ವಿನಂತಿಸಿದರು.

ಅಪರಾಹ್ನ 2 ಗಂಟೆಗೆ ಇ.ಬಾಲಾನಂದನ್ ಸಿಐಟಿಯುನ ಕೆಂಬಾವುಟವನ್ನು ನೆರೆದ ಮುಖಂಡರು ಹಾಗೂ ಕಾರ್ಮಿಕರ ಸಮ್ಮುಖ ಹಾರಿಸುವುದರೊಂದಿಗೆ ಸಮ್ಮೇಳನ ಆರಂಭವಾಯಿತು. ಕೆಂಬಾವುಟ ಆಕಾಶದಲ್ಲಿ ಹಾರಾಡಲಾರಂಭಿಸಿದಂತೆ ಘೋಷಣೆಗಳು, ಮುಗಿಲು ಮುಟ್ಟಿದವು. ಕ್ರಾಂತಿಕಾರಿ ಹಾಡುಗಳು ಎಲ್ಲರ ಮನಗಳಲ್ಲಿ ಹೊಸ ಕೆಚ್ಚನ್ನು ಮೂಡಿಸಿದವು. ನಂತರ ಹುತಾತ್ಮರಿಗೆ ಹೂ ನಮನ ಅರ್ಪಿಸಿದ ನಂತರ ಸಮ್ಮೇಳನಕ್ಕೆಂದು ನಿರ್ಮಿಸಿದ್ದ ಬೃಹತ್ ಪೆಂಡಾಲಿನಲ್ಲಿ ಪ್ರತಿನಿಧಿಗಳೆಲ್ಲಾ ನೆರೆದರು. ಕೇರಳ ಮಾದರಿಯಲ್ಲಿ ತೆಂಗಿನ ಸೋಗೆಗಳೊಂದಿಗೆ ಇಳಿಜಾರು ಮಾಡಿಗಳಂತೆ ನಿರ್ಮಿಸಲಾದ

ಪುಟ 6 ಕ್ಕೆ



ಮೇ ದಿನ 1997

ಆಂದೋಲನ, ಹೋರಾಟ ನಡೆಸಬೇಕು ಎಂದು ಸಿಐಟಿಯು ಕರೆ ನೀಡಿದೆ.

ಮೇ ದಿನದ ಸಂದರ್ಭದಲ್ಲಿ ಹಿಂದಿನ ಒಂದು ವರ್ಷದಲ್ಲಿ ವಿಶ್ವದಲ್ಲಿ, ಭಾರತದಲ್ಲಿ ಕಾರ್ಮಿಕ ರಂಗದಲ್ಲಿನ, ಕೈಗಾರಿಕಾರಂಗದಲ್ಲಿನ ಬೆಳವಣಿಗೆಯನ್ನು ಪರಾಮರ್ಶಿಸಿ ತನ್ನ ಗುರಿ ಸಾಧನೆಯಲ್ಲಿ ಕಾರ್ಮಿಕ ವರ್ಗದ ಮುಂದಿನ ಕಾರ್ಯಕ್ರಮದ ಬಗ್ಗೆ ಪರಿಶೀಲಿಸುವ ಸಿಐಟಿಯು ಮೇ ದಿನ ಪ್ರಣಾಳಿಕೆ ಕಳೆದ ವರ್ಷದ ಫ್ರೆಂಚ್, ದಕ್ಷಿಣ ಕೋರಿಯಾ, ಕೊರಿಯಾದ ಕಾರ್ಮಿಕರ ಬೃಹತ್ ಹೋರಾಟಗಳು ಮತ್ತಿತರ ಹೋರಾಟಗಳನ್ನು ನೆನಪಿಸಿಕೊಂಡಿದೆ. ಭಾರತದ 50ನೇ ಸ್ವಾತಂತ್ರ್ಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಬರುವ ಈ ಮೇ ದಿನದಂದು ಸ್ವತಂತ್ರ ಭಾರತದ ಕಾರ್ಮಿಕರ ಪರಿಸ್ಥಿತಿಯ ಬಗ್ಗೆಯೂ ವಿಮರ್ಶೆ ನಡೆಸಿದೆ.

ನವ ವಸಾಹತುಶಾಹಿಯ ವಿರುದ್ಧ ಹೋರಾಟ

ವಿಶ್ವಾದ್ಯಂತ ಕಾರ್ಮಿಕರು ಸಾಮ್ರಾಜ್ಯಶಾಹಿ ತಮ್ಮ ಕಾರ್ಮಿಕ ಸಂಘಟನೆಯ ಹಕ್ಕುಗಳು ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆಯುತ್ತಿರುವ ಸಾಮ್ರಾಜ್ಯಶಾಹಿ ಧಾಳಿಗಳನ್ನು ಪ್ರತಿರೋಧಿಸುತ್ತಿದ್ದಾರೆ. ಭಾರತದಂತಹ ಮೂರನೇ ಜಗತ್ತಿನ ದೇಶಗಳ ಕಾರ್ಮಿಕ ವರ್ಗ ಇತರ ಶ್ರಮಜೀವಿ ಸಮೂಹಗಳೊಂದಿಗೆ ಸೇರಿಕೊಂಡು ಸಾಮ್ರಾಜ್ಯಶಾಹಿ ಹೇರಿದ ಜಾಗತೀಕೃತ ಆರ್ಥಿಕ ವ್ಯವಸ್ಥೆಯಿಂದ ತಮ್ಮ ದೇಶಗಳ ಸ್ವಾವಲಂಬನೆ ಹಾಗೂ ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳಲು ಹೋರಾಡುತ್ತಿದ್ದಾರೆ.

ಬಂಡವಾಳಶಾಹಿ ಪದ್ಧತಿಯ ತೀವ್ರ ಬಿಕ್ಕಟ್ಟಿನಿಂದ ಹೇಗಾದರೂ ಪಾರಾಗಲು ಸಾಮ್ರಾಜ್ಯಶಾಹಿಗಳು ಮೂರನೇ ಜಗತ್ತಿನ ದೇಶಗಳ ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳುವ ತೀವ್ರ ಬೇಟೆಯಲ್ಲಿದ್ದಾರೆ. ಈ ದೇಶಗಳನ್ನು ತಮ್ಮ ನವ ವಸಾಹತುಶಾಹಿ ಬಲೆಯಲ್ಲಿ ಸಿಲುಕಿಸಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಪ್ರತಿರೋಧ ಒಡ್ಡುತ್ತಿರುವ ದುಡಿಯುವ ಜನರಿಗೆ ಸಿಐಟಿಯು 1997 ರ ಮೇ ದಿನದ ಸಂದರ್ಭದಲ್ಲಿ ಹಾರ್ದಿಕ ಸೌಹಾರ್ದವನ್ನು ವ್ಯಕ್ತಪಡಿಸಿದೆ.

ಕಳೆದ ಒಂದು ವರ್ಷದಲ್ಲಿ ವಿಶ್ವಾದ್ಯಂತ ಜಾಗತೀಕರಣಗೊಂಡ ಆರ್ಥಿಕದ ದುಷ್ಪರಿಣಾಮಗಳ ವಿರುದ್ಧ, ಅದರಿಂದ ಉಂಟಾದ ತೊಂದರೆಗಳು, ವಿಪರೀತ ನಿರುದ್ಯೋಗ, ಕೋಟ್ಯಾಂತರ ಜನರಿಗೆ ಉದ್ಯೋಗ ಭದ್ರತೆಯ ನಷ್ಟ, ನಿಲ್ಲದ ಬೆಲೆಯೇರಿಕೆ ಇವೆಲ್ಲವುಗಳ ವಿರುದ್ಧ ಕಾರ್ಮಿಕವರ್ಗದ ಹೋರಾಟಗಳ ಪ್ರಮಾಣವೂ ಹೆಚ್ಚಿದೆ. ವಿಶ್ವ ಆರ್ಥಿಕ ರಂಗದಲ್ಲಿ ಹೆಚ್ಚುತ್ತಿರುವ ಅಸಮಾನತೆ, ಕೆಲವೇ ಗುತ್ತೇದಾರಿಗಳಿಗೆ ಭಾರಿ ಲಾಭ, ಸಹಸ್ರ ಕೋಟಿಗಟ್ಟಲೆ ಜನರಿಗೆ ಬಡತನದ ಪರಿಸ್ಥಿತಿಯ ವಿರುದ್ಧ ಇಂತಹ ಹೋರಾಟಗಳು ಬಲಗೊಳ್ಳುತ್ತಿವೆ. ಹಿಂದಿನ ಸೋವಿಯೆತ್ ಒಕ್ಕೂಟದಲ್ಲಿ ಬಂಡವಾಳಶಾಹಿ ಮಾನವ ಜೀವನದ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ನೀಡದು ಎಂದು ಸ್ಪಷ್ಟವಾಗುತ್ತಿದೆ. ಇತ್ತ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಕ್ರಾಂತಿಯ ಫಲಗಳನ್ನು ಬಂಡವಾಳವೇ ಕಿತ್ತುಕೊಳ್ಳುವ ಪ್ರಸಂಗ. ಬಂಡವಾಳಶಾಹಿ ಮಾನವ ಕುಲಕ್ಕೆ ಒಂದು ದೊಡ್ಡ ಪಿಡುಗು, ಶೋಷಣೆ ಕೊನೆಗೊಳಿಸಲು ಸಮಾಜವಾದವೇ ಪರ್ಯಾಯ ಅಗತ್ಯ ಎಂಬುದನ್ನು ಮತ್ತೊಮ್ಮೆ ಎತ್ತಿ ತೋರಿದೆ ಎಂದು ಸಿಐಟಿಯು ಪ್ರಣಾಳಿಕೆ ಹೇಳಿದೆ.

ಸ್ವಾತಂತ್ರ್ಯದ ಡಂಗುರದೊಂದಿಗೆ ಸಾರ್ವಭೌಮತೆಯ ಒತ್ತೆ

ಸ್ವಾತಂತ್ರ್ಯದ 50ನೇ ವರ್ಷದಲ್ಲಿ ಭಾರತದಲ್ಲಿ ಆಳುವ ವರ್ಗಗಳು ಸ್ವಾತಂತ್ರ್ಯದ ಡಂಗುರ ಹೊಡೆಯುತ್ತಲೇ ದೇಶದ ಆರ್ಥಿಕ ಸಾರ್ವಭೌಮತೆಯನ್ನು, ಸ್ವಾತಂತ್ರ್ಯದ ಸಾರಸತ್ವವನ್ನೇ ನಾಶ ಮಾಡುತ್ತಿವೆ. ಉದಾರೀಕರಣದ ನೀತಿಗಳ ಮೂಲಕ, ಬಹುರಾಷ್ಟ್ರೀಯ ಕಂಪನಿಗಳ ಮುಂದೆ ಮೊಣಕಾಲೂರಿವೆ. ಕಾಂಗ್ರೆಸ್(ಐ) ಆರಂಭಿಸಿದ ಈ ನೀತಿಗಳನ್ನು ಸಂಯುಕ್ತ ರಂಗದ ಸರಕಾರ ಮುಂದುವರಿಸುತ್ತಿದೆ. ಸೋವಿಯತ್ ಒಕ್ಕೂಟದ ನೆರವಿಂದ ಕಟ್ಟಿದ ಸ್ವಾವಲಂಬೀ ಆರ್ಥಿಕದ ಆಧಾರವಾದ ಸಾರ್ವಜನಿಕ ವಲಯವನ್ನು ಕಳಚಿ ಹಾಕಲಾಗುತ್ತಿದೆ. ಭಾರತ ಬೌದ್ಧಿಕ ಆಸ್ತಿ ಹಕ್ಕಿಗೂ ಸಂಚಕಾರ ಬಂದಿದೆ. ಸಣ್ಣ, ಪುಟ್ಟ ಉದ್ದಿಮೆಗಳ ವಲಯವನ್ನು ದೇಶೀ-ವಿದೇಶೀ ಗುತ್ತೇದಾರಿಗಳಿಗೆ ತೆರೆದಿಡಲಾಗಿದೆ. ಲಕ್ಷಾಂತರ ಕಾರ್ಮಿಕರ ಉದ್ಯೋಗ ಭದ್ರತೆಯನ್ನು ಕಸಿದುಕೊಳ್ಳಲಾಗಿದೆ. ನಿರುದ್ಯೋಗ ನಗರಗಳಲ್ಲಿ 4 ಕೋಟಿ, ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ 8 ಕೋಟಿ. ನಿರುದ್ಯೋಗಿಗಳ ಸೇನೆ ಬೆಳೆಯುತ್ತಲೇ ಇದೆ. ವಿದ್ಯಾರ್ಥಿ-ಯುವಜನ ಎಂಬುದು ಉದ್ಯೋಗ ರಹಿತ ಭವಿಷ್ಯದ ಕಾರ್ಗತ್ತಲು. ಶಿಕ್ಷಣ ಉಚ್ಛ ತಂತ್ರಜ್ಞಾನದ ಕ್ಷೇತ್ರದಲ್ಲಿ ಸಮಾಜದ ಉಚ್ಛ ವಿಭಾಗಗಳವರಿಗೇ ಸೀಮಿತವಾಗುತ್ತಿದೆ. ದುಡಿಯುವ ಮಹಿಳೆಯರು ಮತ್ತಷ್ಟು ಅಂಚಿಗೆ ತಳ್ಳಲ್ಪಡುತ್ತಿದ್ದಾರೆ.

1997ರ ಮೇ ದಿನದಂದು ಭಾರತದ ಒಂದು ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸುವ ಜವಾಬ್ದಾರಿ ಕಾರ್ಮಿಕ ಆಂದೋಲನದ ಮೇಲಿದೆ. ಒಂದೆಡೆ ಹೊಸ ಆರ್ಥಿಕ ನೀತಿಯನ್ನು ವಿರೋಧಿಸುವ ವೇದಿಕೆಯನ್ನು ವಿಶಾಲಗೊಳಿಸಬೇಕಾದರೆ, ಬಲಪಡಿಸಬೇಕಾದರೆ ಇನ್ನೊಂದೆಡೆ ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳನ್ನು ಸೋಲಿಸಬೇಕಾಗಿದೆ ಎಂದು ನೆನಪಿಸಿರುವ ಸಿಐಟಿಯು ಪ್ರಣಾಳಿಕೆ ಈ ಎರಡೂ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಕಾರ್ಮಿಕ ಸಂಘಗಳ ಐಕ್ಯತೆಯನ್ನು ಇನ್ನಷ್ಟು ಕ್ರೋಢೀಕರಿಸುವ ಪ್ರತಿಜ್ಞೆ ತೊಡಬೇಕಾಗಿದೆ ಎಂದು ಹೇಳಿದೆ. ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಹಾಗೂ ರಾಷ್ಟ್ರೀಯ ಒಕ್ಕೂಟಗಳು ಒಂದು ಮಹಾ ಒಕ್ಕೂಟ ರಚಿಸುವ ಬಗ್ಗೆ ಪ್ರಜಾರಾಂದೋಲನವನ್ನು ಈ ಮೇ ದಿನದಂದು ಆರಂಭಿಸಬೇಕು ಎಂದು ಸಿಐಟಿಯು ಪ್ರಣಾಳಿಕೆ ಕರೆ ನೀಡಿದೆ. ಇದರೊಂದಿಗೇ ರೈತಾಪಿ ಜನಗಳೊಂದಿಗೆ ಹೋರಾಟದಲ್ಲಿ ಮೈತ್ರಿಯನ್ನು ಬೆಸೆಯಬೇಕು, ಅಂತರ್ರಾಷ್ಟ್ರೀಯ ಐಕ್ಯತೆಯನ್ನು ಕ್ರೋಢೀಕರಿಸಿ ಸಾಮ್ರಾಜ್ಯಶಾಹಿಯ ವಿರುದ್ಧ ಮತ್ತು ಜಾಗತೀಕರಣಗೊಂಡ ಆರ್ಥಿಕದ ವಿರುದ್ಧ ಹೋರಾಟವನ್ನು ಮುಂದೊಯ್ಯಬೇಕು, ಜನ ಸಾಮಾನ್ಯರ ಹಿತಾಸಕ್ತಿಗಳನ್ನು ರಕ್ಷಿಸಬೇಕು ಎಂದು ಸಿಐಟಿಯು ಕರೆ ನೀಡಿದೆ. □


ಫ್ರೆಂಚ್ ಕಂಪೆನಿ ರೆನಾಲ್ಟ್‌ನ ಘಟಕವೊಂದನ್ನು ಮುಚ್ಚಿರುವುದರ ವಿರುದ್ಧ ಬೆಲ್ಜಿಯನ್ ಕಾರ್ಮಿಕರ ಪ್ರತಿಭಟನೆ


ಮುಷ್ಕರನಿರತ ಫ್ರೆಂಚ್ ನೌಕರರ ವರ್ಗ ಹೋರಾಟದ ರಣಾಂಗಣ

ಮೇ ದಿನದ ಸಂದರ್ಭದಲ್ಲಿ ಮತ್ತೊಮ್ಮೆ ಸ್ಮರಣೆ

ಹೆಜ್ಜಾಲ ಗೋಲೀಬಾರ್-ಅನ್ಯಾಯಪೂರ್ಣ ವ್ಯವಸ್ಥೆಯ ಪ್ರತೀಕ

ಮೇ ದಿನವೆಂದರೆ ಬಂಡವಾಳಿಗರ ಶೋಷಣೆ. ಅನ್ಯಾಯ, ದಮನದ ವಿರುದ್ಧ ಹೋರಾಟದಲ್ಲಿ ಶ್ರಮ ಜೀವಿಗಳ ಅಂತರ್ರಾಷ್ಟ್ರೀಯ ಸೌಹಾರ್ದತೆಯನ್ನು ನೆನಪಿಸಿಕೊಳ್ಳುವ ದಿನ. ಈ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದ ಸಂಗಾತಿಗಳನ್ನು ಸ್ಮರಿಸಿಕೊಳ್ಳಬೇಕಾದ ದಿನ ಕೂಡಾ.

ಹೆಸರು ಹೆಜ್ಜಾಲ. ಆದರೆ ಪುಟ್ಟ ಹಳ್ಳಿ. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿದ್ದರೂ ಪಟ್ಟಣದ ಗಾಳಿ ಬೀಸಿಲ್ಲ ಎಂದೇ ಹೇಳಬಹುದು. ಆದ್ದರಿಂದಲೇ ಜನ ಮುಗ್ಧರು. ಮುಗ್ಧ ಜನರ ಶೋಷಣೆ ಸುಲಭ. ಅವರ ಬೇಡಿಕೆಗಳು ಕಡಿಮೆ. ಅದನ್ನು ಬಳಸಿ ಕೊಂಡು ಶ್ರೀಮಂತರಾಗಬೇಕೆಂಬುದೇ ಕೆಲವರ ಕನಸು. ಅದಕ್ಕೆಂದೇ ಕೈಗಾರಿಕೆಗಳ ಸ್ಥಾಪನೆ. ಅದರಲ್ಲೊಂದು ವಳ್ಳಿಯಪ್ಪನವರ ಜವಳಿ ಕಾರ್ಖಾನೆ.

ಹೆದ್ದಾರಿಯಲ್ಲಿದ್ದರೂ 'ಹಳ್ಳಿ'ಯ ಭೂಮಿಗೆ ಬೆಲೆ ಕಡಿಮೆ. ಅದನ್ನು ಕಬಳಿಸಿದ ಶ್ರೀವಳ್ಳಿಯಪ್ಪ ಮುಗ್ಧ ಕಾರ್ಮಿಕರಿಗೆ ದಿನಕೂಲಿ ಕೊಟ್ಟಿರುವುದು ರೂ. 15 ರಿಂದ 20 ಮಾತ್ರ. 600 ಜನ ಕೆಲಸಗಾರರಿದ್ದರೂ ಅರ್ಧಕ್ಕಿಂತಲೂ ಹೆಚ್ಚು ಜನರು ಹಂಗಾಮಿ. ರಜೆ, ವೈದ್ಯಕೀಯ, ಭವಿಷ್ಯ ನಿಧಿ-ಯಾವುದೇ ಸೌಲಭ್ಯಗಳಿಲ್ಲ. ಜತೆಯಲ್ಲಿ ರವಿವಾರ, ಸಾರ್ವತ್ರಿಕ ರಜಾ ದಿನಗಳಲ್ಲಿ ಸಂಬಳವಿಲ್ಲ.

ಆದರೆಮಾಲಿಕವಳ್ಳಿಯಪ್ಪನವರಲಾಭ ಹೆಚ್ಚಾಗುತ್ತಲೇ ಹೋಯಿತು. ಆದ್ದರಿಂದ ಸರಕಾರದಲ್ಲಿಕಚೇರಿಗಳಲ್ಲಿಅವರಪ್ರಭಾವವೂಕೂಡಾ.ಜತೆಯಲ್ಲಿ ಪ್ರತಿಷ್ಠಿತ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷಗಿರಿ.

ಇತ್ತ ಸಿಐಟಿಯು ಸಂಘಟನೆಯ ಕೆಂಪು ಬಾವುಟದಡಿಯಲ್ಲಿ ಶೋಷಣೆಯ ವಿರುದ್ಧ, ಮಾಲಿಕರ ದೌರ್ಜನ್ಯ, ಕಾರ್ಮಿಕರ ಸ್ಥಿತಿಗತಿ ಉತ್ತಮಗೊಳಿಸುವುದಕ್ಕೆ ಹೋರಾಡಬೇಕೆಂದು ಕಹಳೆಊದಿದಾಗ ಕುಂಬಳಗೋಡು ಪ್ರದೇಶದಲ್ಲಿ ಸಾವಿರಾರು ಕಾರ್ಮಿಕರು ಒಂದಾದರು. ಶೋಷಿತ ಜನರೆಲ್ಲಾ ಒಂದಾಗಲೇ ಬೇಕೆಂದು ಪಣ ತೊಟ್ಟರು.

ಹೆಜ್ಜಾಲದಲ್ಲಿರುವ ವಳ್ಳಿಯಪ್ಪನವರು ಇದ್ಯಾವುದಕ್ಕೂ ಅವಕಾಶ ನೀಡಲಿಲ್ಲ. ತಮ್ಮ ಬಾಡಿಗೆ ಜನಗಳ ಮೂಲಕ ಸಿಐಟಿಯು ಸಂಘ ಬರದಂತೆ ನೋಡಿಕೊಂಡರು. ಸ್ಥಳೀಯ ಮುಖಂಡರಾದ ಕಾಂ.ರಾಜಣ್ಣ, ತೋಪಯ್ಯ ಮೊದಲಾದವರು ಸೇರಿದಂತೆ ಈಗ ಸಿಐಟಿಯು ಜಿಲ್ಲಾಧ್ಯಕ್ಷರಾಗಿರುವ ಕಾಂ.ಕೆ.ಎಸ್. ಸುಬ್ರಮಣ್ಯನವರ ಮಾರ್ಗದರ್ಶನದಲ್ಲಿ 1993ರಲ್ಲಿ ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಮತ್ತು ಅಲೈಡ್ ಕಂಪನೀಸ್ ವರ್ಕರ್ಸ್ ಯೂನಿಯನ್ ಸ್ಥಾಪನೆಯಾಯಿತು. ಹೆಚ್ಚು ಕಡಿಮೆ ಎಲ್ಲಾ ನೌಕರರೂ ಸಂಘದ ಸದಸ್ಯರಾದರು.

ಲಾಭಕ್ಕೆ ತಕ್ಕಂತೆ ವೇತನ ವೃದ್ಧಿ, ಹಂಗಾಮಿ ಕೆಲಸಗಾರರನ್ನು ಖಾಯಂ ಮಾಡುವುದು ಇನ್ನಿತರ ಬೇಡಿಕೆಗಳನ್ನು ಮುಂದಿಟ್ಟರು. ಆದರೆ ವಳ್ಳಿಯಪ್ಪನವರಿಗೆ ಇದನ್ನು ಸಹಿಸಲಾಗಲಿಲ್ಲ. ಕೆಲವು ಹಿಂಬಾಲಕರ ಮೂಲಕ ತನ್ನದೇ ಆದ ಸಂಘವನ್ನು ಸ್ಥಾಪಿಸಿದರು. ಬೇಡಿಕೆಗಳ ಪಟ್ಟಿಯೇ ಇಲ್ಲದೆ ನೌಕರ ವಿರೋಧಿ ಒಪ್ಪಂದವನ್ನು ಮಾಡಿಸಿಬಿಟ್ಟರು.

ಆದರೆ ಕಾರ್ಮಿಕರು ಈ ಕುತಂತ್ರಕ್ಕೆ ಬಲಿಬೀಳಲಿಲ್ಲ. ಮುಗ್ಧರಾದರೂ ನ್ಯಾಯಕ್ಕಾಗಿ ಹೋರಾಡುವ ಅಪರಿಮಿತ ಆಸಕ್ತಿಯುಳ್ಳ ಕಾರ್ಮಿಕರು ಕೆಂಪು ಬಾವುಟದಡಿಯಲ್ಲಿ ಹೋರಾಟವನ್ನು ಮುಂದುವರಿಸಿದರು. ಮಾಲೀಕರ ದರ್ಪದ ವಿರುದ್ಧ ಒಂದಾಗಿ ಶಾಂತಿಯುತವಾಗಿ ಹೋರಾಡಲೇಬೇಕೆಂದು ಪ್ರತಿಜ್ಞೆ ಮಾಡಿದರು.

ಅತ್ತ ಮಾಲಿಕರ ಇನ್ನೊಂದು ಕಾರ್ಖಾನೆಯಲ್ಲಿ ಸಿಐಟಿಯು ಸಂಘಟನೆ ಮಾಡಿದಾಗ ಗೂಂಡಾಗಳ ಸಹಾಯದಿಂದ ಗೋಡೌನಿಗೆ ಬೆಂಕಿ ಇಡಿಸಿ ಸಿಐಟಿಯು ಸಂಘದವರು ಮಾಡಿಸಿದರೆಂದು ಪ್ರಚಾರ ನೀಡಿ ಸಂಘ ಮುರಿಯಲೆತ್ನಿಸಿದರು. ಅದರಲ್ಲೂ ಯಶಸ್ಸು ಕಾಣದಿದ್ದಾಗ ಸಿಐಟಿಯು ಜತೆ ಮಾತುಕತೆ ನಡೆಸುವುದಿಲ್ಲ ಎಂದು ಹಠ ಹಿಡಿದರು.

ಈಹಟವೇ3ಅಮಾಯಕಬಡ ಕುಟುಂಬದ ಬಾಳಿಗೆ ಕುತ್ತಾಯಿತು. ವಳ್ಳಿಯಪ್ಪನ ಎಂಜಲಿಗೆ ಕೈ ಒಡ್ಡಿದ ಪೋಲೀಸರ ಗುಂಡಿಗೆ ರಕ್ತದೋಕುಳಿ ಹರಿಯಿತು.

ಮಾರ್ಚ್ 13, 1997. ಒಂದು ಲಕ್ಷ ಸದಸ್ಯತ್ವವನ್ನು ಹೊಂದಿ ಬಡ, ಮಧ್ಯಮ ವರ್ಗದ ಕಾರ್ಮಿಕರಿಗಾಗಿ ಮತ್ತು ನೌಕರರಿಗಾಗಿ ಹಗಲಿರುಳು ದುಡಿಯುತ್ತಿರುವ ಸಿಐಟಿಯುನ ಕರ್ನಾಟಕ ರಾಜ್ಯದ 7ನೇ ಸಮ್ಮೇಳನದ ಸಂದರ್ಭದಲ್ಲಿ ಈ ಹುತಾತ್ಮರನ್ನು ಮರೆಯಲಿಲ್ಲ.

ರೈತ ಕಾರ್ಮಿಕ ಸಖ್ಯತೆಯ ಸಂಕೇತವೋ ಎಂಬಂತೆ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ನೇತೃತ್ವದಲ್ಲಿ ಮಡಿದವರ ಮನೆಯಿಂದ ಹುತಾತ್ಮ ಜ್ಯೋತಿಯೊಂದಿಗೆ ಮೆರವಣಿಗೆಯಲ್ಲಿ ಬರುತ್ತಾ ಹತ್ತಾರು ಸಭೆಗಳನ್ನು ನಡೆಸಿ ನೆನೆಯಲಾಯಿತು. ಸಮ್ಮೇಳನದ ಉದ್ಘಾಟನೆಯ ಮೊದಲು ಕೆಂಬಾವುಟವನ್ನು ಅರಳಿಸುವ ಮುನ್ನ ಮೆರವಣಿಗೆಯಲ್ಲಿ ಬಂದ ರೈತ ಕಾರ್ಮಿಕರ ಮುಖಂಡರು ಹುತಾತ್ಮ ಜ್ಯೋತಿಯೊಂದಿಗೆ ಮಡಿದವರ ಭಾವ ಚಿತ್ರಗಳನ್ನು, ಅಖಿಲ ಭಾರತ ಸಿಐಟಿಯು ಕಾರ್ಯದರ್ಶಿ ವಿಮಲಾ ರಣದಿವೆ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಿಪಿಐ(ಎಂ) ಮುಖಂಡ ಎನ್.ಕೆ.ಉಪಾಧ್ಯಾಯ ಅವರುಗಳ ಕೈಗೊಪ್ಪಿಸುತ್ತಾಗನೆರೆದವರ ಕಣ್ಣುಗಳು ಮಂಜಾದವು. 'ಹುತಾತ್ಮರ ರಕ್ತ ವ್ಯರ್ಥವಲ್ಲ' ಘೋಷಣೆಗಳು ಆಕಾಶಕ್ಕೇರಿದವು.

ಸಮ್ಮೇಳನದಲ್ಲಿ ಮಾತನಾಡಿದ ಮುಖಂಡರು, ಪ್ರತಿನಿಧಿಗಳು 'ಯಾವ ಕಾರಣಕ್ಕಾಗಿ ಹುತಾತ್ಮರು ನಮ್ಮನ್ನಗಲಿದರೋ ಆ ಧ್ಯೇಯವನ್ನು ಮುಂದುವರಿಸಿಕೊಂಡು ಹೋಗುವುದಾಗಿ' ಭರವಸೆ ನೀಡಿದರು.

ಹೆಜ್ಜಾಲದ ಜಾಲದ ಹಿಂದೆ ಯಾವುದೋ ಕಾಣದ ಕೈ ಇರುವುದಂತೂ ಖಂಡಿತ. ಆ ಕರಾಳ ಕೈ ಯಾವುದೆಂದು ಪತ್ತೆ ಹಚ್ಚಬೇಕಾಗಿದೆ.

ಹಣದ ಮದದಿಂದ ಏನು ಬೇಕಾದರೂ ಮಾಡಬಹುದು ಎಂದು ಭಾವಿಸಿರುವ ಮಾಲಕ ವಳ್ಳಿಯಪ್ಪ ಮತ್ತು ಎಂಜಲು ಹಣಕ್ಕಾಗಿ ಕೈ ಒಡ್ಡಿದ ಪೋಲೀಸ್ ಅಧಿಕಾರಿಗಳೇ?

ಚುನಾವಣಾ ರಾಜಕೀಯದಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಹವಣಿಸಿದ ಕಾಂಗ್ರೆಸ್ ಶಿಖಾಮಣಿಗಳೇ?

ನ್ಯಾಯಾಂಗ ತನಿಖೆಯಿಂದ ಇದು ಹೊರಬೀಳಬಹುದೇ ಎಂದು ಕಾತರದಿಂದ ನಿರೀಕ್ಷಿಸಬೇಕಾಗಿದೆ.

ಆದರೆ ಜೆ.ಎಚ್.ಪಟೇಲ್ ನೇತೃತ್ವದ ಜನತಾದಳ ಸರಕಾರ ಈ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿಲ್ಲ. ನ್ಯಾಯಾಂಗ ತನಿಖೆಗೆ ಬೇಕಾದ ಕ್ರಮವನ್ನು ಇನ್ನೂ ಕೈಗೊಂಡಿಲ್ಲ. ನ್ಯಾಯಾಧೀಶರ ನೇಮಕ ಕೂಡಾ ಆಗಿಲ್ಲ.

ಅಸು ನೀಗಿದವರ ಕುಟುಂಬಕ್ಕೆ 1 ಲಕ್ಷ ನೀಡಿದರೂ(ಸಿಪಿಐ(ಎಂ) ಮತ್ತು ಸಿಐಟಿಯು 5 ಲಕ್ಷ ನೀಡಬೇಕೆಂದು ಕೇಳಿದೆ) ಗಾಯಗೊಂಡವರ ಪಾಲಿಗೆ ಯಾವುದೇ ಹಣ ಬಂದಿಲ್ಲ.

ನಾಗರಾಜ ಎಂಬ ಯುವಕನೊಬ್ಬ ಗುಂಡೇಟಿನಿಂದ ಅಂಗ ವಿಕಲನಾಗಿ ಜೀವಮಾನವಿಡೀ ಪರದಾಡುವ ಪರಿಸ್ಥಿತಿಇದ್ದರೂಅವನಿಗೆಖಾಯಂಕೆಲಸ ನೀಡುವ ಬಗ್ಗೆ ಸರಕಾರ ಆಲೋಚಿಸುತ್ತಿಲ್ಲ.

ಅಮಾಯಕ ಜನರ ಮೇಲೆ ಗುಂಡಿನ ಮಳೆಗರೆದ ಪೋಲೀಸ್ ಅಧಿಕಾರಿಗಳಿಗೆ ಶಿಕ್ಷೆಯಾಗಿಲ್ಲ.

ಸುಳ್ಳು ಮೊಕದ್ದಮೆಗಳನ್ನು ವಾಪಾಸು ಪಡೆದಿಲ್ಲ. ಬದಲಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ.ನಾಯರ್ ಮತ್ತಿತರ 15 ಮಂದಿ ಕ್ರಮವಾಗಿ ಬೆಂಗಳೂರು, ಹೆಜ್ಜಾಲ ಬಿಟ್ಟು ಹೋಗುವಂತಿಲ್ಲ. ಮಾತ್ರವಲ್ಲ ವಾರಕ್ಕೊಮ್ಮೆ ಬಿಡದಿ ಪೋಲೀಸ್ ಸ್ಟೇಶನ್‌ನಲ್ಲಿ ಹಾಜರಾತಿ ಹಾಕಬೇಕು.

ಏನಿದು ಹಾಳು ವ್ಯವಸ್ಥೆ?

ನ್ಯಾಯಕ್ಕಾಗಿ ಹೋರಾಡಿದ ಕಾರ್ಮಿಕರಿಗೆ ಮರಣ, ಅಂಗವಿಕಲತೆ, ಗುಂಡಿನ ಗಾಯ ಮತ್ತು ಪೋಲೀಸು ಹಾಗೂ ನ್ಯಾಯಾಲಯದಿಂದ ಶಿಕ್ಷೆ!

ಆದರೆ ಗಲಭೆಗೆ ಕಾರಣರಾದ ವಳ್ಳಿಯಪ್ಪ, ಪೋಲೀಸು ಅಧಿಕಾರಿಗಳು, ಭ್ರಷ್ಟ ರಾಜಕಾರಣಿಗಳಿಗೆ .ಯಾವುದೇ ಶಿಕ್ಷೆಯಿಲ್ಲ. ಬದಲಾಗಿ ವಳ್ಳಿಯಪ್ಪ ಕಾರ್ಖಾನೆಯ ಯಂತ್ರೋಪಕರಣಗಳನ್ನು ಸಾಗಿಸಿ ಕಾರ್ಖಾನೆಯನ್ನು ಮುಚ್ಚಿ ಕಾರ್ಮಿಕ ಕುಟುಂಬಗಳನ್ನು ಬೀದಿಪಾಲು

ಪುಟ 7 ಕ್ಕೆ

ಬೆಂಗಳೂರು - ಮೈಸೂರಲ್ಲಿ ತಲೆಎತ್ತಿರುವ ಭೂಕಬಳಿಕೆ ಜಾಲ

ಬಿಹಾರ-ಉತ್ತರ ಪ್ರದೇಶಗಳಂಥ ರಾಜ್ಯಗಳ ಕೋಟ್ಯಾವಧಿ ರೂಪಾಯಿಗಳ ಹಗರಣದ ಸಾಂಕ್ರಾಮಿಕ ರೋಗ ಕರ್ನಾಟಕದಲ್ಲೂ ನೆಲೆ ಊರಿದೆ ಜೋಕೆ! ಬೆಂಗಳೂರು-ಮೈಸೂರುನಲ್ಲಿ ರಾಜಕೀಯ ಮುಖಂಡರೂ, ಶಾಸಕರೂ, ಹಿರಿಯ ಐಎಎಸ್ ಅಧಿಕಾರಿಗಳನ್ನೊಳಗೊಂಡು ಗ್ರಾಮ ಲೆಕ್ಕಿಗರವರೆಗೆ ಭೂಮಿ ಅಕ್ರಮವಾಗಿ ಕಬಳಿಸಿ ಅದರ ಲಾಭ ಪಡೆದು ಸರಕಾರಕ್ಕೆ ಕೋಟ್ಯಾವಧಿ ರೂಪಾಯಿ ಹಾನಿ ಉಂಟುಮಾಡಿದ ಘಟನೆಗಳು ಹೊರಬಿದ್ದಿವೆ. ಐಎಎಸ್ ಅಧಿಕಾರಿಗಳಾದ ಸಕ್ಕರೆ ನಿರ್ದೇಶನಾಲಯದ ನಿರ್ದೇಶಕ ಮಹದೇವ್ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ಕಮಿಶನರ್ ಬಿ.ಪಾರ್ಥಸಾರಥಿ ಅವರ ಪತ್ನಿಯರಿಂದ ನಡೆದಿರುವ ಹಗರಣವನ್ನು ಕಂದಾಯ ಮಂತ್ರಿ ರಮೇಶ್ ಜಿಗಜಿಣಗಿಯವರು ಬಯಲಿಗೆಳೆದಿದ್ದಾರೆ. ನಂದಿ ಬೆಟ್ಟದ ತಪ್ಪಲಿನಲ್ಲಿರುವ ಜಗ್ಗಿ ಸ್ಟಡ್‌ಫಾರಂನ 131 ಎಕ್ರೆ ಭೂಮಿಯ ವ್ಯವಹಾರದಿಂದ ಸರಕಾರಕ್ಕೆ 1.17 ಕೋಟಿ ರೂಪಾಯಿ ನಷ್ಟವಾಗಿದ್ದು ಈ ವಂಚನೆಯಲ್ಲಿ ಸಹಚರರಾಗಿದ್ದ ನಾಲ್ವರು ಅಧಿಕಾರಿಗಳನ್ನು ಸೇರಿ ಎಂಟು ಮಂದಿಯನ್ನು ಅಮಾನತುಗೊಳಿಸಲಾಗಿದೆ ಎಂದು ಮಂತ್ರಿಗಳು ಪ್ರಕಟಿಸಿದ್ದಾರೆ. ಅದೇ ರೀತಿ ಮೈಸೂರು ತಾಲ್ಲೂಕು ಕಸಬಾ ಹೋಬಳಿಯ 19 ಗ್ರಾಮಗಳಲ್ಲಿ ಭೂ ಹಗರಣಕ್ಕೆ ಸಂಬಂಧಿಸಿದಂತೆ ಸರಕಾರಕ್ಕೆ 66 ಕೋಟಿ ರೂಗಳಿಗೂ ಹೆಚ್ಚು ಪ್ರಮಾಣದ ವಂಚನೆಯಾಗಿರುವುದನ್ನು ನಗರಾಭಿವೃದ್ಧಿ ಸಚಿವ ಬಚ್ಚೇಗೌಡರು ಬೆಳಕಿಗೆಳೆದಿದ್ದಾರೆ. ಇದಕ್ಕಿಂತ ಮುಂಚೆ ಅಂಗನವಾಡಿಗಳಲ್ಲಿ ಚಿಕ್ಕ ಮಕ್ಕಳಿಗೆ ಕೊಡಬೇಕಾಗಿದ್ದ ಕೋಟ್ಯಾವಧಿ ರೂಪಾಯಿ ಬೆಲೆಯ ಹಾಲು-ರವೆ ಮುಂತಾದ ವಸ್ತುಗಳ ದುರುಪಯೋಗವಾದ ವಿಷಯದ ಕುರಿತು ಉಗ್ರಪ್ಪ ಸದನ ಸಮಿತಿ ಬಹಿರಂಗಗೊಳಿಸಿದೆ.

ನಮ್ಮ ರಾಜ್ಯದಲ್ಲಿ ಅಧಿಕಾರಿಗಳ ಭ್ರಷ್ಟಾಚಾರದ ಕುರಿತಷ್ಟೇ ಪ್ರಕರಣಗಳು ಬಯಲಿಗೆ ಬೀಳುತ್ತಿದ್ದು ಕಳೆದ 6-7 ವರ್ಷಗಳಿಂದ ನಡೆಯುತ್ತಲಿರುವ ಸರಕಾರಕ್ಕೆ ಮೋಸಗಯ್ಯುವ ಹಲವಾರು ಪ್ರಕರಣಗಳನ್ನು ಮಂತ್ರಿಗಳಾದ ಉಗ್ರಪ್ಪ, ರಮೇಶ್ ಜಿಗಜಿಣಗಿ, ಸಿ.ಭೈರೇಗೌಡರಂಥವರು ಜನರ ಮುಂದಿಟ್ಟು, ಇದರಲ್ಲಿ ಭಾಗೀದಾರರಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧರಿಸಿರುವುದು ಸ್ವಾಗತಾರ್ಹ. ಅದೇ ಸಮಯದಲ್ಲಿ ಸರಕಾರದಲ್ಲಿ ಪ್ರಭಾವ ಬೀರತಕ್ಕ ಕೆಲವು ಅಧಿಕಾರಿಗಳಿಗೆ ರಕ್ಷಣೆ ನೀಡುವ ಪ್ರಯತ್ನ ನಡೆದಿದೆಂಬ ಸುದ್ದಿಗಳು ಕೇಳಿಬರುತ್ತಿವೆ. ಇದರ ಕುರಿತು ಎಚ್ಚರಿಕೆಯಿಂದಿರುವುದು ಅತ್ಯಗತ್ಯ. ಅದು ಕಾಂಗ್ರೆಸ್ ಸರಕಾರವೇ ಇರಬಹುದು ಅಥವಾ ಜನತಾದಳ ಸರಕಾರವೇ ಇರಬಹುದು. ಈ ಸರಕಾರಗಳಲ್ಲಿ ಜಾತಿ ಮತ್ತು ಹಣ ಎಲ್ಲವನ್ನೂ ಮೀರಿಸುತ್ತದೆಂಬ ವಿಷಯ ಯಾರಿಗೂ ಗೊತ್ತಿಲ್ಲದ ಸಂಗತಿಯಲ್ಲ. ಈ ಹಿಂದೆ ಕಾಂಗ್ರೆಸ್ ಸರಕಾರಗಳಿದ್ದಾಗ ಅಧಿಕಾರ ಮತ್ತು ಹಣದ ದುರುಪಯೋಗಕ್ಕಾಗಿ ನಾರಾಯಣ್, ಅಲೆಗ್ಸಾಂಡರ್ ಮೊದಲಾದ 8-10 ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿತ್ತು. ಕೋರ್ಟುಗಳು ಅವರನ್ನು ಅಪರಾಧಿಗಳೆಂದು ಪರಿಗಣಿಸಿ ಶಿಕ್ಷೆಗೊಳಪಡಿಸಿದ್ದಾಗ್ಯೂ, ಅಂದಿನ ಸರಕಾರಗಳು ಅವರನ್ನು ನಾಚಿಕೆಬಿಟ್ಟು ಅಧಿಕಾರ ಸ್ಥಾನದಲ್ಲಿ ಸ್ಥಿರಗೊಳಿಸಿ ಜನರಿಗೆ ಮೋಸ ಮಾಡಿದ ಪ್ರಕರಣಗಳು ಜೀವಂತ ಉಳಿದಿವೆ. ಈಗಲೂ ಅಂಥ ಅಧಿಕಾರಿಗಳು ಮಂತ್ರಿಗಳ ಆಶೀರ್ವಾದದಿಂದ ಸೇವೆಯಲ್ಲಿಯೇ ಉಳಿದಿದ್ದಾರೆ. ಪ್ರತಿಯೊಂದರಲ್ಲಿಯೂ ಜಾತಿ-ಉಪಜಾತಿಗಳನ್ನು ಹುಡುಕುತ್ತಿರುವ ಜನತಾದಳ ಸರಕಾರ ಮೇಲ್ವರ್ಗದ ಅಧಿಕಾರಿಗಳ ಮೇಲೆ ಬ್ರಹ್ಮಾಸ್ತ್ರ ಉಪಯೋಗಿಸಿ ಸರಕಾರದಲ್ಲಿಯ ಭ್ರಷ್ಟಾಚಾರಕ್ಕೆ ಕೊಡಲಿಯೇಟು ಕೊಡುತ್ತಾರೆ. ಆ ಮೂಲಕ ಸ್ವಲ್ಪ ಮಟ್ಟಿಗಾದರೂ ಈ ಪೆಡಂಭೂತವನ್ನು ಹತೋಟಿಗೆ ತರುತ್ತಾರೆಂಬ ಆಶಾವಾದ ಗಾಳಿಯಲ್ಲಿ ತೂರಿ ಹೋಗುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಮುಖಭಂಗದಿಂದ ತಪ್ಪಿಸಿಕೊಳ್ಳಲು ಆಫೀಸ್ ಅಟೆಂಡರನ್ನೋ, ಗ್ರಾಮ ಲೆಕ್ಕಿಗರನ್ನೋ, ಗುಮಾಸ್ತರನ್ನೋ ಹಿಡಿದು ಹಿಪ್ಪೆ ಮಾಡಿ ಮೇಲಧಿಕಾರಿಗಳ ಆದೇಶಕ್ಕೆ ಮಣಿದು ಪಾಪ ಮಾಡದಿದ್ದಕ್ಕಾಗಿ ಅವರನ್ನು ಜೈಲಿಗಟ್ಟಿಯೋ, ನೌಕರಿಯಿಂದ ತೆಗೆದು ಬೆನ್ನು ಚಪ್ಪರಿಸಿಕೊಳ್ಳುವ ಸರಕಾರಕ್ಕೆ, ಮಂತ್ರಿಗಳಿಗೆ ಕಡಿಮೆಯಿಲ್ಲ. ಆದರೆ ಬಡ ನೌಕರನ ಹೆಂಡರು-ಮಕ್ಕಳ ಕೂಗು ಅವರ ಕಿವಿಗೆ ಕೇಳುವುದಿಲ್ಲ.

ಮೈಸೂರು ಹಗರಣದಲ್ಲಿ ಬಿಜೆಪಿ ಶಾಸಕರೊಬ್ಬರ ಹಾಗೆಯೇ ನಗರಾಭಿವೃದ್ಧಿ ಪ್ರಾಧಿಕಾರದ ಜನತಾದಳಕ್ಕೆ ಸೇರಿದ ಅಧ್ಯಕ್ಷರೂ ಶಾಮೀಲಾಗಿದ್ದು ಇಂಥ ಮಹನೀಯರ ಕುರಿತು ಸಂಬಂಧಪಟ್ಟ ಪಕ್ಷ ಹಾಗೆಯೇ ಸರಕಾರ ಏನು ಕ್ರಮ ಕೈಗೊಳ್ಳಬಹುದೆಂಬುದನ್ನು ಸಾರ್ವಜನಿಕರು ಆತುರದಿಂದ ವೀಕ್ಷಿಸುತ್ತಿದ್ದಾರೆ. ಭ್ರಷ್ಟ ಕಾಂಗ್ರೆಸ್ಸನ್ನು ಸೋಲಿಸಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಸಂಯುಕ್ತರಂಗ ಸರಕಾರ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಸಂಯುಕ್ತರಂಗದ ಅಂಗ ಪಕ್ಷವಾದ ಜನತಾದಳ ಸರಕಾರ ರಾಜ್ಯದಲ್ಲಿ ದಕ್ಷವಾದ, ಭ್ರಷ್ಟಾಚಾರದಿಂದ ಮುಕ್ತವಾದ ಆಡಳಿತ ನಡೆಸುತ್ತಿದೆಯೆಂಬುದನ್ನು ಸಾಬೀತು ಪಡಿಸಬೇಕಾದರೆ ಜೆ.ಎಚ್.ಪಟೇಲರ ಸರಕಾರ ಇಂಥ ಪ್ರಕರಣಗಳ ಕುರಿತು ನಿರ್ಭಿಡೆಯಿಂದ ಕ್ರಮ ಕೈಗೊಳ್ಳುವ ಅಗತ್ಯವಿದೆಯೆಂಬುದನ್ನು ನೆನಪಿಸಿಕೊಡಬೇಕಾಗಿದೆ. ಸರಕಾರದ ದೃಢ ನಿಲುಮೆಯಿಂದ ಮಾತ್ರ ಇಂಥ ಪ್ರಕರಣಗಳನ್ನು ಕೊನೆಗಾಣಿಸಬಹುದಾಗಿದೆ. ಇಂಥ ಪ್ರಕರಣಗಳ ವಿರುದ್ಧ ಸಿಪಿಐ(ಎಂ) ಹಾಗೆಯೇ ಎಡ, ಪ್ರಜಾಪ್ರಭುತ್ವ ಶಕ್ತಿಗಳೂ, ಸಂಘಟನೆಗಳೂ ಹೋರಾಡಬೇಕು ಹಾಗೆಯೇ ಅಧಿಕಾರದಲ್ಲಿರುವವರ ಕೃಪಾಶ್ರಯದಿಂದಾಗಿ ಇಂಥ ಹಗರಣಗಳಿಂದ ತಪ್ಪಿಸಿಕೊಳ್ಳಬಹುದಾದ ಅಧಿಕಾರಿಗಳ ವಿರುದ್ಧ ತೀವ್ರ ಪ್ರಚಾರಾಂದೋಲನ ನಡೆಸಿ ಅವರೆಲ್ಲ ಸರಿಯಾದ ಶಿಕ್ಷೆಗೊಳಪಡುವಂತೆ ಮಾಡಬೇಕಾಗಿರುವುದು ನಮ್ಮ ನಿಮ್ಮ ಕರ್ತವ್ಯ.

- ಎನ್.ಕೆ.ಉಪಾಧ್ಯಾಯ

ಕೋಲಾರ ಚಿನ್ನದ ಗಣಿ ಮುಚ್ಚಿಕೆ ನಿರ್ಧಾರಕ್ಕೆ ಕಾರ್ಮಿಕರ ಪ್ರತಿಭಟನೆ

ಮೇ1 ರಿಂದ ಪ್ರಚಾರಾಂದೋಲನ: ಮೇ 22 ಕ್ಕೆ ಮುಷ್ಕರ

ಭಾರತ ಸರಕಾರದ ಕಾರ್ಯದರ್ಶಿಗಳ ಸಮಿತಿ ಕರ್ನಾಟಕದ ಕೆಜಿಎಫ್‌ನಲ್ಲಿರುವ ಭಾರತ್ ಗೋಲ್ಡ್ ಮೈನ್ಸ್ ಲಿ., ಅಂದರೆ ಬಿಜಿಎಂಎಲ್ ಅನ್ನು ಮೇ 31, 1997 ರಿಂದ ಮುಚ್ಚುವ ನಿರ್ಧಾರ ಮಾಡಿದೆ. ಈ ಮೂಲಕ ಭಾರತ ಸರಕಾರ ತನ್ನ ರಾಜಕೀಯ ಜವಾಬ್ದಾರಿಯಿಂದ ತಪ್ಪಿಸಿಕೊಂಡು ಅದನ್ನು ಆಡಳಿತಗಾರರ ಮೇಲೆ ದಾಟಿಸುವ ಪ್ರಯತ್ನ ಇಲ್ಲಿ ಕಾಣುತ್ತಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಇದನ್ನು ಖಂಡಿಸಿದೆ.

ಇದುವರೆಗೆ ನಷ್ಟದಲ್ಲಿರುವ ಸಾರ್ವಜನಿಕ ವಲಯದ ಘಟಕಗಳ ಬಗ್ಗೆ ನಿರ್ಧರಿಸಲು ಬಿಐಎಫ್‌ಆರ್(ಕೈಗಾರಿಕಾ ಹಣಕಾಸು ಮತ್ತು ಪುನರ್ರಚನಾ ಮಂಡಳಿ) ಪರಿಶೀಲನೆಗೆ ಅವನ್ನು ಒಪ್ಪಿಸುತ್ತಿತ್ತು. ಈ ಬಿಐಎಫ್‌ಆರ್ ಪರಿಣತರ ಸಂಸ್ಥೆಯೆಂದು ಪರಿಗಣಿಸಲಾಗಿತ್ತು. ಈಗ ಸರಕಾರ ಅದರ ನಿರ್ಣಯಗಳನ್ನು ತಡೆದಿಟ್ಟು ಅದನ್ನು ನಿರುಪಯೋಗಿಯನ್ನಾಗಿ ಮಾಡಿದೆ. ಬಿಜಿಎಂಎಲ್‌ನ ಪ್ರಸಂಗದಲ್ಲಿಯೂ ಬಿಐಎಫ್‌ಆರ್ ಪರಿಶೀಲನೆಯ ನಂತರವೂ ಸರಕಾರಿ ಕಾರ್ಯದರ್ಶಿಗಳ ಸಮಿತಿಗೆ ಇದನ್ನು ಒಪ್ಪಿಸಲಾಯಿತು.

ವಾಸ್ತವವಾಗಿ ಇದೇ ಬಿಐಎಫ್‌ಆರ್ 'ಅಧಿಕೃತ ತೀರ್ಪುಗಾರ'ನಾಗಿ ನೇಮಿಸಿದ ಐಸಿಐಸಿಐ ಸಂಸ್ಥೆ ಬಿಜಿಎಂಎಲ್‌ನ ಪುನರುಜ್ಜೀವನಕ್ಕೆ ಹಲವು ಪ್ರಸ್ತಾವಗಳನ್ನು ಶಿಫಾರಸು ಮಾಡಿತ್ತು. ಸಂಸದೀಯ ಸಮಿತಿಯೊಂದು ಕೂಡಾ ಇದನ್ನು ಪುನರುಜ್ಜೀವನಗೊಳಿಸಬೇಕು ಎಂದು ಶಿಫಾರಸು ಮಾಡಿತ್ತು. ಆದರೆ ಕಾರ್ಯದರ್ಶಿಗಳ ಸಮಿತಿ ಅದನ್ನೆಲ್ಲಾ ಹೊಡೆದುಹಾಕಿದೆ.

ಬಿಜಿಎಂಎಲ್‌ನ್ನು ಪುನಶ್ಚೇತನಗೊಳಿಸಲು ಇತ್ತೀಚೆಗೆ ನೀಡಲಾಗಿದ್ದ ಶಿಫಾರಸು ಹೀಗಿತ್ತು

- ಭಾರತ ಸರಕಾರ ತಾನು ನೀಡಿದ ಯೋಜನಾ ಸಾಲ 64,675 ಕೋಟಿ ರೂಗಳನ್ನು ಇಕ್ವಿಟಿ ಬಂಡವಾಳವಾಗಿ ಪರಿವರ್ತಿಸುವುದು, 62,165 ಕೋಟಿ ರೂಗಳ ಯೋಜನೇತರ ಸಾಲವನ್ನು ಮನ್ನಾ ಮಾಡುವುದು. ಅದೇ ರೀತಿ ಸಾಲದ ಮೇಲೆ ಸೇರಿರುವ ಬಡ್ಡಿ ಹಾಗೂ ಸುಸ್ತಿಬಡ್ಡಿಗಳನ್ನು ಮನ್ನಾ ಮಾಡುವುದು.
- ರಾಷ್ಟ್ರೀಯ ನವೀಕರಣ ನಿಧಿ NRF ಯಿಂದ 24.95 ಕೋಟಿ ರೂ. ಸಾಲ
- 21.99 ಕೋಟಿ ರೂ. ಹಾಗೂ 19.48 ಕೋಟಿ ರೂಗಳ ಹೊಸ ಸಾಲ ನೀಡುವುದು.
- ಹೆಚ್.ಆರ್.ಡ್.ಎಲ್ ಹಾಗೂ ಎನ್.ಎ.ಸಿ.ಎಲ್ ನೀಡಿದ ಸಾಲಗಳನ್ನು ಇಕ್ವಿಟಿ ಬಂಡವಾಳವಾಗಿ ಪರಿವರ್ತಿಸುವುದು.
- ಕರ್ನಾಟಕ ಸರಕಾರ ಚಿನ್ನದ ಅದುರಿನ ಮೇಲಿನ ರಾಯಧನವನ್ನು ಮನ್ನಾ ಮಾಡುವುದು.

ಟೈಲಿಂಗ್‌ಗಳಿಂದ ಚಿನ್ನ ತೆಗೆಯುವುದು, ನಂದಿದುರ್ಗ ಹಾಗೂ ಚಿಗರಿಗುಂಟೆ ಗಣಿಗಳಲ್ಲಿ ಗಣಿಗಾರಿಕೆಯನ್ನು ಮುಂದುವರಿಸುವುದು ಹಾಗೂ ಇಂಜಿನಿಯರಿಂಗ್ ಕೆಲಸಗಳನ್ನು ಬೆಳೆಸುವುದು ಈ ಪ್ರಸ್ತಾವದ ಮುಖ್ಯ ಉದ್ದೇಶ. ಆದರೆ ಕಾರ್ಯದರ್ಶಿಗಳ ಸಮಿತಿ ಈ ಪ್ರಸ್ತಾವವನ್ನು ತಿರಸ್ಕರಿಸಿದೆ.

ಕೆಜಿಎಫ್‌ನಲ್ಲಿ ಚಿನ್ನದ ಭಂಡಾರ ಖಾಲಿಯಾಗಿದೆ, ಕೀಳ್ಮಟ್ಟದ ಅದುರುಗಳು ಮಾತ್ರ ದೊರೆಯುತ್ತಿದೆ ಎಂಬ ಪ್ರಚಾರ ಸುಳ್ಳು. ಪರಿಣಿತರ ಪ್ರಕಾರ ಕಾಲೋ ಮೈನಿಂಗ್ ಮೂಲಕ ಹೊಸ ಪ್ರದೇಶಗಳಲ್ಲಿ ಚಿನ್ನದ ಗಣಿಗಾರಿಕೆ ನಡೆಸುವ ಸಾಧ್ಯತೆ ಬಹಳ ಇದೆ.

ವಾಸ್ತವವಾಗಿ ಮಾರುಕಟ್ಟೆಯ ಬೆಲೆಯನ್ನು ಬಿಜಿಎಂಎಲ್‌ಗೆ ಕೊಟ್ಟಿದ್ದರೆ ಸರಕಾರದ ನೆರವೂ ಅಗತ್ಯವಿಲ್ಲ ಎಂದು ಹೇಳಲಾಗುತ್ತಿದೆ. 1972 ರಲ್ಲಿ ಚಿನ್ನದ ಗಣಿಯ ರಾಷ್ಟ್ರೀಕರಣದ ನಂತರ ಬಿಜಿಎಂಎಲ್‌ಗೆ ಉತ್ಪಾದನಾ ವೆಚ್ಚದೊಂದಿಗೆ ಕೇವಲ 15% ಸೇರಿಸಿ ಕೊಡಲಾಗುತ್ತಿದೆ. ಅಂದರೆ ಮಾರುಕಟ್ಟೆ ಬೆಲೆ ಕೊಡುತ್ತಿಲ್ಲ. ಇದರಿಂದ ಬಿಜಿಎಂಎಲ್‌ಗೆ 500 ಕೋಟಿ ರೂ. ನಷ್ಟವಾಗಿದೆ ಎಂದು ಅಂದಾಜು ಹಾಕಲಾಗಿದೆ ಎಂದೂ ಕಾರ್ಮಿಕ ಪ್ರತಿನಿಧಿಗಳು ಹೇಳುತ್ತಾರೆ.

ಅಷ್ಟೇ ಅಲ್ಲ, ಕರ್ನಾಟಕ ಸರಕಾರ ಶಿವನಸಮುದ್ರದಿಂದ ಒದಗಿಸುವ ವಿದ್ಯುತ್‌ನ ದರವೂ ಬಹಳ ಹೆಚ್ಚು, ಅದು ಕೇಳುವ ವಿಪರೀತ ರಾಯಧನ ಕೂಡಾ ಈ ಚಿನ್ನದ ಗಣಿಯ ಪುನರುಜ್ಜೀವನದಲ್ಲಿ ದೊಡ್ಡ ಅಡ್ಡಿಯಾಗಿದೆ. ಇದರ ಜೊತೆಗೆ ಸ್ವಯಂ ನಿವೃತ್ತಿ ಯೋಜನೆ ಬಿಆರ್‌ಎಸ್ ನಿಂದ ಉತ್ತಮ ಪ್ರತಿಭೆಯ ಕಾರ್ಮಿಕರನ್ನು ಕಳೆದುಕೊಂಡು ಕೂಡಾ ಚಿನ್ನದ ಉತ್ಪಾದನೆ ಇಳಿಮುಖವಾಗಿದೆ.

ಆದ್ದರಿಂದ ಚಿನ್ನದ ಗಣಿಯನ್ನು ಮುಚ್ಚುವ ನಿರ್ಧಾರವನ್ನು ಪ್ರತಿಭಟಿಸಿ, ಮೇ 1 ರಿಂದ 15 ದಿನಗಳ ಪ್ರಚಾರಾಂದೋಲನ ನಡೆಸಲು ಹಾಗೂ ಮೇ 22 ರಂದು ಸಾಂಕೇತಿಕ ಮುಷ್ಕರ ನಡೆಸಲು ಕಾರ್ಮಿಕರು ನಿರ್ಧರಿಸಿದ್ದಾರೆ.

ಜಿಲ್ಲಾಧಿಕಾರಿ ಮಧ್ಯಪ್ರವೇಶಕ್ಕೆ ನೌಕರರ ಮನವಿ

ಬಳ್ಳಾರಿ: ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ನೌಕರರ ಸಂಘವು ತಮ್ಮ ಸಮಸ್ಯೆಗಳನ್ನು ಪರಿಹರಿಸಲು ಬಳ್ಳಾರಿ ಜಿಲ್ಲಾಧಿಕಾರಿಗಳು ಮಧ್ಯ ಪ್ರವೇಶಿಸಬೇಕೆಂದು ಮನವಿ ಮಾಡಿದೆ.

ಈ ಹಿಂದೆ ನಗರ ಸಭೆಯಿಂದ ಮಂಡಳಿಗೆ ವರ್ಗಾವಣೆಗೊಂಡ ಈಗ ಮತ್ತೆ ನಗರ ಸಭೆಗಳಿಗೆ ವರ್ಗಾವಣೆಗೊಂಡ ನೌಕರ ಸಮಸ್ಯೆಗಳಾದ ಮುಂಬಡ್ತಿ, ನಿವೃತ್ತಿ, ಪಿಂಚಣಿ, ಸಹಾನುಭೂತಿ ಆಧಾರದಲ್ಲಿ ನೌಕರಿ ಇಲ್ಲದಂತಾಗಿದೆ. ಇದರಿಂದಾಗಿ ಈ ಎಲ್ಲಾ ನೌಕರರನ್ನು ಎರವಲು ಸೇವೆ ಎಂದು ಪರಿಗಣಿಸಲು ಸಂಘವು ಮನವಿ ಮಾಡಿದೆ.

ಬಳ್ಳಾರಿ ನೀರು ಸರಬರಾಜು ಯೋಜನೆಯ ಎರಡನೇ ಹಂತದಲ್ಲಿ ನೂರು ಕಾರ್ಮಿಕರನ್ನು ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಂಡಿತ್ತು. ಆದರೆ ಇವರಿಗೆ ನಾಲ್ಕು ತಿಂಗಳಿಂದ ವೇತನ ನೀಡದೆ ಇರುವುದು, ರಜೆ ಸೌಲಭ್ಯವಿಲ್ಲದೆ 365 ದಿನಗಳೂ ಕೆಲಸ ತೆಗೆದುಕೊಳ್ಳುವುದು, ಕನಿಷ್ಟ ಕಾಲಮಿತಿ ಇಲ್ಲದಿರುವುದು, ವೇತನ ಕೇಳಿದರೆ ಕೆಲಸದಿಂದ ತೆಗೆಯುವುದು, ವರ್ಷ ಕಳೆದರೂ ಹಳೆ ಡಿ.ಎಸ್.ಆರ್. ಆಧಾರದಲ್ಲೇ ವೇತನ ಕೊಡುವುದು ಮುಂತಾದ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಸಂಘವು ಮನವಿ ಮಾಡಿದೆ.


ಈ ಎಲ್ಲಾ ನೌಕರರ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳ ಮತ್ತು ನೌಕರರ ಸಂಘದ ಜಂಟಿ ಸಭೆ ಕರೆದು ಸಮಸ್ಯೆ ಪರಿಹರಿಸಬೇಕೆಂದು ಜಿಲ್ಲಾಧಿಕಾರಿಗಳಲ್ಲಿ

ಇನ್ನೊಂದು ರಕ್ತತರ್ಪಣ

ಕೋಮುವಾದಿಗಳಿಂದ ಡಿವೈಎಫ್‌ಐ ಮುಖಂಡ ಭಾಸ್ಕರ ಕುಂಬ್ಳೆ ಹತ್ಯೆ

ಮಂಗಳೂರು: ದೇಶದಲ್ಲಿ ಕೋಮುವಾದದ ವಿರುದ್ಧದ ಹೋರಾಟದಲ್ಲಿ ಡಿವೈಎಫ್‌ಐ ಯಾವಾಗಲೂ ಮುಂಚೂಣಿಯ ಸಂಘಟನೆ. ಈ ಸಂಘಟನೆಯ ಕಾರ್ಯಕರ್ತರೆಂದರೆ ಕೋಮುವಾದಿಗಳಿಗೆ ಅದರಲ್ಲೂ ಸಂಘಪರಿವಾರದ ಆರ್.ಎಸ್.ಎಸ್., ಬಿಜೆಪಿಗಳಿಗೆ ನಡುಕ. ಇದರಿಂದಾಗಿ ತಮ್ಮ ಕೋಮುವಾದ ಹಿನ್ನಡೆ ಕಾಣತೊಡಗಿ, ಎಲ್ಲೆಲ್ಲೂ ಜಾತ್ಯಾತೀತತೆ ಮೇಲುಗೈ ಕಾಣತೊಡಗಿರುವ ಸಂದರ್ಭದಲ್ಲಿ ಹತಾಶರಾಗಿರುವ ಬಿಜೆಪಿ - ಆರ್.ಎಸ್.ಎಸ್. ಗೂಂಡಾಗಳು ಡಿವೈಎಫ್‌ಐ ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರನ್ನು ಹತ್ಯೆ ಮಾಡ ತೊಡಗಿದ್ದಾರೆ.

ಏಪ್ರಿಲ್ 22 ರಂದು ಮಂಗಳೂರಿನ ಎಕ್ಕೂರು ಬಳಿ ಕೇರಳದ ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲ್ಲೂಕಿನ ಕುಂಬ್ಳೆ ಘಟಕದ ಕಾರ್ಯದರ್ಶಿ ಹಾಗೂ ಮಂಗಳೂರು ಕಾನೂನು ಕಾಲೇಜಿನ ವಿದ್ಯಾರ್ಥಿ 32 ವಯಸ್ಸಿನ ಭಾಸ್ಕರ ಕುಂಬ್ಳೆಯವರು 2ನೇ ವರ್ಷದ ಪರೀಕ್ಷೆಗೆ ಮಂಗಳೂರಿಗೆ ಬರುತ್ತಿದ್ದಾಗ ಅವರನ್ನು ಬಸ್ಸಿನಲ್ಲೇ ಆರ್‌ಎಸ್‌ಎಸ್ ಮತ್ತು ಬಿಜೆಪಿ ಗೂಂಡಾಗಳು ಮಾರಕಾಸ್ತ್ರಗಳಿಂದ ಇರಿದು ಹತ್ಯೆ



ಮಾಡಿ ಪರಾರಿಯಾಗಿದ್ದಾರೆ.

ಇಂತಹ ಘಟನೆಗಳು ಕೇರಳ ಮತ್ತಿತರ ಕಡೆ ನಡೆಯುತ್ತಿತ್ತು. ಆದರೆ ಇತ್ತೀಚೆಗೆ ಕರ್ನಾಟಕದ ಮಂಗಳೂರು ಸುತ್ತಮುತ್ತಲೂ ಕೂಡ ಹತಾಶಗೊಂಡ ಆರ್‌ಎಸ್‌ಎಸ್ ಗೂಂಡಾಗಳು ಡಿವೈಎಫ್‌ಐ, ಎಸ್‌ಎಫ್‌ಐ ಸಂಘಟನೆಗಳ ಸಕ್ರಿಯ ಕಾರ್ಯಕರ್ತರ ಮೇಲೆ ಹಲ್ಲೆ ಹಾಗೂ ಹತ್ಯೆಯಂತಹ ಪ್ರಕರಣಗಳಲ್ಲಿ ತೊಡಗಿರುವುದು ಖಂಡನೀಯವಾಗಿದೆ. ಇಂತಹ ಪ್ರಕರಣದಲ್ಲಿ ಭಾಗಿಯಾದ ಹತ್ಯೆಕೋರರನ್ನು ಬಂಧಿಸಿ ಕಾನೂನು ರೀತ್ಯ ಕಠಿಣ ಕ್ರಮ ಕೈಗೊಳ್ಳಬೇಕೆಂದು ಡಿವೈಎಫ್‌ಐ ಕರ್ನಾಟಕ ರಾಜ್ಯ ಸಮಿತಿ ಸರಕಾರವನ್ನು ಆಗ್ರಹಿಸಿದೆ.

ಭಾಸ್ಕರ್ ಕುಂಬ್ಳೆಯವರ ಹತ್ಯೆಯನ್ನು ಖಂಡಿಸಿ ಬೆಂಗಳೂರು ಜಿಲ್ಲಾ ಸಮಿತಿಯು ಏಪ್ರಿಲ್ 24 ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಪೋಲೀಸ್ ಮಹಾನಿರ್ದೇಶಕರನ್ನು ಭೇಟಿ ಮಾಡಿ ಹತ್ಯೆ ಮಾಡಿದವರನ್ನು ಕೂಡಲೇ ಬಂಧಿಸಿ, ಗೂಂಡಾ ಸಂಸ್ಕೃತಿಯನ್ನು ಹತ್ತಿಕ್ಕಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದೆ.

ಈ ನಡುವೆ ಮೂವರು ಆರ್‌ಎಸ್‌ಎಸ್-ಬಿಜೆಪಿ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದ್ದಾರೆ. ಕಾಸರುಗೋಡಿನಲ್ಲಿ ಈ ದುಷ್ಕೃತ್ಯವನ್ನು ವಿರೋಧಿಸಿ ಬಂದ್ ಆಚರಿಸಲಾಗಿದೆ.

ಕರ್ನಾಟಕದಲ್ಲಿ ಕಳೆದವಾರ

ಏಪ್ರಿಲ್ 18

○ ಸಿಂಧನೂರಿನಲ್ಲಿ ನಕಲಿ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸಿ ಮುಗ್ಧ ವಿದ್ಯಾರ್ಥಿಗಳನ್ನು ವಂಚಿಸಿದರೆಂಬ ಆರೋಪದ ಮೇಲೆ ಇಬ್ಬರು ವೈದ್ಯರು ಸೇರಿದಂತೆ ನಾಲ್ವರ ಬಂಧನ. ಕೆಲ ಪ್ರತಿಷ್ಠಿತರು ಭೂಗತರಾಗಿದ್ದಾರೆಂದು ವರದಿ.

○ ಗ್ರಾನೈಟ್ ಸಂಸ್ಕರಣ ಹಾಗೂ ರಫ್ತು ಕಂಪನಿಗಳಿಗೆ ಸರಕಾರಿ ಜಮೀನಿನಲ್ಲಿರುವ ಗಣಿಗಳನ್ನು ಹರಾಜಿನಲ್ಲಿ ಗುತ್ತಿಗೆ ನೀಡುವ ಹೊಸಪದ್ಧತಿಯನ್ನು ಜಾರಿಗೆ ತಂದಿರುವುದಾಗಿ ರಾಜ್ಯ ಗಣಿ ಇಲಾಖೆ ನಿರ್ದೇಶಕರು.

ಏಪ್ರಿಲ್ 19

○ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಮೌಲ್ಯಮಾಪನ ಕಾರ್ಯ ನಿರ್ವಹಿಸುವ ಶಿಕ್ಷಕರ ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆ ಹೆಚ್ಚಳ. ಆದರೆ ಇದು ತಮ್ಮ ಬೇಡಿಕೆಗಳಿಗೆ ಅನುಗುಣವಾಗಿಲ್ಲವೆಂದು ಪ್ರೌಢಶಾಲಾ ಶಿಕ್ಷಕರು. ಮೌಲ್ಯಮಾಪನ ಬಹಿಷ್ಕಾರ ಬರಲಿಲ್ಲ ಎಂದುಸಹ ಶಿಕ್ಷಕರ ಸಂಘ.

ಏಪ್ರಿಲ್ 20

○ ವಿದ್ಯಾರ್ಥಿಗಳ, ಪೋಷಕರ ಹಿತ ದೃಷ್ಟಿಯಿಂದ ಮೌಲ್ಯಮಾಪನ ಬಹಿಷ್ಕಾರವನ್ನು ಹಿಂತೆಗೆದುಕೊಂಡು ಕಪ್ಪು ಪಟ್ಟಿ ಧರಿಸಿ ಕೆಲಸ ಮಾಡುವುದಾಗಿ ಮೌಲ್ಯಮಾಪಕರ ಸಭೆ.

ಏಪ್ರಿಲ್ 21

○ 20 ದಿನಗಳಿಂದ ಉತ್ಪಾದನೆ ಸ್ಥಗಿತಗೊಳಿಸಿದ್ದ ಎನ್‌ಜಿಇಎಫ್ ಕಾರ್ಖಾನೆಯಲ್ಲಿ ಕೆಲಸ ಮತ್ತೆ ಆರಂಭ.

○ ಖ್ಯಾತ ಸಂಗೀತ ವಿದ್ವಾಂಸ ಡಾ|| ದೊರೆಸ್ವಾಮಿ ಅಯ್ಯಂಗಾರ್‌ಗೆ 1996 ರ ಸಾಲಿನರಾಷ್ಟ್ರೀಯ 'ಚೌಡಯ್ಯ' ಪ್ರಶಸ್ತಿ. ಖ್ಯಾತ ನೃತ್ಯಪಟು ಪ್ರೊ. ಯು.ಎಸ್.ಕೃಷ್ಣರಾವ್‌ಗೆ ರಾಜ್ಯ ಮಟ್ಟದ ಶಾಂತಲಾಪ್ರಶಸ್ತಿ ಪ್ರಕಟಣೆ.

○ ನೀರಿನ ಟ್ಯಾಂಕುಗಳನ್ನು ಸ್ವಚ್ಛ ಮಾಡದೆ ನೀರು ಕಲುಷಿತಗೊಳ್ಳಲು ಕಾರಣರಾಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಬೆಂಗಳೂರು ಮಹಾನಗರ ಪಾಲಿಕೆ ಸಂಪೂರ್ಣ ಅಧಿಕಾರ ನೀಡಲು ಆರೋಗ್ಯ ನಿಯಮಗಳಿಗೆ ತಿದ್ದುಪಡಿ ತರಲಾಗುವುದು ಎಂದು ಆರೋಗ್ಯ ಸಚಿವರು.

○ ರಾಜ್ಯ ಭೂಸೇವಾ ನಿಗಮ 1996-97 ರ ಸಾಲಿನಲ್ಲಿ 7 ಕೋಟಿ ರೂ. ಲಾಭಗಳಿಸಿರುವುದಾಗಿ ಪಂಚಾಯತ್ ಮಂತ್ರಿಗಳು.

ಏಪ್ರಿಲ್ 22

○ ರಾಜ್ಯ ಪೋಲೀಸ್ ಮಹಾನಿರ್ದೇಶಕರ ಹುದ್ದೆಗೆ ತಮಗಿಂತ ಸೇವಾ ಕಿರಿಯರಾದ ಟಿ.ಶ್ರೀನಿವಾಸಲು ನೇಮಕ ಪ್ರಶ್ನಿಸಿ ಹಿರಿಯ ಪೋಲೀಸ್ ಅಧಿಕಾರಿ ಸಿ.ದಿನಕರ್ ರಿಂದ ಕೇಂದ್ರ ಆಡಳಿತ ನ್ಯಾಯಮಂಡಳಿಗೆ ಅರ್ಜಿ.

○ ಹಟ್ಟಿ ಚಿನ್ನದ ಗಣಿ ವಿಸ್ತರಣೆಗೆ 138 ಕೋಟಿ ರೂ. ಯೋಜನೆ ಹಮ್ಮಿಕೊಳ್ಳಲಾಗಿದೆ, ಇದರಿಂದ 30ಸಾವಿರ ಕೋಟಿ ರೂ. ಮೊತ್ತದ 600 ಟನ್ ಚಿನ್ನ ಹೊರತೆಗೆಯುವ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದು ಹೆಚ್.ಜಿ.ಎಂ.ವ್ಯವಸ್ಥಾಪಕ ನಿರ್ದೇಶಕರು.

ಏಪ್ರಿಲ್ 24

○ ರಾಜ್ಯದ ಕೆಲವೇ ಕೆಲವು ಪ್ರದೇಶಗಳನ್ನು ಬಿಟ್ಟರೆ ಒಟ್ಟಾರೆಯಾಗಿ ಕುಡಿಯುವ ನೀರಿನ ತೀವ್ರ ಅಭಾವವಿರುವುದಾಗಿ ವರದಿ ಬಂದಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಸಚಿವರು.

○ ಆರೋಗ್ಯ ಇಲಾಖೆಯ ಆಸ್ಪತ್ರೆ, ಪ್ರಯೋಗಾಲಯ ಇತ್ಯಾದಿ ಕಟ್ಟಡಗಳ ನಿರ್ಮಾಣಕ್ಕೆ ವಿಶ್ವಬ್ಯಾಂಕ್ 130 ಕೋಟಿ ರೂ ನೆರವು ನೀಡಲಿದೆ ಎಂದು ಆರೋಗ್ಯ ಸಚಿವರು.

ರಾಜ್ಯ ಸಮಿತಿ ಸಭೆ ಮೇ 23 ರಿಂದ

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸಭೆ ಮೇ 23, 24 ಹಾಗೂ 25ರಂದು ನಡೆಯಲಿದೆ ಎಂದು ರಾಜ್ಯ ಸಮಿತಿ ಕಚೇರಿ ತಿಳಿಸಿದೆ.

ಸಂಯುಕ್ತರಂಗದಿಂದ ಎಡರಂಗದವರೆಗೆ

ಮೂರು ದಶಕಗಳ ವರ್ಗ ಹೋರಾಟಗಳ ಮುನ್ನಡೆಯ ನೆನಪು



ಪಶ್ಚಿಮಬಂಗಾಳದಲ್ಲಿ ಈಗ ಸಂಯುಕ್ತ ರಂಗ ಸರ್ಕಾರದ ೨೦ ನೇ ವಾರ್ಷಿಕೋತ್ಸವದ ಹಾಗೂ ಎಡರಂಗ ಸರಕಾರದ ೨೦ನೇ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದೆ. ಈಗ ಕೇಂದ್ರದಲ್ಲಿ ಏಕಪಕ್ಷ ಆಡಳಿತದ ಯುಗ ಕೊನೆಗೊಂಡು ಸಮ್ಮಿಶ್ರ ಸರ್ಕಾರಗಳ ಯುಗ ಆರಂಭವಾಗಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಇದು ಸಾಧ್ಯವೇ ಎನ್ನುವ ಪ್ರಶ್ನೆ ಬಂದಾಗಲೆಲ್ಲಾ ತಪ್ಪದೇ ಪಶ್ಚಿಮ ಬಂಗಾಳದತ್ತ ತೋರಿಸುತ್ತಾರೆ. ಒಂದು ಪರ್ಯಾಯ ಆಡಳಿತ ದಾರಿಯ ಬಗ್ಗೆ ಹೀಗೆ ಎಲ್ಲರನ್ನೂ ಚಿಂತನೆಗೆ ಹಚ್ಚುವ ಪಶ್ಚಿಮ ಬಂಗಾಳದ ಅನುಭವ ಏನು? ಸಂಯುಕ್ತ ರಂಗ ಸರ್ಕಾರ ರಚನೆಯಾದ ಹತ್ತೇ ವರ್ಷಗಳೊಳಗೆ ಎಡರಂಗ ಸರ್ಕಾರ ಹೇಗೆ ರಚನೆಯಾ ಯಿತು? ಇದರ ಪ್ರಮುಖ ರೂವಾರಿ, ನಿರಂತರ ಐದನೇ ಬಾರಿ ಮುಖ್ಯಮಂತ್ರಿಗಳಾಗಿ ಇಡೀ ದೇಶದಲ್ಲಿ ದಾಖಲೆ ಸ್ಥಾಪಿಸಿರುವ ಜ್ಯೋತಿಬಸುರವರೇ ಸ್ವತಃ ಇಲ್ಲಿ ನೆನಪಿಸಿದ್ದಾರೆ. ಸಂಚಿಕೆಯಲ್ಲಿ ಪ್ರಕಟವಾದ ಮೊದಲ ಭಾಗದಲ್ಲಿ ೧೯೬೭ ರಲ್ಲಿ ಪ್ರಥಮ ಸಂಯುಕ್ತ ರಂಗ ಸರಕಾರದ ರಚನೆಗೆ ಹಾದಿಮಾಡಿಕೊಟ್ಟ ಹೋರಾಟಗಳ ಬಗ್ಗೆ ಓದಿರುವಿರಿ. ೧೯೬೭ ರ ಪ್ರಥಮ ಸಂಯುಕ್ತ ರಂಗ ಸರಕಾರ ರಚನೆಯ ನಂತರ ೧೯೭೭ ರಲ್ಲಿ ಮೊದಲ ಎಡರಂಗ ಸರಕಾರ ರಚನೆಯಾಗುವವರೆಗಿನ ಇತಿಹಾಸದ ಮೇಲೆ ಇಲ್ಲಿ ಜ್ಯೋತಿಬಸುರವರು ಸ್ಥೂಲ ನೋಟ ಬೀರಿದ್ದಾರೆ.

1967ರ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಬಹುಮತ ಪಡೆಯುವಲ್ಲಿ ಸೋತಿತು. ಒಟ್ಟು 280 ಸ್ಥಾನಗಳಲ್ಲಿ ಕಾಂಗ್ರೆಸ್‌ಗೆ 127 ಸ್ಥಾನಗಳು ದೊರೆತರೆ, ಸಂಯುಕ್ತ ಎಡರಂಗವು 68 ಸ್ಥಾನಗಳನ್ನು ಅದರಲ್ಲಿ ಸಿಪಿಐ(ಎಂ) 43 ಸ್ಥಾನಗಳನ್ನು ಪಡೆಯಿತು. ಪ್ರಗತಿಪರ ಸಂಯುಕ್ತ ಎಡರಂಗಕ್ಕೆ 67 ಸ್ಥಾನಗಳು-ಬಾಂಗ್ಲಾ ಕಾಂಗ್ರೆಸ್‌ಗೆ 34 ಮತ್ತು ಸಿಪಿಐಗೆ 16 ಸ್ಥಾನಗಳು-ದೊರೆತವು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಮತ್ತಿತರ ಪಕ್ಷಗಳು ತಮ್ಮ ಧಾಳಿಯನ್ನು ಸಿಪಿಐ(ಎಂ)ನ ವಿರುದ್ಧ ಕೇಂದ್ರೀಕರಿಸಿದ್ದವು ಎಂಬ ಸಂಗತಿಯನ್ನು ನೆನಪಿನಲ್ಲಿಟ್ಟುಕೊಳ್ಳ ಬೇಕು. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ವಿರುದ್ಧ ಹಾಗೂ ಪಟ್ಟಭದ್ರ ಹಿತಾಸಕ್ತಿಗಳನ್ನೆದುರಿಸುವಲ್ಲಿ ಸಿಪಿಐ(ಎಂ) ಅತ್ಯುತ್ತಮ ಪಕ್ಷ ಎಂಬುದನ್ನು ಪಶ್ಚಿಮ ಬಂಗಾಳದ ಜನತೆ ಭಾವಿಸಿದ್ದರು ಎಂಬುದು 1967ರ ಚುನಾವಣೆಗಳಲ್ಲಿ ಮತ್ತೊಮ್ಮೆ ಸ್ಪಷ್ಟವಾಯಿತು. ಆಳುವ ವರ್ಗಗಳ ಜನ ಎಷ್ಟೇ ಅಪಪ್ರಚಾರ ಮಾಡಿದ್ದಾಗ್ಯೂ ಸಹ ಸಿಪಿಐ(ಎಂ) ಎಡಪಂಥೀಯರ ಮುಂಚೂಣಿ ಪಕ್ಷವೆಂದು ಜನ ಪಟ್ಟಕಟ್ಟಿದ್ದರು.

ದೇಶದ ಹದಿನೇಳು ರಾಜ್ಯ ವಿಧಾನ ಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಏಳು ರಾಜ್ಯಗಳಲ್ಲಿ ಕಾಂಗ್ರೆಸ್ ಬಹುಮತ ಕಳೆದುಕೊಂಡು ಸೋಲು ಅನುಭವಿಸಿದ್ದನ್ನು 1967ರ ಆ ವರ್ಷ ಕಂಡಿತು. ಕೇರಳ ವಿಧಾನಸಭೆಯ ಒಟ್ಟು 133 ಸ್ಥಾನಗಳಲ್ಲಿ ಕೇವಲ 9 ಸ್ಥಾನಗಳನ್ನು ಮಾತ್ರ ಕಾಂಗ್ರೆಸ್ ಗೆದ್ದುಕೊಳ್ಳಲು ಸಾಧ್ಯವಾಯಿತು. ಕೇರಳದ ಜನತೆ ಕಾಂಗ್ರೆಸ್‌ನ ಯೋಗ್ಯತೆಗೆ ತಕ್ಕುದಾದ ಕಪಾಳಮೋಕ್ಷ ನೀಡಿದರು!

ಮೊದಲ ಸಂಯುಕ್ತ ರಂಗ ಸರಕಾರ

ಪಶ್ಚಿಮ ಬಂಗಾಳದಲ್ಲಿ ಬೀಸುತ್ತಿದ್ದ ಕಾಂಗ್ರೆಸ್ ವಿರೋಧಿ ಗಾಳಿಗೆ ಮಣಿದು, ಸಂಯುಕ್ತ ಎಡರಂಗ ಮತ್ತು ಪ್ರಗತಿಪರ ಸಂಯುಕ್ತ ರಂಗಗಳು ಮೊದಲ ಸಂಯುಕ್ತ ರಂಗ ಸರಕಾರವನ್ನು ರಚಿಸಲು ಕೈಗೂಡಿಸಿದವು. ಈ ರಂಗದಲ್ಲಿ ಸಿಪಿಐ(ಎಂ) ಅತಿ ದೊಡ್ಡ ಪಕ್ಷವಾಗಿದ್ದಾಗ್ಯೂ ಐಕ್ಯತೆಯ ಪರಿಗಣನೆಯಿಂದಾಗಿ ಮುಖ್ಯಮಂತ್ರಿ ಪದಕ್ಕೆ ಅಜೋಯ್ ಮುಖರ್ಜಿಯವರನ್ನು ಆಯ್ಕೆ ಮಾಡುವ ನಿರ್ಧಾರಕ್ಕೆ ನಾವು ಬರಬೇಕಾಯಿತು. ಸರಕಾರದಲ್ಲಿ ಸಿಪಿಐ(ಎಂ)ನ ಪ್ರತಿನಿಧಿಯಾಗಿ ನನಗೆ ಹಣಕಾಸು ಮತ್ತು ಸಾರಿಗೆ ಖಾತೆಗಳೊಂದಿಗೆ ಉಪ ಮುಖ್ಯಮಂತ್ರಿ ಪದವಿಯನ್ನು ಕೊಡಲಾಯಿತು. ಪಕ್ಷದ ಇನ್ನಿಬ್ಬರು ಮುಖಂಡರುಗಳಾದ ಹರೇಕೃಷ್ಣ ಕೋನಾರ್ ಮತ್ತು ನಿರಂಜನ ಸೆನ್ ಗುಪ್ತ ಅವರಿಗೆ ಅನುಕ್ರಮವಾಗಿ ಭೂ ಸುಧಾರಣೆ ಮತ್ತು ನಿರಾಶ್ರಿತರ ಪುನರ್ವಸತಿಗಳ ಜೊತೆಯಲ್ಲಿ ಜೈಲು ಖಾತೆಗಳನ್ನು ನೀಡಲಾಯಿತು.

32 ಅಂಶಗಳ ಕಾರ್ಯಕ್ರಮದ ಆಧಾರದ ಮೇಲೆ ಪಶ್ಚಿಮ ಬಂಗಾಳದಲ್ಲಿ ಸಂಯುಕ್ತ ರಂಗ ಸರಕಾರ ರಚಿಸಲಾಗಿದ್ದು ಒಂದು ಚಾರಿತ್ರಿಕ ಘಟನೆಯಾಯಿತು. ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಾ ಕಾಂಗ್ರೆಸ್ ತಳೆದಿದ್ದ ನಿಲುವಿಗೆ ತದ್ವಿರುದ್ಧ ಧೋರಣೆ ಅನುಸರಿಸಿ ಜನಪರ ಹಾಗೂ ಪ್ರಜಾಸತ್ತಾತ್ಮಕ ಆಡಳಿತ ನಿರ್ವಹಣೆಯ ಕ್ರಮಗಳನ್ನು ಕೈಗೊಳ್ಳಲು ಸಂಯುಕ್ತ ರಂಗ ಸರಕಾರ ಮುಂದಾಯಿತು. ಪ್ರತಿನಿಧಿಸುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳಿಗೆ, ಚಳುವಳಿ ಮಾಡುವ ಹಕ್ಕು, ಪ್ರತಿಭಟನೆಯ ಹಕ್ಕು, ಜೀವನ ಮತ್ತು ಜೀವನೋಪಾಯದ ಅತ್ಯಗತ್ಯತೆಯನ್ನು ಎತ್ತಿ ಹಿಡಿಯುವುದು ಮುಂತಾದವುಗಳಿಗೆ ಮಾನ್ಯತೆ ದೊರೆತು ಹೊಸತೊಂದು ವಾತಾವರಣ ಮೂಡಿಬಂತು.

ಕಾಂಗ್ರೆಸ್ ಸರಕಾರದ ಸಮಯದಲ್ಲಿ ಯೋಚಿಸಲೂ ಆಗದಂಥಾ ಪ್ರಜಾಸತ್ತಾತ್ಮಕ ಹಕ್ಕುಗಳ ಜಾರಿ ಮತ್ತು ಪ್ರಜಾಸತ್ತಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ವಿರೋಧ ಪಕ್ಷಗಳಿಗೆ ಅವಕಾಶ ಮಾಡಿಕೊಡಲಾಯಿತು.

ಭೂ ಸುಧಾರಣೆಗಳನ್ನು ಜಾರಿ ಮಾಡುವುದರತ್ತ ವಿಶೇಷ ಪ್ರಯತ್ನಗಳನ್ನು ಸಂಯುಕ್ತ ರಂಗ ಸರಕಾರ ಮಾಡಿತು. ಸಂಯುಕ್ತ ರಂಗ ಸರಕಾರ ಅಧಿಕಾರದಲ್ಲಿ ಕೆಲವೇ ಕೆಲವು ತಿಂಗಳುಗಳ ಅವಧಿಯಲ್ಲಿ ಎಷ್ಟು ದೊಡ್ಡ ಪ್ರಮಾಣದ ಸಾಧನೆಗಳನ್ನು ಮಾಡಲಾಯಿತೆಂದರೆ ಕೃಷಿ ಕೂಲಿಕಾರರು ಮತ್ತು ಗ್ರಾಮಾಂತರ ಬಡವರಿಗೆ 23.8 ಲಕ್ಷ ಎಕರೆಗಳಷ್ಟು ಭೂಮಿತಿ ಹೆಚ್ಚುವರಿ ಭೂಮಿಯನ್ನು ಪುನರ್‌ಹಂಚಿಕೆ ಮಾಡಲಾಯಿತು. ಕಲಕತ್ತಾ ಟ್ರಾಮ್‌ವೇಸ್ ಆಡಳಿತವನ್ನು ಸಂಯುಕ್ತ ರಂಗ ಸರಕಾರ ವಹಿಸಿಕೊಂಡಿತು ಮತ್ತು ಹಿಂದಿನ ಪೂರ್ವ ಪಾಕಿಸ್ತಾನದಿಂದ ಹೊರದೂಡಲ್ಪಟ್ಟ ಬಂದಿದ್ದವರ ಸ್ಥಿತಿಯನ್ನು ಉತ್ತಮಪಡಿಸಲು ಸಾಕಷ್ಟು ಪರಿಶ್ರಮ ಪಟ್ಟಿತು.

ಆದರೆ ಪರಿಸ್ಥಿತಿ ಬೇಗನೆ ಹದಗೆಟ್ಟಿತು. ಕೇಂದ್ರ ಕಾಂಗ್ರೆಸ್ ಸರಕಾರ ರಾಜ್ಯ ಕಾಂಗ್ರೆಸ್ ಘಟಕ, ಪಟ್ಟಭದ್ರರು, ಪೋಲೀಸ್ ಮತ್ತು ಅಧಿಕಾರಿಗಳ ಒಂದು ವಿಭಾಗ ಎಲ್ಲರೂ ಕಲೆತು ಜನಪ್ರಿಯವಾಗಿ ಚುನಾಯಿತವಾದ ಸರಕಾರವನ್ನು ಬೀಳಿಸುವ ಸಂಚನ್ನು ನಡೆಸಿದರು. ನಮಗೆ ಇದೊಂದು ಹೊಸ ಅನುಭವ ಮತ್ತು ಎಂತಹ ಸಂಕೀರ್ಣ ಹಾಗೂ ಕಷ್ಟದ ಪರಿಸ್ಥಿತಿಯು ನಮ್ಮ ಮುಂದಿದೆ, ನಮ್ಮ ಎದುರಾಳಿಗಳನ್ನು ಸಂಭಾಳಿಸುವಾಗ ಎಷ್ಟು ತಾಳ್ಮೆಯಿಂದ ಇರಬೇಕು ಎನ್ನುವುದನ್ನು ನಾವು ತ್ವರಿತವಾಗಿ ಅರಿತೆವು. ಕಾಂಗ್ರೆಸ್ ಎರಡು ಪಿತೂರಿಗಳನ್ನು ನಡೆಸಿತು. ಒಂದನೆಯದಾಗಿ ಕೆಲವು ಕಾಂಗ್ರೆಸ್ ವಿರೋಧಿ ಬಣಗಳನ್ನು ಮುಗಿಸುವುದು ಅಥವಾ ಅವರನ್ನು ಶಕ್ತಿಗುಂದಿಸುವುದು ಹಾಗೂ ಎಡ ಕಾರ್ಯಕರ್ತರ ನಡುವೆ ಒಡಕನ್ನು ಹುಟ್ಟು ಹಾಕಲು ಪ್ರಯತ್ನಿಸುವುದು, ಎರಡನೆಯದಾಗಿ, ಸಿಪಿಐ(ಎಂ) ವಿರುದ್ಧ ಸುಳ್ಳುಗಳನ್ನು ಅಸತ್ಯಗಳನ್ನು ಮತ್ತು ಮಿಥ್ಯಾಪವಾದಗಳನ್ನು ತಮ್ಮ ಶಕ್ತಿಮೀರಿ ಹರಿಯಬಿಡುವುದು.

ಪಟ್ಟಭದ್ರರ ಒಳಸಂಚು

ರಂಗ ಸರಕಾರವು ಕೈಗೊಂಡ ಕಾರ್ಯಕ್ರಮಗಳಿಂದಾಗಿ ಅದರಲ್ಲೂ ವಿಶೇಷವಾಗಿ ಭೂಸುಧಾರಣೆ ಕ್ರಮಗಳಿಂದಾಗಿ ಆತಂಕಗೊಂಡ ಪಟ್ಟಭದ್ರರು ನಡೆಸಿದ ಒಳಸಂಚಿಗೆ ರಂಗದ ಕೆಲವು ಅಂಗಪಕ್ಷಗಳು ಬಹಳ ಬೇಗನೇ ಬಲಿ ಬೀಳಲು ಶುರು ಮಾಡಿದವು. ಪ್ರಜಾ ಸೋಷಲಿಸ್ಟ್ ಪಕ್ಷದ ನಾಯಕ ಪ್ರಫುಲ್ಲ ಘೋಷ್‌ರವರು ರಂಗ ವಿರೋಧಿ ಗುಂಪಿನ ನೇತೃತ್ವ ವಹಿಸಿದರು. 1957ರಲ್ಲಿ ಕಾಂಗ್ರೆಸ್‌ನಿಂದ ಪಿಎಸ್‌ಪಿಗೆ ಹಾರಿದ್ದ ಈ ಘೋಷ್, 1967ರ ಸಂಯುಕ್ತ ರಂಗ ಸರಕಾರದಲ್ಲಿ ಬಾಂಗ್ಲಾ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಆಹಾರ ಮಂತ್ರಿಯಾಗಿದ್ದರು. ಸಂಯುಕ್ತ ರಂಗದ ನೀತಿಗಳನ್ನು ಜಾರಿ ಮಾಡಲು ಎಂದಿಗೂ ಅವರು ಆಸಕ್ತಿ ವಹಿಸಿರಲಿಲ್ಲ ಮತ್ತು ಲಾಭಕೋರರ ಹಾಗೂ ಕಾಳಸಂತೆಕೋರರ ವಿರುದ್ಧ ಕನಿಷ್ಠ ಆಡಳಿತಾತ್ಮಕ ಕ್ರಮಗಳನ್ನೂ ಕೈಗೊಳ್ಳಲಿಲ್ಲ. ನಮ್ಮ ಯಾವ ಮಾತಿಗೂ ಅವರು ಕಿವಿಗೊಡುತ್ತಿರಲಿಲ್ಲ. ಅಂತಿಮವಾಗಿ ಅವರು ಪ್ರತಿಗಾಮಿ ಶಕ್ತಿಗಳೊಡನೆ ಕೈಜೋಡಿಸ ಬಯಸಿದರು, ರಂಗ ಸರಕಾರವನ್ನು ಬೀಳಿಸಲು ತನ್ನ ಗುಪ್ತ ಕಾರ್ಯಾಚರಣೆಯನ್ನು ಮುಂದುವರಿಸಿದರು. 1967ರ ನವಂಬರ್ 4ರಂದು ಘೋಷ್ ತನ್ನ ಸಹಯೋಗಿಗಳೊಂದಿಗೆ ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟರು ಮತ್ತು ಕಾಂಗ್ರೆಸ್‌ನ ಕೇಂದ್ರ ನಾಯಕರೊಂದಿಗೆ ಸೇರಿಕೊಂಡರು. ಸಂಯುಕ್ತರಂಗ ಸರಕಾರವನ್ನು ಕೆಳಗಿಳಿಸಲು ಅಜೋಯ್ ಮುಖರ್ಜಿ ಕೂಡಾ ಪಿತೂರಿ ನಡೆಸುತ್ತಿದ್ದಾರೆಂಬ ಗಾಳಿ ಸುದ್ದಿ ಹರಡಿತು. ಆದಾಗ್ಯೂ, ಮಂತ್ರಿಮಂಡಲದಲ್ಲಿ ಮುಂದುವರೆಯುವಂತೆ ಅವರ ಮನ ಒಲಿಸಲು ಸಾಧ್ಯವಾಯಿತು.

ಸಿಪಿಐ(ಎಂ)ನ ಕರೆಯ ಮೇರೆಗೆ ನವಂಬರ್ 5ರಂದು ಒಂದು ಬೃಹತ್ ಬಹಿರಂಗ ಸಭೆಯನ್ನು ಬ್ರಿಗೇಡ್ ಮೈದಾನದಲ್ಲಿ ಏರ್ಪಡಿಸಲಾಯಿತು. ಸಂಯುಕ್ತ ರಂಗ ಸರಕಾರವನ್ನು ಪತನಗೊಳಿಸಲು ಕಾಂಗ್ರೆಸ್ ಮತ್ತು ಪ್ರತಿಗಾಮಿ ಶಕ್ತಿಗಳು ನಡೆಸುತ್ತಿದ್ದ ಪ್ರಯತ್ನಗಳ ವಿರುದ್ಧ ಐಕ್ಯ ಹೋರಾಟವನ್ನು ಮುಂದುವರಿಸಬೇಕೆಂಬ ಕರೆಯನ್ನು ಆ ಸಭೆಯಿಂದ ಕೊಡಲಾಯಿತು. ವಿಶ್ವಾಸ ದ್ರೋಹಿ ಶಾಸಕರುಗಳ ಸಹಾಯ ಪಡೆದು ಮತ್ತೆ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತರುವ ಪಿತೂರಿಯನ್ನು ತಡೆಯಬೇಕು ಮತ್ತು ರಾಷ್ಟ್ರಪತಿ ಆಡಳಿತ ಹೇರಲು ನಾವು ಒಪ್ಪುವುದಿಲ್ಲ, ರಂಗವನ್ನು ತೊರೆದ ಎಲ್ಲಾ ಶಾಸಕರೂ ವಿಧಾನಸಭೆಗೆ ರಾಜೀನಾಮೆ ನೀಡಿ ಜನರಿಂದ ಹೊಸತಾಗಿ ಆದೇಶ ಪಡೆಯಬೇಕೆಂಬ ಕರೆಯನ್ನು ಬಹಿರಂಗ ಸಭೆ ನೀಡಿತು. 'ವಿಶ್ವಾಸದ್ರೋಹಿಗಳಿಗೆ ಕ್ಷಮೆಯಿಲ್ಲ' ಎಂಬ ಕೂಗು ಎಲ್ಲಾ ಕಡೆ ಮಾರ್ದನಿಗೊಂಡಿತು.

ಸಮಯಸಾಧಕರ ಅಧಿಕಾರ ಗ್ರಹಣ ಪ್ರಯತ್ನ

ವಿಧಾನಸಭೆಯ ಅಧಿವೇಶನವನ್ನು ಡಿಸೆಂಬರ್ 18ರಂದು ಕರೆಯಬೇಕೆಂದು ಸಂಯುಕ್ತ ರಂಗ ಸರಕಾರವು ರಾಜ್ಯಪಾಲ ಧರ್ಮವೀರರವರನ್ನು ಕೇಳಿಕೊಂಡಿತು. ಅವರು ನಮ್ಮ ಕೋರಿಕೆಯನ್ನು ಮನ್ನಿಸದೆ ನವಂಬರ್ 21ರಂದು ಸಂಯುಕ್ತ ರಂಗ ಸರಕಾರವನ್ನು ವಜಾ ಮಾಡಿದರು. ಆನಂತರ, ವಿಶ್ವಾಸದ್ರೋಹಿಗಳ ಮತ್ತು ಸಮಯಸಾಧಕರ ಮುಖಂಡ ಪ್ರಫುಲ್ಲ ಘೋಷ್‌ರನ್ನು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಅವಕಾಶ ಮಾಡಿಕೊಟ್ಟರು. ಆ ಹೊಸ ಸರಕಾರಕ್ಕೆ ಕಾಂಗ್ರೆಸ್, ಮುಸ್ಲಿಂಲೀಗ್ ಮತ್ತು ಸಿಪಿಐ ಪಕ್ಷಗಳ ಬೆಂಬಲ ದೊರೆಯಿತು. ಬಹಳ ದಿನಗಳ ತರುವಾಯ, ಇಂದಿರಾಗಾಂಧಿಯವರ ಒತ್ತಡಕ್ಕೆ ಬಲಿ ಬಿದ್ದು ತಾನು ಹಾಗ ಮಾಡಬೇಕಾಯಿತೆಂಬ ಸಂಗತಿಯನ್ನು ಧರ್ಮವೀರವರು ನನ್ನಲ್ಲಿ ತೋಡಿಕೊಂಡರು. ಆದರೆ ಪಶ್ಚಿಮ ಬಂಗಾಳದ ಜನ ಈ ಅವಮಾನವನ್ನು ಸಹಿಸಲು ಸಿದ್ಧರಿರಲಿಲ್ಲ. ಎಲ್ಲಾ ಜನವಿಭಾಗಗಳನ್ನೊಳಗೊಂಡ ದೊಡ್ಡ ಚಳುವಳಿಯನ್ನು ಕಟ್ಟಿ ಬೆಳೆಸಲಾಯಿತು. ವಿಧಾನಸಭೆಯನ್ನು ವಿಸರ್ಜಿಸಬೇಕು, ಮಧ್ಯಂತರ ಚುನಾವಣೆಯನ್ನು ಘೋಷಿಸಬೇಕು, ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕು ಮತ್ತು ಎಲ್ಲಾ ದಮನಕಾರೀ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕು ಎಂಬ ಬೇಡಿಕೆಯನ್ನು ನಾವು ಮುಂದಿಟ್ಟೆವು.

ಈ ಮಧ್ಯೆ, ನವಂಬರ್ 20ರಂದು ವಿಧಾನಸಭಾಧ್ಯಕ್ಷರಾದ ಬಿಜಯ್ ಬ್ಯಾನರ್ಜಿಯವರೇ ಘೋಷ್ ಸರಕಾರವು ಸಂವಿಧಾನ ಬಾಹಿರವಾದುದು ಎಂದು ಘೋಷಿಸಿ ವಿಧಾನಸಭೆಯನ್ನು ಮುಂದೂಡಿದರು. ಆದರೆ ರಾಜ್ಯಪಾಲರ ಆಜ್ಞೆಯನ್ನು ಅನುಸರಿಸಿ ಫೆಬ್ರವರಿ 14ರಂದು ವಿಧಾನಸಭೆಯನ್ನು ಮತ್ತೆ ಕರೆಯಲಾಯಿತು. ತನ್ನ ಹಿಂದಿನ ನಿಲುವಿನಿಂದ ವಿಚಲಿತ ರಾಗದ ವಿಧಾನಸಭಾಧ್ಯಕ್ಷರು ನಿರಾಕರಿಸಿದ್ದರಿಂದ ಮತ್ತು ಬೇರೆಲ್ಲಾ ಪ್ರಯತ್ನಗಳೂ ವಿಫಲಗೊಂಡಿದ್ದರಿಂದಾಗಿ 1968ರ ಫೆಬ್ರವರಿ 20ರಂದು 88 ದಿನಗಳ ಪ್ರಫುಲ್ಲ ಘೋಷ್‌ರವರ ಮಂತ್ರಿಮಂಡಲ ರಾಜೀನಾಮೆ ನೀಡಲೇಬೇಕಾದ ಅನಿವಾರ್ಯ ಪರಿಸ್ಥಿತಿಗೆ ತಳ್ಳಲ್ಪಟ್ಟಿತು. ಆಗ ರಾಷ್ಟ್ರಪತಿ ಆಳ್ವಿಕೆಯನ್ನು ಪಶ್ಚಿಮ ಬಂಗಾಳದಲ್ಲಿ ತರಲಾಯಿತು.

ಎರಡನೇ ಸಂಯುಕ್ತ ರಂಗ ಸರಕಾರ

ಇದೇ ಅವಧಿಯಲ್ಲಿ ನಮ್ಮ ಪಕ್ಷವು ಎಡ ತೀವ್ರವಾದಿಗಳಿಂದ ಆಂತರಿಕ ಅಪಾಯವನ್ನು ಎದುರಿಸಬೇಕಾಯಿತು. ಇದರ ವಿರುದ್ಧ ಒಂದು ಸೈದ್ಧಾಂತಿಕ ಸಮರವನ್ನು ನಡೆಸುತ್ತಲೇ ಅದೇ ಸಮಯದಲ್ಲಿ ಚುನಾವಣಾ ಕಣವನ್ನು ಕೂಡಾ ಪ್ರವೇಶಿಸಬೇಕಾಯಿತು. ಫೆಬ್ರವರಿ 1969ರಲ್ಲಿ ಚುನಾವಣೆಗಳು ನಡೆದವು. 12 ಪಕ್ಷಗಳ ಸಂಯುಕ್ತರಂಗವು ಚುನಾವಣೆಯಲ್ಲಿ ಒಟ್ಟು 280 ಕ್ಷೇತ್ರಗಳಲ್ಲಿ ಸೆಣಸಿತು. ಕಾಂಗ್ರೆಸ್ ಪಕ್ಷವು ಕೇವಲ 55 ಸ್ಥಾನಗಳನ್ನು ಪಡೆದು ತೃಪ್ತಿಪಟ್ಟುಕೊಳ್ಳಬೇಕಾಯಿತು. ಇದಕ್ಕೆ ಪ್ರತಿಯಾಗಿ ಸಂಯುಕ್ತ ರಂಗವು 214 ಸ್ಥಾನಗಳನ್ನು ಗದ್ದು ಸ್ಪರ್ಧಿಸಿದ್ದ 101 ಸ್ಥಾನಗಳಲ್ಲಿ 83 ಸ್ಥಾನಗಳನ್ನು ಪಡೆದ ಸಿಪಿಐ(ಎಂ) ಮೊಟ್ಟ ಮೊದಲ ಬಾರಿಗೆ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಆದಾಗ್ಯೂ ಸಹ, ಒಂದು ವಿಶಾಲ ಐಕ್ಯತೆಯನ್ನು ಕಾಪಾಡಲೋಸುಗ ಅಜೋಯ್ ಮುಖರ್ಜಿಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲಾಯಿತು. ಮತ್ತು ಉಪ ಮುಖ್ಯಮಂತ್ರಿತ್ವದ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಲಾಯಿತು. ಸಾರ್ವಜನಿಕ ಆಡಳಿತ ಮತ್ತು ಗೃಹ (ಪೋಲೀಸ್‌ರನ್ನು ಒಳಗೊಂಡಂತೆ) ಖಾತೆಗಳನ್ನು ನಾನು ಹೊಂದಿದ್ದೆ.

ಹರೇಕೃಷ್ಣ ಕೋನಾರ್(ಭೂ ಮತ್ತು ಭೂಕಂದಾಯ), ನಿರಂಜನ್ ಸೇನ್‌ಗುಪ್ತ (ನಿರಾಶ್ರಿತರು, ಪರಿಹಾರ ಮತ್ತು ಪುನರ್ವಸತಿ, ಜೈಲುಗಳು), ಸತ್ಯಪ್ರಿಯ ರಾಯ್(ಶಿಕ್ಷಣ), ಅಬ್ದುಲ್ಲಾ ರಸೂಲ್ (ಸಾರಿಗೆ), ಪ್ರವೀರ್ ರಾಯ್(ಮೀನುಗಾರಿಕೆ), ಕೃಷ್ಣಪಾದ ಘೋಷ್(ಕಾರ್ಮಿಕ), ಕೃಷ್ಣಚಂದ್ರ ಹಲ್ದಾರ್(ಅಬ್ಕಾರಿ) ಮತ್ತು ಗುಲಾಮ್ ಮಜ್ದಾನಿ(ಪಾಸ್‌ಪೋರ್ಟ್ ಮತ್ತು ನಾಗರಿಕ ರಕ್ಷಣೆ) ಇವರುಗಳು ಸಿಪಿಐ(ಎಂ)ನ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಈ ಎರಡನೇ ಸಂಯುಕ್ತ ರಂಗ ಸರಕಾರವು 13 ತಿಂಗಳವರೆಗೆ ಅಂದರೆ ಫೆಬ್ರವರಿ 25, 1969ರಿಂದ ಮಾರ್ಚ್ 29, 1970ರವರೆಗೆ ನಡೆಯಿತು. ಕಾರ್ಮಿಕರು, ರೈತರು ಮತ್ತು ಇತರೆ ದುಡಿಯುವ ಜನವಿಭಾಗಗಳು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಪ್ರತಿಗಾಮಿ ಶಕ್ತಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಮುನ್ನಡೆಯುತ್ತಿರುವಾಗಲೇ, ಈ ಪ್ರಕ್ರಿಯೆಯ ಮಧ್ಯೆ ಸಂಯುಕ್ತ ರಂಗ ಸರಕಾರದ ಅಸ್ತಿತ್ವವನ್ನು ಹೋರಾಟದ ಆಯುಧವನ್ನಾಗಿ ಬಳಸುತ್ತಿರುವಾಗಲೇ ಮತ್ತು ಜನಕೋಟಿಯ ಹೋರಾಡುವ ಶಕ್ತಿಯು ಬಹುಬೇಗನೇ ಗಟ್ಟಿಯಾಗುತ್ತಾ ಬೆಳೆಯುತ್ತಿರುವಾಗಲೇ ಸಂಯುಕ್ತ ರಂಗ ಸರಕಾರವನ್ನು ಉರುಳಿಸಲು ಮತ್ತು ಹೋರಾಟದ ಮೊನಚನ್ನು ಮೊಂಡಾಗಿಸಲು ಆಳವಾದ ಪಿತೂರಿಯನ್ನು ನಡೆಸಲಾಯಿತು.

ಮತ್ತೆ ರಾಷ್ಟ್ರಪತಿ ಆಳ್ವಿಕೆ ಫ್ಯಾಸಿಸ್ಟ್ ಭಯೋತ್ಪಾದನೆ ಆರಂಭ

ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದಿದೆ ಎನ್ನುವ ನೆಪದಲ್ಲಿ ಸ್ವತಃ ಮುಖ್ಯಮಂತ್ರಿಯವರೇ ನಗರದ ಮಧ್ಯಭಾಗದ ಕರ್ಜನ್ ಪಾರ್ಕಿನಲ್ಲಿ ಕುಳಿತು ಉಪವಾಸ ಮುಷ್ಕರ ಕಾರ್ಯಕ್ರಮ ಪ್ರಾರಂಭಿಸಿದರು. ಅದೇ ಸಮಯದಲ್ಲಿ ಸಿಪಿಐ(ಎಂ) ಭಾಗಿಯಾಗಿಲ್ಲದ ಸರಕಾರ ರಚಿಸುವ ಚಳುವಳಿ ಹೂಡಿದರು. ಮಾರ್ಚ್ 13, 1970ರಂದು ಅಜೋಯ್ ಮುಖರ್ಜಿ ರಾಜೀನಾಮೆ ನೀಡಿದಾಗ ಕೆಲವೇ ಕೆಲವು ಎಡಪಕ್ಷಗಳನ್ನು ಮಾತ್ರ ಅವರಿಗೆ ದಾರಿತಪ್ಪಿಸಲು ಸಾಧ್ಯವಾಯಿತಷ್ಟೆ. ಮುಂದಿನ ಸರಕಾರವನ್ನು ರಚಿಸುವ ನ್ಯಾಯ

➡

ವಿದೇಶೀ ಬಂಡವಾಳವೆಂಬ ಮರೀಚಿಕೆ

ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎನ್ನುತ್ತಾರಲ್ಲ ಹಾಗಿದೆ ಈ ವಿದೇಶೀ ನೇರ ಹೂಡಿಕೆ. ದೂರದಿಂದ ನೋಡಿದರೆ ಬರುತ್ತದೆ ಎನಿಸುತ್ತದೆ(ನಮ್ಮ ಉದಾರೀಕರಣವಾದಿಗಳಿಗೆ). ಆದರೆ ಬರುವುದಿಲ್ಲ. ಉದಾರೀಕರಣ ಮಾಡುತ್ತ ಹೋದಂತೆಲ್ಲ ಅಲ್ಪಸ್ವಲ್ಪ ಪ್ರಮಾಣದಲ್ಲಿ ಬಂದು ಇದು ನಮ್ಮ ಉದಾರೀಕರಣವಾದಿಗಳೊಂದಿಗೆ ಕಣ್ಣು ಮುಚ್ಚಾಲೆ ಆಡುತ್ತದೆ. ಆದ್ದರಿಂದಲೇ ಉದಾರೀಕರಣವಾದಿಗಳು ವಿದೇಶಿ ನೇರ ಹೂಡಿಕೆ ಇನ್ನೂ ಹೆಚ್ಚಾಗಿ ಹರಿದುಬರಲು ಇನ್ನೂ ಹೆಚ್ಚು ಉದಾರೀಕರಣ ಮಾಡಬೇಕು ಎಂದು ಹೇಳುತ್ತಲೇ ಇರುತ್ತಾರೆ.

ಇದು ಮರುಭೂಮಿಯಲ್ಲಿ ಮರೀಚಿಕೆ(ನೀರಿದ ಕಾಯುವಿಕೆಯಿಂದ ನೀರಿನ ಕೊಳವಂತೆ ಕಾಣುವ ದೃಶ್ಯ) ಕಂಡಂತಾಗಿ ಅದನ್ನು ಬೆನ್ನಟ್ಟಿ ಹೋದಂತೆ ಆಗಿದೆ.

ಈಗ ಉದಾರೀಕರಣವಾದಿ ಅರ್ಥಶಾಸ್ತ್ರಜ್ಞರು ವಿದೇಶೀ ನೇರ ಹೂಡಿಕೆ ದೇಶದೊಳಗೆ ಹರಿದು ಬರುವ ಪ್ರಮಾಣದಲ್ಲಿ ಆಗಿರುವ ಕಡಿತದಿಂದ ಆತಂಕ ಗೊಂಡಿದ್ದಾರೆ. ಡಾ|| ವಿ.ಆರ್.ಪಂಚಮುಖಿ ಎಂಬ ಅರ್ಥಶಾಸ್ತ್ರಜ್ಞರು ದೇಶದಲ್ಲಿ ಉಂಟಾಗಿರುವ ರಾಜಕೀಯ ಅಸ್ಥಿರತೆಯಿಂದ ಈ ವಿದೇಶಿ ಹೂಡಿಕೆ ಕಡಿಮೆ ಆಗುತ್ತಿದೆ ಎನ್ನುತ್ತಾರೆ. ಜೊತೆಗೆ ಇನ್ನೂ ಉದಾರೀಕರಣ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು ಎನ್ನುತ್ತಾರೆ.

ಎನ್.ಸಿ.ಎ.ಇ.ಆರ್. ಎಂಬ ಅರ್ಥಶಾಸ್ತ್ರ ಸಂಸ್ಥೆಯ ನಿರ್ದೇಶಕರಾದ ರಾಕೇಶ್ ಮೋಹನ್ ಎಂಬ ಅರ್ಥಶಾಸ್ತ್ರಜ್ಞರೂ ಇದೇ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

ದೇಶದೊಳಗೆ ಇಂದು ಆರ್ಥಿಕ ಅಸ್ಥಿರತೆ ಉಂಟಾಗಿದೆ ನಿಜ, ಅದಕ್ಕೆ ಕಾರಣವನ್ನು ಅವರು ಕಂಡುಹಿಡಿಯುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಅದಕ್ಕೆ ಕಾರಣರಾದವರನ್ನು ದೂಷಿಸಬಹುದಾಗಿತ್ತು. ಬಹುಶಃ ಅರ್ಥಶಾಸ್ತ್ರಜ್ಞರು ರಾಜಕೀಯದ ಬಗ್ಗೆ ಟಿಪ್ಪಣಿ ಮಾಡಬಾರದೆಂಬ ನಿಲುವು ಅವರದಿರಬಹುದು. ಯಾಕೆಂದರೆ ಈ ರಾಜಕೀಯ ಅಸ್ಥಿರತೆ(?)ಯ ಸಂದರ್ಭದಲ್ಲಿ ಆರ್ಥಿಕವನ್ನು ರಾಜಕೀಯದಿಂದ ದೂರ ಇಡಬೇಕೆಂಬ ಘನ ಮಾತುಗಳೂ ಕೇಳಿ ಬಂದಿವೆ. ಬೂರ್ಜ್ವಾ ಅರ್ಥಶಾಸ್ತ್ರಜ್ಞರೆಂಬುದು ಜೀವಿಗಳ ಬೌದ್ಧಿಕ ದಿವಾಳಿಕೋರತನಕ್ಕೆ ಇದಕ್ಕಿಂತ ಪುರಾವೆ ಬೇಕೆ?

ವಾರದ
ಆರ್ಥಿಕ
ಟಿಪ್ಪಣಿಗಳು

ಜಿ.ಎಸ್.ಮಣಿ

ಕೋಕಾಯಣ

ಕೋಕೋ-ಕೋಲಾ ಮತ್ತು ಪೆಪ್ಸಿಗಳೆಂಬ ಎರಡು ಬಹುರಾಷ್ಟ್ರೀಯ ಕಂಪನಿಗಳು ಭಾರತದೊಳಕ್ಕೆ ಬಂದಾಗಿನಿಂದ ಒಂದಲ್ಲ ಒಂದು ಕಿತಾಪತಿ ನಡೆಸುತ್ತಲೇ ಬಂದಿವೆ. ಇದು ಅವರಿಗೆ ಸಾಮಾನ್ಯ. ದೇಶಗಳ ಕಾನೂನು/ಮೌಲ್ಯ ಇತ್ಯಾದಿಗಳನ್ನು ಎಗ್ಗಿಲ್ಲದೆ ಮುರಿಯುವುದು, ಕಾನೂನುಗಳನ್ನು ಪ್ರಶ್ನಿಸುವುದು ಇವೆಲ್ಲ ದಿನ ನಿತ್ಯದ ಚಟುವಟಿಕೆಗಳು. ಲಾಭ ಬರುತ್ತದೆಂದಾದರೆ ಏನೂ ಬೇಕಾದರೂ ಮಾಡಲು ಅವು ಸಿದ್ಧ. ಲಾಭವೇ ಅವರ ಪರಮ ನೀತಿ-ಪರಮ ಮೌಲ್ಯ.

ಈಗ ಎಂಆರ್‌ಟಿಪಿಸಿ ಅಂದರೆ ಏಕಸ್ವಾಮ್ಯತೆ ಮತ್ತು ಪ್ರತಿಬಂಧಕ ವ್ಯಾಪಾರೀ ಸಂಹಿತೆಯ ಮಂಡಳಿ ಕೋಕಾಕೋಲದ ವಿರುದ್ಧ 23 ವಿಚಾರಣಾ ಪ್ರಕರಣಗಳನ್ನು ದಾಖಲ್ ಮಾಡಿಕೊಂಡಿವೆಯಂತೆ.

ಇವರಲ್ಲಿ 22 ಒಪ್ಪಂದಗಳಿಗೆ ಸಂಬಂಧಪಟ್ಟವಾದರೆ ಒಂದು ಸ್ಪರ್ಧಾ ಯೋಜನೆಗೆ ಸಂಬಂಧ ಪಟ್ಟದ್ದು.

ಕೋಕಾ-ಕೋಲಾ ಬಾಟಲಿ ತುಂಬಿಸುವುದಕ್ಕೆ ಹಲವರೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿದೆ. ಈ ಒಪ್ಪಂದಗಳನ್ನು ಅದೇ ಮುರಿದಿದೆ. ಒಪ್ಪಂದಗಳಾದ ಮೇಲೆ ತನ್ನ ಮನಸ್ಸಿಗೆ ಬಂದ ಯಾವುದೋ ಒಂದು ನಿಯಮವನ್ನು ಅದು ಈ ಬಾಟಲ್ ಮಾಡುವುದರ ಮೇಲೆ ಹೇರಿತು - ಅದನ್ನು ಮೀರಿದರೆ ಒಪ್ಪಂದವನ್ನು ಮುರಿಯಿತು.

ಇಂತಹ ವ್ಯಾಪಾರಿ ಧೋರಣೆಗಳಿಂದ ಈ ಕಂಪನಿಗಳೂ ಭಾರತದಲ್ಲಿನ ವ್ಯಾಪಾರಿ ವಾತಾವರಣವನ್ನೇ ಹಾಳುಗೆಡುವುತ್ತಾರೆ. ಇರುವ ಅಲ್ಪಸ್ವಲ್ಪ ಮೌಲ್ಯಗಳೂ ಇದರಿಂದಾಗಿ ಕೊಚ್ಚಿಕೊಂಡು ಹೋಗುತ್ತವೆ. ಲಾಭವೇ ಬಹುಮುಖ್ಯವಾದದ್ದಾಗುತ್ತದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಬೇಕಾಗಿರುವುದು ಇದೇ.

ಬಂಡವಾಳಿಗರ ಬಜೆಟ್ ಬಂಡವಾಳಿಗರ ಸಾಲ ನೀತಿ

ಪಿ.ಚಿದಂಬರಂ ಎಂಬ ಸಂಯುಕ್ತರಂಗದ ಮಂತ್ರಿ ಮಹೋದಯರು 1997-98 ರ ಬಜೆಟ್ ಮಂಡಿಸಿದರು. ಅದು ಬರೀ ಶ್ರೀಮಂತರಿಗೇ, ಉಳ್ಳವರಿಗೇ ಅನುಕೂಲ ನೀಡುವ ಬಜೆಟ್ ಎಂಬುದು ಈಗ ಸ್ಪಷ್ಟವಾಗಿ ಗೊತ್ತಾಗಿಹೋಗಿದೆ. ಈ ಬಜೆಟ್ ನೀಡಿದ್ದು ವರಮಾನ ತೆರಿಗೆ ನೀಡುವವರಿಗೆ ತೆರಿಗೆ ವಿನಾಯಿತಿ, ಹೆಚ್ಚು ತೆರಿಗೆ ನೀಡುವವರಿಗೆ ಹೆಚ್ಚಿನ ರಿಯಾಯಿತಿ, ಕಡಿಮೆ ನೀಡುವವರಿಗೆ ಕಡಿಮೆ ರಿಯಾಯಿತಿ. ಅಲ್ಲದೆ ಆಮದು ಸುಂಕ ಆಮದು ಮಾಡಿಕೊಳ್ಳುವವರೂ ಶ್ರೀಮಂತರೇ, ಉತ್ಪಾದನಾ ವ್ಯವಸ್ಥೆಯ ಮಾಲೀಕರು ಶ್ರೀಮಂತರೇ - ಇವರೆಲ್ಲರಿಗೆ ರಿಯಾಯಿತಿ.

ಈ ಬಜೆಟ್ ಆದಮೇಲೆ ಅದೇ ಹಾದಿಯಲ್ಲಿ 1997-98 ರ ಮೊದಲರ್ಧ ವರ್ಷಕ್ಕೆ ತನ್ನ ಹಣಕಾಸು ನೀತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಘೋಷಣೆ ಮಾಡಿದೆ.

ಈ ನೀತಿ ಬಹಳ ಮುಖ್ಯವಾದದ್ದು. ಯಾಕೆಂದರೆ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಯಾರಿಗೆ ಸಾಲ ನೀಡಬೇಕು, ಹೇಗೆ ನೀಡಬೇಕು, ಬಡ್ಡಿದರ ಎಷ್ಟು ಎಂಬಂತಹ ವಿವರಗಳೆಲ್ಲ ಇದರಲ್ಲಿ ಇರುತ್ತದೆ.

ಈಗ ಭಾರತೀಯ ರಿಸರ್ವ್ ಬ್ಯಾಂಕ್ ಘೋಷಿಸಿರುವ ನೀತಿ ದೇಶದ ಉದ್ಯಮಿಗಳಿಗೆ, ವ್ಯಾಪಾರೀಗಳಿಗೆ ಅನುಕೂಲ ಮಾಡಿಕೊಡುವುದರಲ್ಲೇ ಇದೆ. ದೇಶದ ಅನ್ನದಾತರೆಂದು ಕರೆಯುವ ರೈತರಿಗೆ ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕುಶಲ ಕೈಗಾರಿಕೆಗಳಿಗೆ ನೆರವು ನೀಡುವ ಯಾವುದೇ ಮಾತು ಇದರಲ್ಲಿ ಇಲ್ಲ. ಶ್ರೀಮಂತರ ಸಮಸ್ಯೆಗಳನ್ನೇ ಪರಿಹರಿಸುವ ಉತ್ಸುಕತೆಯ ನೀತಿ ಇದು.

ಈ ನೀತಿಯಿಂದಾಗಿ ಬೆಲೆ ಏರಿಕೆ ಇನ್ನೂ ಹೆಚ್ಚಾಗುತ್ತದೆ ಎಂಬ ಆತಂಕವನ್ನು ಆಗಲೇ ತಜ್ಞರು ವ್ಯಕ್ತಪಡಿಸಿದ್ದಾರೆ.

ಈ ನೀತಿಯ ಮುಖ್ಯ ಅಂಶಗಳನ್ನು ನೀವೇ ನೋಡಿ

- *ಬ್ಯಾಂಕ್‌ದರ ಎಂದು ಕರೆಯುವ ಬಡ್ಡಿದರವನ್ನು ಶೇ 12 ರಿಂದ 11 ಕ್ಕೆ ಇಳಿಸಲಾಗಿದೆ(ಇದು ಭಾರತೀಯ ರಿಸರ್ವ್‌ಬ್ಯಾಂಕ್ ಇತರೆ ಬ್ಯಾಂಕುಗಳಿಗೆ ನೀಡುವ ಸಾಲದ ಮೇಲೆ ಹೇರುವ ಬಡ್ಡಿದರ)*
- *30 ದಿನಗಳಿಂದ ಒಂದು ವರ್ಷಗಳವರೆಗಿನ ಠೇವಣಿಗಳ ಮೇಲಿನ ಬಡ್ಡಿದರ ಬ್ಯಾಂಕ್ ದರಕ್ಕಿಂತ ಶೇ 2 ರಷ್ಟು ಕಡಿಮೆ ಎಂದರೆ ಶೇ9.*
- *ಬ್ಯಾಂಕುಗಳ ಹಣಕಾಸು ಮೀಸಲು ಶಿಲ್ಕಿನಲ್ಲಿ ಕಡಿತ*
- *ಗರಿಷ್ಠ ಬ್ಯಾಂಕ್ ಸಾಲದ ಮಿತಿ, ರಸೂರ್ಟಿಯಂ ಸಾಲ ಇತ್ಯಾದಿಗಳಿಗೆ ಇತಿಶ್ರೀ.*
- *ಬ್ಯಾಂಕೇತರ ಹಣಕಾಸು ಕಂಪನಿಗಳಿಗೆ ಬ್ಯಾಂಕುಗಳು ಸಾಲ ನೀಡಬಹುದು ಇತ್ಯಾದಿ.*

ಮತ್ತೆ ಬಜೆಟ್ಟಿಗೆ ಬಂದಂತಹದ್ದೇ ಪ್ರತಿಕ್ರಿಯೆ - ಉದ್ಯಮಪತಿಗಳು ಮತ್ತು ವ್ಯಾಪಾರಿಗಳು ಘಟಿದೆದ್ದು ಕುಣಿಯುತ್ತಿದ್ದಾರೆ.

ರೈತರಿಗೆ ಸಹಾಯಧನ, ಬಡತನ, ನಿರುದ್ಯೋಗಿಗಳಿಗೆ ಉದ್ಯೋಗ, ಆರೋಗ್ಯ, ಶಿಕ್ಷಣ ಇತ್ಯಾದಿ ಸಾಮಾಜಿಕ ವಲಯಗಳಿಗೆ ನೆರವು ನೀಡುವ ಯೋಜನೆಗಳನ್ನು ಅವೈಜ್ಞಾನಿಕ, ದೇಶದ ಅಭಿವೃದ್ಧಿಗೆ ಮಾರಕ ಕ್ರಮಗಳೆಂದೆಲ್ಲ ಹೇಳುವ ಇವರು ತಮಗೆ ಲಾಭವಾಗುವಾಗ ಮಾತ್ರ ಕುಪ್ಪಳಿಸಿ ಕುಣಿದು ದೇಶವೇ ಉದ್ಧಾರವಾಯಿತು ಎನ್ನುತ್ತಾರೆ. ಈ ಸಾಲ ನೀತಿಯನ್ನೂ ಅದೇ ರೀತಿ ಸ್ವಾಗತಿಸಿದ್ದಾರೆ ಅವರು.

ಇದಲ್ಲವೇ ಉದಾರೀಕರಣ?

ಸಂಯುಕ್ತರಂಗದಿಂದ ಎಡರಂಗದವರೆಗೆ

➡

ಸಮ್ಮತವಾದ ಹಕ್ಕು ನಮಗಿದೆ ಎಂಬ ನಮ್ಮ ಬೇಡಿಕೆಯನ್ನು ರಾಜ್ಯಪಾಲರು ಕಡೆಗಣಿಸಿ ಕೇಂದ್ರ ಸರಕಾರದ ಆಣತಿಯನ್ನು ಪಾಲಿಸಲು ಮುಂದಾದರು. ರಾಷ್ಟ್ರಪತಿ ಆಳ್ವಿಕೆಯನ್ನು ಪಶ್ಚಿಮ ಬಂಗಾಳದಲ್ಲಿ ಮತ್ತೆ ಜಾರಿಗೆ ತರಲಾಯಿತು. ಈ ಅವಧಿಯಲ್ಲೇ ಕುಖ್ಯಾತವಾದ ಅರೆಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಪಶ್ಚಿಮ ಬಂಗಾಳದಲ್ಲಿ ಹರಿಯ ಬಿಡಲಾಯಿತು.

ಈ ಅವಧಿಯಲ್ಲಿ ಮಾರ್ಚ್ 17, 1970ರಿಂದ ಮಾರ್ಚ್ 31, 1971ರೊಳಗೆ ನಮ್ಮ ಪಕ್ಷದ ಕನಿಷ್ಠ 238 ಮುಖಂಡರ, ಕಾರ್ಯಕರ್ತರ ಮತ್ತು ಹಿತೈಷಿಗಳ ಹತ್ಯೆ ನಡೆಯಿತು. ದುರಂತವೆಂದರೆ ಈ ಸನ್ನಿವೇಶದಲ್ಲಿ ಸಂಯುಕ್ತ ರಂಗ ಸರಕಾರದ ಕೆಲವು ಅಂಗ ಪಕ್ಷಗಳು ಕಾಂಗ್ರೆಸ್‌ನ ಹಿಂದೆ ಹೋಗಲು ಇಷ್ಟಪಟ್ಟರು. ಇದರ ಪರಿಣಾಮವಾಗಿ ಈ ಎಲ್ಲಾ ಪಕ್ಷಗಳು ಬಹುಬೇಗನೇ ರಾಜಕೀಯವಾಗಿ ಮೂಲೆಗುಂಪಾದವು.

ಈ ಹಿನ್ನೆಲೆಯಲ್ಲಿ ರಾಜ್ಯದ 277 ಕ್ಷೇತ್ರಗಳಿಗಾಗಿ ಆರನೇ ವಿಧಾನಸಭಾ ಚುನಾವಣೆಗಳು ಮಾರ್ಚ್ 1971ರಲ್ಲಿ ನಡೆದವು. ಸಂಯುಕ್ತ ಎಡರಂಗ ಒಟ್ಟಾಗಿ 123 ಸ್ಥಾನಗಳನ್ನು ಪಡೆಯಿತು ಮತ್ತು ಅದರಲ್ಲಿ ಸಿಪಿಐ(ಎಂ) ಒಂದೇ 111 ಸ್ಥಾನಗಳನ್ನು ಗೆದ್ದುಕೊಂಡಿತು. ಹಾಗೆಯೇ ಆರ್‌ಸಿಪಿಐ ಮೂರು, ವರ್ಕರ್ಸ್ ಪಾರ್ಟಿ ಎರಡು, ವಿಪ್ಲವ ಬಾಂಗ್ಲಾ ಕಾಂಗ್ರೆಸ್ ಒಂದು, ಮಾರ್ಕ್ಸ್‌ವಾದಿ ಫಾರ್ವರ್ಡ್ ಬ್ಲಾಕ್ ಎರಡು ಹಾಗೂ ರಂಗದ ಬೆಂಬಲ ಪಡೆದ ಸ್ವತಂತ್ರಅಭ್ಯರ್ಥಿಗಳು ನಾಲ್ಕು ಸ್ಥಾನಗಳನ್ನು ಪಡೆದರು. ಸಿಪಿಐ, ಫಾರ್ವರ್ಡ್ ಬ್ಲಾಕ್, ಎಸ್‌ಯುಸಿ, ಘೋಷ್‌ರ ಲೀಗ್‌ಗಳನ್ನೊಳಗೊಂಡ ಎಂಟು ಪಕ್ಷಗಳ ರಂಗವು ಎಲ್ಲಾ ಸೇರಿ ಕೇವಲ 25 ಸ್ಥಾನಗಳನ್ನು ಕಾಂಗ್ರೆಸ್ 105 ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಯಿತು.

ರಾಜ್ಯಪಾಲರ ಹಳ್ಳಸ್ಸು ನಿರಾಕರಿಸಲಾಯಿತು

ಸಿಪಿಐ(ಎಂ) ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದಲ್ಲದೆ, ಅತ್ಯಂತ ಹೆಚ್ಚಿನ ಶೇಕಡಾವಾರು ಮತಗಳಿಸಿದರೂ ಕೂಡಾ ಅದಕ್ಕೆ ಸರಕಾರ ರಚಿಸಲು ಬಿಡಲಿಲ್ಲ. ಒಂದು ಜನಪ್ರಿಯ ಆದೇಶವನ್ನು ಹೇಗೆ ಕಾಲಿನ ಕಸವಾಗಿ ಕಂಡರು ಎಂಬ ಸಂಗತಿಯನ್ನು ಇಂದಿನ ಯುವ ಪೀಳಿಗೆ ತಿಳಿಯಬೇಕು. ಕೇಂದ್ರದ ಕಾಂಗ್ರೆಸ್ ಸರಕಾರದ ಸಲಹೆಯ ಮೇರೆಗೆ ಅಜೋಯ್ ಮುಖರ್ಜಿಯವರ ನೇತೃತ್ವದ 'ಸಮಿಶ್ರ ಸರಕಾರ' ರಚಿಸಲು ಅವಕಾಶ ಮಾಡಿಕೊಡುವ ಸಂಚನ್ನು ರಾಜ್ಯಪಾಲರು ಹೂಡಿದರು. ಅಜೋಯ್ ಮುಖರ್ಜಿಯವರ ಬಾಂಗ್ಲಾ ಕಾಂಗ್ರೆಸ್‌ಗೆ ಕೇವಲ ಐದು ಸ್ಥಾನಗಳು ಮಾತ್ರ ದಕ್ಕಿದ್ದವು ಮತ್ತು ಸ್ವತಃ ಮುಖರ್ಜಿಯವರೇ ನನ್ನ ಎದುರು ಬಡನಗೋರ್‌ನಲ್ಲಿ ಸ್ಪರ್ಧಿಸಿ 12000ಕ್ಕೂ ಹೆಚ್ಚಿನ ಮತಗಳ ಅಂತರದಿಂದ ಸೋತಿದ್ದರು (ಮಿಡ್ನಾಪುರದ ಮತ್ತೊಂದು ಕ್ಷೇತ್ರದಲ್ಲಿ ಅಂತೂ ಹೇಗೋ ಗೆದ್ದುಕೊಂಡಿದ್ದರು). ವಿಷಾದನೀಯ ಸಂಗತಿಯೆಂದರೆ ಕೆಲವು ಎಡಪಕ್ಷಗಳು ಈ ಇಡೀ ದುಷ್ಟ ಪಿತೂರಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವು. 1971ರ ಚುನಾವಣೆಗೆ ಸ್ವಲ್ಪ ದಿನಗಳ ಮುಂಚೆ, ಗೌರವಾನ್ವಿತ ಜನಪ್ರಿಯ ಮುಖಂಡರಾಗಿದ್ದ ಹೇಮಂತ್ ಬೋಸ್ ರವರನ್ನು ಹೇಡಿತನದಿಂದ ಕೊಲೆ ಮಾಡಿ ಅದರ ಜವಾಬ್ದಾರಿಯನ್ನು ಯಾವುದೇ ಆಧಾರವಿಲ್ಲದೆ ನಮ್ಮ ಮೇಲೆ ಹೊರಿಸಿದ್ದರು ಎಂಬ ಸಂಗತಿಯನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಅವರ ಪಿತೂರಿಯ ಭಾಗವಾಗಿ ಈ ವಿಷಯದ ಬಗ್ಗೆ ಅಗಾಧ ತಪ್ಪು ತಿಳುವಳಿಕೆ ಉಂಟಾಗಿತ್ತು. ತದನಂತರದಲ್ಲಿ ಸತ್ಯ ಹೊರ ಬಂದಾಗ ತಪ್ಪು ತಿಳುವಳಿಕೆಗಳೆಲ್ಲಾ ಪರಿಹಾರವಾದವು. ಆದರೆ, ವಾಸ್ತವಾಂಶವೆಂದರೆ ಈ ಪ್ರಶ್ನೆಯ ಮೇಲೆ ನಮ್ಮ ಮೇಲೆ ಅಪವಾದ ಹೊರಿಸಿದ್ದಾಗಲೇ ನಾವು ಚುನಾವಣೆಯನ್ನು ಎದುರಿಸಬೇಕಾಯಿತು.

ಈ ಎಲ್ಲಾ ಕುತಂತ್ರಗಳಿದ್ದಾಗ್ಯೂ ಅಜೋಯ್ ಮುಖರ್ಜಿಯವರ ಸಮಿಶ್ರ ಸರಕಾರವನ್ನು ಅಧಿಕಾರದಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆಂತರಿಕ ಕಚ್ಚಾಟಗಳಿಂದ ಸರಕಾರ ಕೆಳಗಿಳಿಯಿತು. ಮೂರನೇ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಜೂನ್ 25, 1971ರಂದು ರಾಷ್ಟ್ರಪತಿ ಆಳ್ವಿಕೆ ಹೇರಲಾಯಿತು. ವಿಧಾನಸಭೆಯನ್ನು ವಿಸರ್ಜಿಸಲಾಯಿತು. ಅರೆ ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಮತ್ತೆ ಹರಿಬಿಡಲಾಯಿತು. ಈ ಧಾಳಿಗಳಿಂದ ಸಿಪಿಐ(ಎಂ) ಎಲ್ಲರಿಗಿಂತ ಹೆಚ್ಚು ನಷ್ಟ ಅನುಭವಿಸಬೇಕಾಯಿತು.

'ಅನುಚಿತ ವಿಧಾನ ಸಭೆ'

ಈ ಎಲ್ಲಾ ಒತ್ತಡಗಳ ಮಧ್ಯೆಯೂ ನಾವು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯನ್ನು ಬಲಿಷ್ಠಗೊಳಿಸುವ ಮತ್ತು ವಿಸ್ತರಿಸುವ ಕಾರ್ಯವನ್ನು ಮುಂದುವರಿಸಿದೆವು. ಅದೇ ಸಮಯದಲ್ಲಿ ವಿಶ್ವಾಸ ದ್ರೋಹಿಗಳನ್ನು ಜನರಿಂದ ದೂರ ಸರಿಸುವ ಕಾರ್ಯದಲ್ಲಿ ತೊಡಗಿದೆವು. ತಪ್ಪು ದಾರಿಗೆ ಹೋದವರನ್ನು ತಿದ್ದಿ ಹಿಂದಕ್ಕೆ ತರುವ ಕೆಲಸವನ್ನು ಮಾಡಿದೆವು. ಅದರ ಹಿಂದೆಯೇ ಬಂದ 1972ರ ಚುನಾವಣೆಯು ಕೇವಲ ಒಂದು ನಾಟಕವಾಗಿತ್ತಷ್ಟೆ. ಆದ ಕಾರಣ ಆ ಚುನಾವಣಾ ಫಲಿತಾಂಶವನ್ನು ವಿಮರ್ಶೆ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಎಡರಂಗವು ಒಗ್ಗಟ್ಟಾಗಿ ಹೋರಾಡುತ್ತಿರುವಾಗಲೇ ಈ ಚುನಾವಣೆಯಲ್ಲಿ ಸಿಪಿಐ ಮಾತ್ರ ಕಾಂಗ್ರೆಸ್ ಜತೆ ಕೈಗೂಡಿಸಿತು. ನಾವು ಒಗ್ಗಟ್ಟಾಗಿ ಈ ಚುನಾವಣೆಯನ್ನು ಬಹಿಷ್ಕರಿಸಲು ನಿರ್ಧಾರ ಮಾಡಿದೆವು. ಈ ಪ್ರಶ್ನೆಯ ಮೇಲೆ ನೀಡಿದ ಜಂಟೀ ಹೇಳಿಕೆಗೆ ಸಿಪಿಐ(ಎಂ) ಅಲ್ಲದೆ ಆರ್‌ಎಸ್‌ಪಿ, ಫಾರ್ವರ್ಡ್ ಬ್ಲಾಕ್, ಆರ್‌ಸಿಪಿಐ, ಎಸ್‌ಯುಸಿ, ವರ್ಕರ್ಸ್ ಪಾರ್ಟಿ, ಮಾರ್ಕ್ಸ್‌ವಾದಿ ಫಾರ್ವರ್ಡ್ ಬ್ಲಾಕ್ ಮತ್ತು ವಿಪ್ಲವ ಕಾಂಗ್ರೆಸ್ ಸಹಿ ಮಾಡಿದ್ದವು. ಆ ನಂತರ ಆರ್‌ಎಸ್‌ಪಿ ಕೂಡಾ ತನ್ನ ಚುನಾಯಿತ ಶಾಸಕರನ್ನು ವಿಧಾನಸಭೆಯಲ್ಲಿ ಭಾಗವಹಿಸದಂತೆ ತಡೆಯಿತು.

ನಾವೇನು 'ಅನುಚಿತ ವಿಧಾನಸಭೆ' ಎಂದು ಕರೆದಿದ್ದೆವೋ ಅಲ್ಲಿ ಸಿದ್ಧಾರ್ಥ ಶಂಕರ ರಾಯ್ ನೇತೃತ್ವದ ಮಂತ್ರಿ ಮಂಡಳವನ್ನು ಕಾಂಗ್ರೆಸ್ ರಚಿಸಿತು. 1977ರ ಚುನಾವಣೆಗೆ ಮುಂಚೆ ಹೇಗೆ ಪಶ್ಚಿಮ ಬಂಗಾಳ ಅರಾಜಕತೆ ಮತ್ತು ಭಯೋತ್ಪಾದನೆಗಳಿಂದ ತುಂಬಿ ಹೋಗಿತ್ತು ಮತ್ತು ಹೇಗೆ ಇಡೀ ರಾಜ್ಯವು ಸರ್ವಾಧಿಕಾರಿ ಶಕ್ತಿಗಳಿಗೆ ಮುಕ್ತ ಬೇಟೆಯ ತಾಣವಾಗಿತ್ತು ಎಂಬ ಸಂಗತಿ ಜನರ ನೆನಪಿನಲ್ಲಿದೆ. ರಾಷ್ಟ್ರಮಟ್ಟದಲ್ಲಿ ತುರ್ತು ಪರಿಸ್ಥಿತಿಯನ್ನು 1975ರಲ್ಲಿ ಘೋಷಿಸಲಾಯಿತು. ಆದರೆ ಪಶ್ಚಿಮ ಬಂಗಾಳದಲ್ಲಿ 1971ರಿಂದಲೇ ನಾವು ಅದರಿಂದ ಕಷ್ಟ ನಷ್ಟ ಅನುಭವಿಸುತ್ತಿದ್ದೆವು.

ಎಡ ಐಕ್ಯತೆಯ ಕ್ರೋಢೀಕರಣ

ಭಯೋತ್ಪಾದನೆ ತಂತ್ರಗಳಿಂದ ಜನ ಸಮುದಾಯವನ್ನು ತುಳಿದಿಡಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಇತಿಹಾಸವು ಪದೇ ಪದೇ ಸಾಬೀತು ಮಾಡಿ ತೋರಿಸಿದೆ. ತುರ್ತು ಪರಿಸ್ಥಿತಿಯ ದಿನಗಳಲ್ಲಿ ಪ್ರಜಾಪ್ರಭುತ್ವ ಚಳುವಳಿಯನ್ನು ಹತ್ತಿಕ್ಕಲು ಮಾಡಿದ ಅನ್ಯಾಯದ ಪ್ರಯತ್ನಗಳು ಸೋತವು. ನಿಜ ಹೇಳಬೇಕೆಂದರೆ, ಪ್ರಜಾಪ್ರಭುತ್ವ ಚಳುವಳಿಯು ದೇಶಾದ್ಯಂತ ಬಲವಾಗಲು ಪ್ರಾರಂಭವಾಯಿತು. ಈ ನಿಟ್ಟಿನಲ್ಲಿ ಜಯ ಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ನಡೆದ ಚಳುವಳಿಯನ್ನು ವಿಶೇಷವಾಗಿ ಹೆಸರಿಸಬೇಕು.

1977ರ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗಾದ ಚುನಾವಣಾ ಸೋಲಿನ ಹಿನ್ನೆಲೆಯಲ್ಲಿ ಇಂದಿರಾಗಾಂಧಿಯವರನ್ನು ಅಧಿಕಾರದ ಗದ್ದುಗೆಯಿಂದ ಹೊರಗೆಸೆಯಲಾಯಿತು. ಚುನಾವಣೆಯ ಅವಕಾಶ ದೊರೆತ ಕೂಡಲೇ ಜನರು ಕಾಂಗ್ರೆಸ್ಸನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದರು. ಸರ್ವಾಧಿಕಾರಿ ಕ್ರಮಗಳನ್ನು ಎದುರಿಸಿ ಪ್ರಜಾಪ್ರಭುತ್ವ ಚಳುವಳಿಯನ್ನು ಬೆಳೆಸಿದ ಅನುಭವವು ಎಡ ಐಕ್ಯತೆಯ ಕ್ರೋಢೀಕರಣಕ್ಕೆ ಉತ್ತಮ ಕೊಡುಗೆ ನೀಡಿತು.

1972ರ ನಂತರದ ಚುನಾವಣಾ ದೃಶ್ಯ ಐದು ಎಡಪಕ್ಷಗಳು ಒಟ್ಟಿಗೆ ಕೆಲಸ ಮಾಡಲು ಅನುವು ಮಾಡಿಕೊಟ್ಟಿದ್ದರೆ 1976ರ ಪ್ರಾರಂಭದಿಂದ ತುರ್ತು ಪರಿಸ್ಥಿತಿಯ ಕ್ರಮಗಳ ವಿರುದ್ಧ ಮತ್ತು ಪ್ರಜಾಪ್ರಭುತ್ವ, ಸ್ವಾತಂತ್ರ್ಯಕ್ಕಾಗಿ ಕಟ್ಟಿ ಬೆಳೆಸಿದ ಚಳುವಳಿಗಳು ಹೆಚ್ಚೆಚ್ಚು ಎಡಪಕ್ಷಗಳು ಒಗ್ಗಟ್ಟಾಗಿ ಕಾರ್ಯಾಚರಣೆ ಮಾಡಲು ಸಹಾಯ ಮಾಡಿದವು. 1977ರ ಪ್ರಾರಂಭದಲ್ಲಿ ಆರು ಎಡಪಕ್ಷಗಳು ಸಂಯುಕ್ತವಾಗಿ ಕಾರ್ಯನಿರ್ವಹಿಸಲಾರಂಭಿಸಿದವು. ಇನ್ನಿತರರು ಇನ್ನೂ ಮೀನಮೇಷ ಎಣಿಸುತ್ತಿದ್ದರು. 1977ರ ಚುನಾವಣಾ ಸಂದರ್ಭದಲ್ಲಿ ಎಡರಂಗವು ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿತು. ಪರಸ್ಪರ ಹೊಂದಾಣಿಕೆಯಿಂದಾಗಿ ಶೇಕಡಾ 52 ಸ್ಥಾಗಳನ್ನು ಜನತಾ ಪಕ್ಷಕ್ಕೆ ನೀಡಲು ನಾವು ಬಯಸಿದೆವು. ಆದರೆ ಅವರು ಇನ್ನೂ ಹೆಚ್ಚಿನ ಪಾಲು ಬೇಕೆಂದು ಒತ್ತಾಯಿಸಿದರು. ಅಂತಿಮವಾಗಿ ಎಡರಂಗವನ್ನು ವಿರೋಧಿಸಲು ತೀರ್ಮಾನಿಸಿದರು. ಜನರ ತೀರ್ಪು ಏನೆಂದು ಚುನಾವಣೆಗಳು ತೋರಿಸಿಕೊಟ್ಟವು. ಎಡರಂಗವು ವಿಧಾನ ಸಭೆಯಲ್ಲಿ ಮೂರನೇ ಎರಡು ಬಹುಮತ ಗಳಿಸಿತು. ಸಿಪಿಐ(ಎಂ) ಒಂದೇ ನಿಚ್ಚಳ ಬಹುಮತ ಗಳಿಸಲು ಸಾಧ್ಯವಾಯಿತು.

(ಮುಂದುವರಿಯುವುದು)



ಪಂಜಾಬ್‌ನಲ್ಲೊಂದು ಆತಂಕಕಾರಿ ವಿದ್ಯಮಾನ

ಸಿಖ್ ಭಯೋತ್ಪಾದಕ ಬಂಧುಗಳಿಗೆ ಸನ್ಮಾನ

ಏಪ್ರಿಲ್ 13ರಂದು ಬೈಸಾಖಿಕ್ರ. ಸಿಖ್ ಧರ್ಮೀಯರಿಗೆ ಒಂದು ಪವಿತ್ರ ದಿನವದು. ಸಿಖ್‌ರ ಪ್ರಮುಖ ಧಾರ್ಮಿಕ ಸ್ಥಳಗಳಲ್ಲಿ ಒಂದಾದ ಅಕಾಲ್ ತಖ್ತ್‌ನಲ್ಲಿ ಆ ದಿನ ನಡೆದ ಒಂದು ಕಾರ್ಯಕ್ರಮ ದೇಶದ ಜನರಲ್ಲಿ ಆತಂಕವನ್ನು ಹುಟ್ಟಿಸುವಂತದ್ದಾಗಿದೆ.

ಅಕಾಲ್ ತಖ್ತದಲ್ಲಿ ಅಂದು ನಡೆದ ಸಮಾರಂಭದಲ್ಲಿ ಕೆಲವು ಪ್ರಮುಖ ಭಯೋತ್ಪಾದಕರ ಸಂಬಂಧಿಗಳನ್ನು ಸನ್ಮಾನಿಸಲಾಯಿತು. ಸಾವಿರಾರು ಮುಗ್ಧ ಜೀವಗಳನ್ನು ಬಲಿ ತೆಗೆದುಕೊಂಡ ಹಾಗೂ ದೇಶದ ಸಮಗ್ರತೆಗೆ ಧಕ್ಕೆ ತಂದಿರುವ ಖಲಿಸ್ತಾನಿ ಚಳುವಳಿಯ ವಿಷಬೀಜವನ್ನು ಬಿತ್ತಿದ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆ ಇಂದಿರಾಗಾಂಧಿಯವರ ಹಂತಕ ಸತ್ವಂತ್ ಸಿಂಗ್ ಮತ್ತು ಭೂಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎ.ಎಸ್.ವೈದ್ಯರನ್ನು ಹತ್ಯೆ ಮಾಡಿದ ಹರಿಜಿಂದರ್ ಸಿಂಗ್ ಜಿಂದಾಗೆ 'ಸಿರೋಪಾ'ಗಳನ್ನು ನೀಡಿ ಸನ್ಮಾನಿಸಲಾಯಿತು.

ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ(ಎಸ್‌ಜಿಪಿಸಿ) ಈ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಅತ್ಯುಗ್ರ ಭಯೋತ್ಪಾದಕರ ಬಂಧುಗಳನ್ನು ಸನ್ಮಾನಿಸಿದ ಈ ಕಾರ್ಯಕ್ರಮಕ್ಕೆ ರಾಜಕೀಯ ವಲಯದಲ್ಲಿ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗಿದೆ. ಉಗ್ರಗಾಮಿಗಳ ಸಂಬಂಧಿಕರಿಗೆ ಸನ್ಮಾನ ಮಾಡುವುದರಿಂದ ಭಯೋತ್ಪಾದನೆ ಚಳುವಳಿಗೆ ಇಂಬು ನೀಡಿದಂತಾಗುತ್ತದೆ. ಪ್ರತ್ಯೇಕತಾವಾದಿ ಚಳುವಳಿ ಮತ್ತೆ ಚಿಗುರೊಡೆಯ ಬಹುದು ಎಂಬುದು ಆತಂಕಕ್ಕೆ ಪ್ರಮುಖ ಕಾರಣವಾಗಿದೆ.

ಶಿರೋಮಣಿ ಅಕಾಲಿದಳ (ಎಸ್‌ಎಡಿ) ಮತ್ತು ಭಾರತೀಯ ಜನತಾ ಪಕ್ಷದ ಮೈತ್ರಿ ಕೂಟ ಪಂಜಾಬ್‌ನಲ್ಲಿ ಆಡಳಿತ ನಡೆಸುತ್ತಿದೆ. ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಈ ಕೂಟ ಅಧಿಕಾರಕ್ಕೆ ಬಂದಾಗಲೇ ಪ್ರತಿಗಾಮಿ ಸ್ವರೂಪದ ಇಂಥ ಕೂಟದಿಂದ ಅಪಾಯಕಾರಿ ಬೆಳವಣಿಗೆ ಉಂಟಾಗಬಹುದು ಎಂಬ ಕಳವಳವನ್ನು ವ್ಯಕ್ತಪಡಿಸಲಾಗಿತ್ತು. ಈ ಕಳವಳ ಸರಿಯಾದುದು ಎಂಬುದು ಈಗ ನಿಜವಾಗಿದೆ.

ಪಂಜಾಬ್ ಸರಕಾರ ಮತ್ತು ಎಸ್‌ಎಡಿಗಳು ಈ ಕಾರ್ಯಕ್ರಮಕ್ಕೂ ತಮಗೂ ಯಾವುದೇ ಸಂಬಂಧವಿಲ್ಲ ಎಂದೇನೋ ಹೇಳಿವೆ. ಅಲ್ಲದೆ ಬಿಜೆಪಿ ಈ ಸಮಾರಂಭಕ್ಕೆ ತನ್ನ ಅತೃಪ್ತಿಯನ್ನು ವ್ಯಕ್ತಪಡಿಸಿದೆ. ಆದರೆ ಇಷ್ಟೇ ಸಾಕಾಗುತ್ತದೆಯೇ?

ವಾಸ್ತವವಾಗಿ ಎಸ್‌ಜಿಪಿಸಿ ಅಕಾಲಿದಳ ಅಧಿಕಾರದ ಸೂತ್ರಧಾರಿಯಾಗಿದೆ. ಆದ್ದರಿಂದ ಏಪ್ರಿಲ್ 13ರ ಸಮಾರಂಭ ಅಕಾಲಿ ಸಿದ್ಧಾಂತದ ನಿಜವಾದ ಬಣ್ಣವನ್ನು ಬಯಲು ಮಾಡಿದೆ ಎಂದು ಹೇಳಬಹುದಾಗಿದೆ.

ಭಯೋತ್ಪಾದಕರ ಬಂಧುಗಳನ್ನು ಸನ್ಮಾನಿಸಿದ ಕ್ರಮವನ್ನು ಆಕ್ಷೇಪಿಸಿದ್ದಕ್ಕೆ ಎಸ್‌ಜಿಪಿಸಿ ನೀಡಿರುವ ಪ್ರತಿಕ್ರಿಯೆ ಕೂಡ ಸನ್ಮಾನದ ಹಿಂದಿರುವ ಅದರ ನಿಜವಾದ ಉದ್ದೇಶವನ್ನು ಬಯಲು ಮಾಡುವಂತಿದೆ.

ಯಾರು ಹುತಾತ್ಮರು ಎಂಬುದನ್ನು ಸಿಖ್ ಸಮುದಾಯ ನಿರ್ಧರಿಸುತ್ತದೆ. ಹಾಗೂ ಈ ವಿಚಾರದಲ್ಲಿ ಯಾವುದೇ ರಾಜಕೀಯ ನಾಯಕ ಅಥವಾ ಪತ್ರಕರ್ತರ ಸರ್ಟಿಫಿಕೇಟ್ ಬೇಕಾಗಿಲ್ಲ ಎಂದು ಎಸ್‌ಜಿಪಿಸಿ ತಿಳಿಸಿದೆ.

ಒಟ್ಟಿನಲ್ಲಿ ಏಪ್ರಿಲ್ 13 ರ ಕಾರ್ಯಕ್ರಮ ಒಂದು ಅಪಾಯಕಾರಿ ಸನ್ನಿವೇಶಗಳನ್ನು ಸೃಷ್ಟಿಸಿದೆ. ಭಯೋತ್ಪಾದಕ ಬಂಧುಗಳ ಸನ್ಮಾನದ ಫಲವಾಗಿ ಉದ್ಭವಿಸಬಹುದಾದಂಥ ಅಹಿತಕರ ಘಟನೆಗಳನ್ನು ತಡೆಯಲು ಜಾತ್ಯಾತೀತ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಗರಿಷ್ಠ ಜಾಗೃತಿಯಿಂದಿರಬೇಕಾಗಿದೆ.

ಮಂತ್ರಿ ವಜಾ ಆಗ್ರಹಿಸಿ ಪ್ರದರ್ಶನ

ದಲಿತ ಯುವಕನೊಬ್ಬನ ಕೊಲೆಯಲ್ಲಿ ಭಾಗಿಯಾಗಿರುವ ಆರೋಪ ಹೊತ್ತಿರುವವರು ಮಧ್ಯಪ್ರದೇಶದ ಸಚಿವ ವಂಶಮಣಿ ಪ್ರಸಾದ್ ವರ್ಮಾ. ಅಂದ ಮೇಲೆ ಇವರು ಮಂತ್ರಿಯಾಗಿ ಮುಂದುವರಿಯಲು ನಾಲಾಯಕ್ಕು.

ಅವರನ್ನು ಸಚಿವ ಸಂಪುಟದಿಂದ ವಜಾ ಮಾಡುವಂತೆ ಒತ್ತಾಯಿಸಿ ರೇವಾ ವಿಭಾಗೀಯ ಕಮಿಷನರ್ ಕಚೇರಿ ಮುಂದೆ ಮಾರ್ಚ್ 29 ರಂದು ಬೃಹತ್ ಪ್ರದರ್ಶನ ನಡೆಯಿತು. ಸಿಪಿಐ(ಎಂ) ಕರೆಯ ಮೇರೆಗೆ ನಡೆದ ಪ್ರದರ್ಶನದಲ್ಲಿ ಸಿಧಿ, ಸತ್ನಾ ಮತ್ತು ರೇವಾ ಜಿಲ್ಲೆಗಳಿಂದ ಮಹಿಳೆಯರ ಸಹಿತ ನೂರಾರು ನಾಗರೀಕರು ಪಾಲ್ಗೊಂಡಿದ್ದರು.

ದಲಿತ ಯುವಕನ ಹತ್ಯೆ ಪ್ರಕರಣದ ಬಗ್ಗೆ ಸಿಬಿಐ ತನಿಖೆ ನಡೆಸಲು ಸಿದ್ಧವೆಂದು ಕೇಂದ್ರ ಗೃಹ ಸಚಿವ ಇಂದ್ರಜಿತ್ ಗುಪ್ತಾ ಹೇಳಿದ್ದರೂ ಮುಖ್ಯಮಂತ್ರಿ ದಿಗ್ವಿಜಯ್ ಸಿಂಗ್ ಈ ವಿಚಾರದಲ್ಲಿ ಯಾವುದೇ ಶಿಫಾರಸು ಮಾಡದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಅನುಮಾನಕ್ಕೂ ಆಸ್ಪದ ಉಂಟಾಗಿದೆ.

3 ವರ್ಷಗಳಲ್ಲಿ 15 ನರ ಬಲಿ

ಮುಂಬಯಿ: ವಿಜ್ಞಾನ ಕ್ಷೇತ್ರದಲ್ಲಿನ ಹೊಸಹೊಸ ಆವಿಷ್ಕಾರಗಳಿಗೆ ಅನುಗುಣವಾಗಿ ಸಮಾಜದಲ್ಲಿ ವೈಜ್ಞಾನಿಕ ಚಿಂತನೆ ಮೈಗೂಡಿಲ್ಲ. ಮೂಢನಂಬಿಕೆಗಳು ತಾಂಡವವಾಡುತ್ತಿವೆ. ಮನುಷ್ಯ ಜೀವಿಗಳನ್ನು ಬಲಿಕೊಡುವಷ್ಟರ ಮಟ್ಟಿಗೆ ಈ ಮೌಢ್ಯ ಬೇರುಬಿಟ್ಟಿದೆ.

ಮಹಾರಾಷ್ಟ್ರದ ರಾಜ್ಯವೊಂದರಲ್ಲೇ ಕಳೆದ ಮೂರು ವರ್ಷಗಳಲ್ಲಿ 15 ಜನರನ್ನು ಬಲಿ ಕೊಡಲಾಗಿದೆ ಎಂಬ ಸುದ್ದಿ ಬಂದಿದೆ. ಗುಪ್ತ ನಿಧಿ ಪಡೆಯುವುದು ಮೊದಲಾದ ಕಾರಣಗಳಿಗೆ ಈ ನರ ಹತ್ಯೆ ನಡೆದಿವೆ ಎಂದು ರಾಜ್ಯ ವಿಧಾನ ಸಭೆಗೆ ತಿಳಿಸಲಾಗಿದೆ.

ಕನಿಷ್ಠ ಕೂಲಿ ಸಲಹೆ ಸಮಿತಿಯಿಂದ ಸಿಟು ಹೊರಕ್ಕೆ!

ಮಧ್ಯಪ್ರದೇಶದ ಕನಿಷ್ಠ ಕೂಲಿ ಸಲಹಾ ಸಮಿತಿಯಲ್ಲಿ ಈಗ ಸಿಐಟಿಯು ಇಲ್ಲ. ಅಂದರೆ ಸಮಿತಿಯಿಂದ ಸಿಟು ಹೊರಗೆ ಬಂದಿದೆಯೇ? ಇಲ್ಲ, ಹಾಗಾದರೆ ಇನ್ನೇನು ಕಾರಣ?

ಪುನರ್ರಚಿತ ಸಮಿತಿಯಿಂದ ರಾಜ್ಯ ಸರಕಾರವೇ ಸಿಟುವನ್ನು ಬಿಟ್ಟಿದೆ. ಕಾರಣ? ಕಾರ್ಮಿಕರ ಪರವಾಗಿ ಸಿಐಟಿಯು ರಾಜಿ ರಹಿತ ಹೋರಾಟ ಮಾಡಿ ವಾದ ಮಂಡಿಸಿದ್ದೇ ಸರಕಾರದ 'ನಿರ್ಧಾರಕ್ಕೆ' ಕಾರಣ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಕನಿಷ್ಠ ಕೂಲಿಯ ವೈಜ್ಞಾನಿಕ ಪರಿಷ್ಕರಣೆಗಾಗಿ ಸಿಟು ಕಳೆದ ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದೆ. ಕನಿಷ್ಠ ಕೂಲಿ ಪ್ರಮಾಣ ಬಡತನ ರೇಖೆಗಿಂತ ಸಾಕಷ್ಟು ಹೆಚ್ಚಿರಬೇಕೆಂಬುದು ಅದರ ಪ್ರತಿಪಾದನೆ. ಬೀಡಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ಕಡಿಮೆ ಮಾಡುವ ಸರಕಾರದ ಕ್ರಮವನ್ನು ಸಿಐಟಿಯು ವಿರೋಧಿಸಿತು ಹಾಗೂ ಅದರ ಕಾನೂನು ಸಿಂಧುತ್ವವನ್ನು ಪ್ರಶ್ನಿಸಿತ್ತು. ಹಿಂದಿನ ಕನಿಷ್ಠ ಕೂಲಿ ಸಮಿತಿಯಲ್ಲಿ ಸಿಐಟಿಯು ಹಲವು ವಿಚಾರದಲ್ಲಿ ಸರಕಾರಕ್ಕೆ ನೋಟೀಸುಗಳನ್ನು ನೀಡಿತ್ತು.

ಇವೆಲ್ಲದರಿಂದ ಸರಕಾರದ ಕಣ್ಣು ಕೆಂಪಾಗಿತ್ತು. ದುಡಿಯುವವರ ಹಿತಕ್ಕಿಂತ ಬಂಡವಾಳಗಾರರ ಹಿತರಕ್ಷಣೆಗಳೇ ಅದರ ಪರಮಗುರಿ. ಆದ್ದರಿಂದ ಪುನರ್ರಚಿತ ಸಮಿತಿಯಲ್ಲಿ ಕಾರ್ಮಿಕ ಮಿತ್ರ ಸಿಟುವನ್ನೇ ಕೈ ಬಿಟ್ಟಿತು.

ಇಂಥ ಸಮಿತಿಗಳಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗೆ ಪ್ರಾತಿನಿಧ್ಯ ಇರಬೇಕೆಂಬುದು ನಿಯಮ. ಇದನ್ನು ದಿಗ್ವಿಜಯಸಿಂಗ್ ಸರಕಾರ ಉಲ್ಲಂಘಿಸಿದೆ.

ಕನಿಷ್ಠ ಕೂಲಿ ಸಲಹಾ ಸಮಿತಿಯಲ್ಲಿ ಯಾವುದೇ ಕೇಂದ್ರೀಯ ಕಾರ್ಮಿಕ ಸಂಘಟನೆಯ ಪ್ರಾತಿನಿಧ್ಯ ಇಲ್ಲದಿರುವುದು ಇದೇ ಮೊದಲ ಸಲವಾಗಿದೆ.

ಕೊಚ್ಚಿಯಲ್ಲಿ ಸಿಐಟಿಯು 9ನೇ ರಾಷ್ಟ್ರ ಸಮ್ಮೇಳನ

ಸಿಐಟಿಯು ಸಮ್ಮೇಳನ

ಪುಟ 1ರಿಂದ

ಪೆಂಡಾಲ್ ಬಹಳ ಆಕರ್ಷಕವಾಗಿತ್ತು. ಸಮ್ಮೇಳನ ನಡೆದ ಜವಾಹರಲಾಲ್ ನೆಹರೂ ಕ್ರೀಡಾಂಗಣ ಏಶ್ಯಾದಲ್ಲೆಲ್ಲಾ ಅತ್ಯಂತ ದೊಡ್ಡದು ಎಂದು ಹೇಳಲಾಗುತ್ತಿದೆ. ಇಂತಹ ಬೃಹತ್ ಕ್ರೀಡಾಂಗಣ ವಿಡೀ ಕೆಂಪು ಪತಾಕೆಗಳಿಂದ, ಬಾವುಟಗಳಿಂದ ಅಲಂಕರಿಸಲ್ಪಟ್ಟಿತು. ಕ್ರೀಡಾಂಗಣವಷ್ಟೇ ಏಕೆ ಇಡೀ ಎರ್ನಾಕುಳಂ-ಕೊಚ್ಚಿ ಅವಳಿ ನಗರ ಕೆಂಬಾವುಟಗಳಿಂದ ಕಂಗೊಳಿಸುತ್ತಿದ್ದು ಸಿಐಟಿಯುನ 9ನೇ ಅಖಿಲ ಭಾರತ ಸಮ್ಮೇಳನವನ್ನು ಸಾರುತ್ತಿದ್ದವು.

ಪ್ರತಿನಿಧಿ ಅಧಿವೇಶನ ನಡೆಯುತ್ತ ವೇದಿಕೆಗೆ 'ಸಾಗರಿಕಾ ಸೊರೇನ್ ಮಂಚ್' ಎಂದು ಹೆಸರಿಸಲಾಗಿತ್ತು. ಅಸ್ಸಾಂನ ಚಹಾ ತೋಟ ಕಾರ್ಮಿಕರ ಮುಖಂಡರಾಗಿದ್ದು ಗೂಂಡಾ ಧಾಳಿಗೆ ಬಲಿಯಾದ ಸಾಗರಿಕಾರವರ ಸ್ಮರಣೆಯಲ್ಲಿ ಈ ಹೆಸರು ಇಡಲಾಗಿತ್ತು.

ಸ್ವಾಗತ ಭಾಷಣ ಮಾಡಿದ ಸ್ವಾಗತ ಸಮಿತಿಯ ಅಧ್ಯಕ್ಷ ಎಂ.ಎಂ.ಲಾರೆನ್ಸ್ 1973ರ ಎರಡನೇ ಸಮ್ಮೇಳನದ ನಂತರ ಸಿಐಟಿಯುನ ಸಮ್ಮೇಳನ ಕೊಚ್ಚಿಯಲ್ಲಿ ಎರಡನೇ ಬಾರಿಗೆ ಸಿಐಟಿಯುನ ಅಖಿಲ ಭಾರತ ಸಮ್ಮೇಳನ ನಡೆಯುತ್ತಿದೆ ಎನ್ನುತ್ತಾ ಕೊಚ್ಚಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಕಾರ್ಮಿಕರು ನಡೆಸಿದ ಹಲವಾರು ಸಮರಗಳನ್ನು ನೆನಪಿಸಿಕೊಂಡರು. ಕೇರಳದ ಪ್ರಥಮ ಯೆಹೂದಿ ದೇವಾಲಯ, ಮುಸ್ಲಿಂ ಮಸೀದಿ ಹಾಗೂ ಕ್ರಿಶ್ಚಿಯನ್ ಚರ್ಚ್ ಹೊಂದಿರುವ ಈ ನಗರ ವಿಶಿಷ್ಟ ಇತಿಹಾಸದ ಬಗ್ಗೆ ಹೇಳಿದರು. ರಾಜಕೀಯ ಸನ್ನಿವೇಶದ ಬಗ್ಗೆ ಮಾತನಾಡುತ್ತಾ "ಐ.ಕೆ.ಗುಜ್ರಾಲ್ ನೇತೃತ್ವದಲ್ಲಿ ಹೊಸ ಸಂಯುಕ್ತ ರಂಗ ಸರಕಾರ ರಚನೆಗೊಂಡು ಸಂಯುಕ್ತ ರಂಗ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳು ವಿಫುಲವಾಗಿರುವಾಗ ನಾವೀಗ ಸಭೆ ಸೇರಿದ್ದೇವೆ. ಹೊಸ ಸರಕಾರ ಕಾರ್ಮಿಕ ವರ್ಗ ಮತ್ತು ದೇಶದ ಜನತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿದೆ ಎಂದು ಆಸೆಯಿಟ್ಟುಕೊಳ್ಳೋಣ ಎಂದು ಸ್ವಾಗತ ಭಾಷಣದ ನಂತರ ಕನ್ನೈ ಬ್ಯಾನರ್ಜಿ ಸಂತಾಪ ನಿರ್ಣಯಗಳನ್ನು ಹಾಗೂ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಓದಿದರು.

ಅಧ್ಯಕ್ಷ ಭಾಷಣದ ನಂತರ ಸೌಹಾರ್ದ ಪ್ರತಿನಿಧಿಗಳು ಶುಭಾಷಯಗಳನ್ನು ಕೋರಿ ಮಾತನಾಡಿದರು. ದೇಶದ ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಈ ಸಂದರ್ಭದಲ್ಲಿ ಪ್ರಸ್ತುತ ರಾಜಕೀಯ, ಆರ್ಥಿಕ ಸನ್ನಿವೇಶವನ್ನು ಪರಿಶೀಲಿಸುತ್ತಾ ಹೊಸ ಧಾಳಿಗಳ ವಿರುದ್ಧ ಐಕ್ಯ, ಸಮರಶೀಲ ಹೋರಾಟಗಳನ್ನು ಬಲಪಡಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ವಿದೇಶಗಳಿಂದ ಬಂದ 30 ಪ್ರತಿನಿಧಿಗಳೂ ಮಾತನಾಡಿದರು. ಚೀಣಾ, ರಶ್ಯಾ, ವಿಯಟ್ನಾಂ, ಫ್ರಾನ್ಸ್, ಇಟೆಲಿ, ಈಜಿಪ್ತ್, ಕಝಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ದಕ್ಷಿಣ ಆಫ್ರಿಕಾದ ಪ್ರತಿನಿಧಿಗಳು ಹಾಗೂ ಕ್ಯೂಬಾದ ರಾಯಭಾರಿಗಳು, ಬ್ರಿಟನ್ನಿನ ಭಾರತೀಯ ಕಾರ್ಮಿಕ ಸಂಘದ ಪ್ರತಿನಿಧಿಗಳು ಶುಭಾಶಯ ಕೋರಿದರು. ಫಿಲಿಪ್ಪೈನ್ಸ್, ಜಪಾನ್ ಮತ್ತಿತರ ಕೆಲವು ದೇಶಗಳ ಕಾರ್ಮಿಕ ಸಂಘಗಳು ಶುಭಾಷಯ ಸಂದೇಶ ಕಳಿಸಿದ್ದವು.

ನಂತರದ ನಾಲ್ಕು ದಿನಗಳಲ್ಲಿ ಪ್ರಧಾನ ಕಾರ್ಯದರ್ಶಿ ವರದಿ ಮಂಡನೆ, ಅದರ ಮೇಲೆ ಚರ್ಚೆ, ವಿವಿಧ ವಿಷಯಗಳ ಮೇಲೆ ರಚಿಸಲ್ಪಟ್ಟ ಆರು ಆಯೋಗಗಳ ಪ್ರಬಂಧಗಳ ಮೇಲೆ ಚರ್ಚೆ ನಡೆಯಿತು. ಈ ಸಮ್ಮೇಳನ ರಚಿಸಿದ ಆರು ಆಯೋಗಗಳ ವಿಷಯಗಳೆಂದರೆ 1. ಕಾರ್ಮಿಕ ಸಂಘಗಳ ಮೇಲೆ ಸಾಮ್ರಾಜ್ಯಶಾಹಿ ಧಾಳಿ. 2. ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ 3. ಸುರಕ್ಷಿತ ಆರೋಗ್ಯ ಮತ್ತು ಪರಿಸರ. 4. ಸಂರಚನಾ ಹೊಂದಾಣಿಕೆ ಕಾರ್ಯಕ್ರಮದ ಪರಿಣಾಮಗಳು-ಕಾರ್ಮಿಕ ವರ್ಗ ಮತ್ತು ಕಾರ್ಮಿಕ ಸಂಮಘಗಳ ಮೇಲೆ. 5. ಕನಿಷ್ಟ ವೇತನ ಧೋರಣೆ. 6. ವಿಜ್ಞಾನ-ತಂತ್ರಜ್ಞಾನದ ಮುನ್ನಡೆ ಮತ್ತು ಕಾರ್ಮಿಕ ವರ್ಗ.

ಸಿಐಟಿಯುನ 9ನೇ ಸಮ್ಮೇಳನದ ಒಂದು ವಿಶಿಷ್ಟತೆಯೆಂದರೆ ಈ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಒಂದು ವಿಜ್ಞಾನ, ತಂತ್ರಜ್ಞಾನ ಹಾಗೂ ಕೈಗಾರಿಕಾ ವಸ್ತು ಪ್ರದರ್ಶನ. ಇದರಲ್ಲಿ 19 ಪೆವಿಲಿಯನ್‌ಗಳು, 92 ಸ್ಟಾಲುಗಳಿದ್ದವು. ಕೇರಳದ ಮುಖ್ಯಮಂತ್ರಿ ಇ.ಕೆ.ನಯನಾರ್ ಏಪ್ರಿಲ್ 19ರಂದು ಇದನ್ನು ಉದ್ಘಾಟಿಸಿದರು. ಆ ಸಂದರ್ಭದಲ್ಲಿ ನಾಯನಾರ್ "ರಣತರಂಗಂ" ಎಂಬ ಹೋರಾಟದ ಹಾಡುಗಳ ಹೊಸ ಕ್ಯಾಸೆಟ್ ಒಂದನ್ನು ಬಿಡುಗಡೆ ಮಾಡಿದರು.

ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮ್ಮೇಳನ

ಸಿಐಟಿಯುನ 9ನೇ ಅಖಿಲ ಭಾರತ ಸಮ್ಮೇಳನ ಆರಂಭವಾಗುವ ಹಿಂದಿನ ದಿನ ಅಂದರೆ ಏಪ್ರಿಲ್ 9ರಂದು ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ 3ನೇ ರಾಷ್ಟ್ರೀಯ ಸಮ್ಮೇಳನ ಎರ್ನಾಕುಳಂನಲ್ಲಿ ನಡೆಯಿತು. ಇದರಲ್ಲಿ ಭಾಗವಹಿಸಿದ್ದ ಕರ್ನಾಟಕದ ಪ್ರತಿನಿಧಿಯೊಬ್ಬರು ಈ ವರದಿಯನ್ನು ಪತ್ರಿಕೆಗೆ ಕಳಿಸಿದ್ದಾರೆ.

"ಹೊಸ ಆರ್ಥಿಕ ನೀತಿಯಿಂದಾಗಿ ಮಹಿಳೆಯರು ತಮ್ಮ ನೌಕರಿಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಕಾರ್ಮಿಕ ನೌಕರ ಸಂಘಗಳಲ್ಲಿ ಮಹಿಳೆಯರು ನಾಯಕತ್ವಕ್ಕೆ ಬರುವುದು ಬಹಳ ಅಗತ್ಯವಾಗಿದೆ. ಹೆಣ್ಣು ಮಕ್ಕಳನ್ನು ಗೃಹಕೃತ್ಯಕ್ಕೆ ಸಂಬಂಧಿಸಿದ ಕೆಲಸಗಳಿಗೆ ಮಾತ್ರ ನೇಮಿಸಿಕೊಂಡು, ಕಡಿಮೆ ಕೂಲಿಯಲ್ಲಿ ಹೆಚ್ಚು ಕೆಲಸ ತೆಗೆದುಕೊಳ್ಳುವಂತಹ ನೀತಿ ಹೆಚ್ಚಾಗುತ್ತಿದೆ" ಎಂದು ಸಮ್ಮೇಳನವನ್ನು ಉದ್ಘಾಟಿಸಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆಯವರು ಹೇಳಿದರು.

ಮತ್ತೊಬ್ಬ ಮುಖ್ಯ ಅತಿಥಿ ಹಾಗೂ ಕೇರಳ ಎಲ್‌ಡಿಎಫ್ ಸರಕಾರದಲ್ಲಿ ಮಂತ್ರಿಯೂ ಆಗಿರುವ ಸುಶೀಲಾ ಗೋಪಾಲನ್ ಮಾತನಾಡಿ ಅಸಂಘಟಿತ ಅಂಗನವಾಡಿ ಕಾರ್ಯಕರ್ತೆಯರ ಹೋರಾಟಗಳ ಫಲವಾಗಿ ಇತ್ತೀಚಿನಲ್ಲಾದ ಬೆಳವಣಿಗೆಗಳನ್ನು ಕುರಿತು ತಿಳಿಸಿದ್ದರು. ಅಹಲ್ಯಾ ರಂಗ್ನೇಕರ್ ಸಮ್ಮೇಳನದಲ್ಲಿ ಚಿಕ್ಕ ವಯಸ್ಸಿನ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದನ್ನು ಗಮನಿಸಿ ಇದು ಸ್ವಾಗತಾರ್ಹ ಎಂದರು.

ಈ ಸಮ್ಮೇಳನದಲ್ಲಿ 19 ರಾಜ್ಯಗಳಿಂದ 297 ಪ್ರತಿನಿಧಿಗಳು, ಅಂಗನವಾಡಿ ಕಾರ್ಯಕರ್ತೆಯರು, ಶಿಕ್ಷಕಿಯರು, ನರ್ಸ್‌ಗಳು, ಗೋಡಂಬಿ, ಬೀಡಿ, ತೋಟಗಾರಿಕೆ, ಸಣ್ಣ ಉದ್ದಿಮೆಗಳು, ಎಲೆಕ್ಟ್ರಾನಿಕ್ಸ್, ರಾಜ್ಯ ಸರಕಾರಿ, ಕೇಂದ್ರ ಸರಕಾರಿ ಕಾರ್ಯಾಲಯಗಳಿಂದ ಎಲ್‌ಐಸಿ, ಬ್ಯಾಂಕ್ ಹಾಗೂ ಅಸಂಘಟಿತ ಬುಡಕಟ್ಟು ನೌಕರರು ಭಾಗವಹಿಸಿದ್ದರು. ಕರ್ನಾಟಕದಿಂದ 37 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ರಾಷ್ಟ್ರೀಯ ಸಂಚಾಲಕಿ ವಿಮಲಾ ರಣದಿವೆ ವರದಿ ಮಂಡಿಸಿದರು. ಅಲ್ಲದೆ ಹೇಮಲತಾ.ಕೆ. ಇವರು "ಸಿಐಟಿಯು ಹಾಗೂ ದುಡಿಯುವ ಮಹಿಳೆ" ಎಂಬ ಪ್ರಬಂಧವನ್ನು "ಮನೆಯಲ್ಲಿ ದುಡಿಯುವ ಸ್ಥಳದಲ್ಲಿ ದುಡಿಯುವ ಮಹಿಳೆ ಎದುರಿಸುವ ಸಮಸ್ಯೆಗಳು ಹಾಗೂ ಪರಿಹಾರಗಳು" ಎಂಬ ಪ್ರಬಂಧವನ್ನು ಪಿ.ಪಿ.ಪ್ರಸನ್ನ ಕುಮಾರಿ ಹಾಗೂ "ಸಂಘಟನೆಯಲ್ಲಿ ಮಹಿಳೆಯರ ಪಾತ್ರ ಕುರಿತು ಆಯೋಗ ಮತ್ತು ದುಡಿಯುವ ಮಹಿಳೆಯರು ತ್ರಿಪಾತ್ರ" ಎಂಬ ಪ್ರಬಂಧವನ್ನು ಎಂ.ರಾಜೇಶ್ವರಿ ಮಂಡಿಸಿದರು.

ಈ ಮೂರು ಪ್ರಬಂಧಗಳ ಮೇಲೆ ಚರ್ಚೆ ನಡೆಯಿತು. ಅಧ್ಯಕ್ಷ ಮಂಡಲಿಯಲ್ಲಿ ಗಂಗಮ್ಮ ಭಾನುಮತಿ ಇವರುಗಳಿದ್ದರು. ಸ್ವಾಗತ ಭಾಷಣವನ್ನು ಕೇರಳದ ದುಡಿಯುವ ಮಹಿಳೆಯರ ಸಮಿತಿಯ ರಾಜ್ಯಸಂಚಾಲಕಿ ಮಾಡಿದರು. ಪಶ್ಚಿಮ ಬಂಗಾಳದ ಗಂಗಮ್ಮ ಅವರು ವಂದನಾರ್ಪಣೆ ಮಾಡಿದರು.

45 ಜನರ ಹೊಸ ಸಮಿತಿ ರಚನೆಯಾಗಿದ್ದು, ಕೇಂದ್ರ ಸಂಚಾಲಕಿಯಾಗಿ ಕಾಂ॥ ವಿಮಲಾ ರಣದಿವೆಯವರು ಪುನರಾಯ್ಕೆ ಆಗಿದ್ದಾರೆ. ಹೊಸ ಸಮಿತಿಯಲ್ಲಿ ಕರ್ನಾಟಕದಿಂದ ವರಲಕ್ಷ್ಮಿ-ರಾಜ್ಯಕೇಂದ್ರ, ಲೀಲಾವತಿ-ಗಾರ್ಮೆಂಟ್ಸ್, ಲಲಿತಾ ಶೆಣೈ-ವಾಣಿಜ್ಯ, ಪದ್ಮಾವತಿ-ಬೀಡಿ ಇವರುಗಳಿದ್ದಾರೆ.

ಬ್ರಿಟನ್ ಚುನಾವಣೆ-ಲೇಬರ್ ಮುಂದೆ

ಲೋಕಸಂಚಾರ



ಶರತ್‌ಚಂದ್ರ

ಬ್ರಿಟನ್ ಚುನಾವಣೆ ಮೇ 1 ರಂದು ನಡೆಯಲಿದ್ದು, ಎಲ್ಲಾ ಚುನಾವಣಾ ಸಮೀಕ್ಷೆ, ವಿಶ್ಲೇಷಣೆಗಳ ಪ್ರಕಾರ, 18 ವರ್ಷಗಳ ಸತತ ಕನ್ಸರ್ವೇಟಿವ್ (ಟೋರಿ) ಪಕ್ಷದ ಆಡಳಿತದ ನಂತರ, ಲೇಬರ್ ಪಕ್ಷ ಅಧಿಕಾರಕ್ಕೆ ಬರುವುದು ಹೆಚ್ಚು ಕಡಿಮೆ ಖಚಿತವಾಗಿದೆ. ಚುನಾವಣೆಯ ಎರಡು ವಾರಗಳ ಮೊದಲು ನಡೆಸಿದ ಚುನಾವಣಾ ಸಮೀಕ್ಷೆ ಆಧಾರಿತ ಹೇಳಿಕೆ ಪ್ರಕಾರ ಲೇಬರ್, ತನ್ನ ಸಮೀಪದ ಪ್ರತಿಸ್ಪರ್ಧಿ ಕನ್ಸರ್ವೇಟಿವ್ ಪಕ್ಷಕ್ಕಿಂತ ಶೇಕಡಾ 17 ರಷ್ಟು ಮುಂದಿದೆ. ಲೇಬರ್ ಶೇಕಡಾ 49 ಮತ ಗಳಿಸಬಹುದು ಎಂದು ಅಂದಾಜು ಮಾಡಲಾಗಿದೆ. ಬ್ರಿಟನ್ನಿನ ಮೂರು ಪಕ್ಷಗಳು ಪ್ರಮುಖ ಸ್ಪರ್ಧಿಗಳಾಗಿರುವ ಸಂದರ್ಭದಲ್ಲಿ ಶೇಕಡಾ 40 ಕ್ಕಿಂತ ಹೆಚ್ಚು ಮತಗಳಿಸಿ ಮೊದಲ ಸ್ಥಾನದಲ್ಲಿದ್ದರೆ, ಬಹುಮತ ಸಿಗುವುದು ಖಚಿತ. ಮೂರನೇ ಪಕ್ಷ ಲಿಬರಲ್ ಪಕ್ಷ, ಸಣ್ಣ ಪಕ್ಷ. ಕಳೆದ ಚುನಾವಣೆಯಲ್ಲೂ ಎಲ್ಲಾ ಚುನಾವಣಾ-ಪೂರ್ವ ಸಮೀಕ್ಷೆಗಳು ಲೇಬರ್ ಗೆಲ್ಲುವುದು ಎಂದು ಹೇಳಿ, ಲೇಬರ್ ಸ್ವಲ್ಪದರಲ್ಲಿ ಸೋತಿತ್ತು. ಆದ್ದರಿಂದ ಲೇಬರ್ ಯಾವುದೇ ಸಂತೃಪ್ತ ಭಾವ ಇಲ್ಲದೆ ಭಾರಿ ಪ್ರಚಾರ ನಡೆಸಿದೆ.

ಲೇಬರ್ ಪಕ್ಷ ಕಳೆದ ಚುನಾವಣೆಯ ಸೋಲಿನ ನಂತರ ಪಕ್ಷದ ಸ್ವರೂಪವನ್ನೇ ಬದಲಾಯಿಸಿತ್ತು. ಮುಖ್ಯವಾಗಿ ಕೈಗಾರಿಕಾ, ಕಾರ್ಮಿಕ ವರ್ಗದ ರಾಜಕೀಯ ಪಕ್ಷವಾಗಿದ್ದ ಹಾಗೂ ಟ್ರೇಡ್ ಯೂನಿಯನ್‌ಗಳ ದೃಢ ನಿಯಂತ್ರಣದಲ್ಲಿದ್ದ ಲೇಬರ್ ಪಕ್ಷ ತನ್ನ ಸ್ವರೂಪ ಬದಲಾಯಿಸಿ ಮಧ್ಯಪಂಥೀಯ ಪಕ್ಷವಾಗಿದೆ. ಕೈಗಾರಿಕೆಗಳ ರಾಷ್ಟ್ರೀಕರಣ, ರಾಜಕೀಯ ನಿಲುವಿನಲ್ಲಿ ಎಡಪಂಥೀಯತೆ- ಬಿಟ್ಟುಕೊಟ್ಟಿದೆ. ಆರ್ಥಿಕ ನೀತಿಗಳಲ್ಲಿ ಕನ್ಸರ್ವೇಟಿವ್ ಪಕ್ಷಕ್ಕೂ, ಲೇಬರ್ ಪಕ್ಷಕ್ಕೂ ಭಾರಿ ವ್ಯತ್ಯಾಸಗಳು ಉಳಿದಿಲ್ಲ. 'ಹೊಸ ಲೇಬರ್ ಪಕ್ಷಕ್ಕೂ ಒಂದು ಛಾನ್ಸುಕೊಡಿ' ಇದು ಲೇಬರ್ ಪಕ್ಷದ ಪ್ರಚಾರದ ಸಾರ. ಲೇಬರ್ ಪಕ್ಷದ ನಾಯಕ ಟೋನಿಬ್ಲೇರ್ ಅನನುಭವಿ, ಆತನ ಕೈಗೆ ದೇಶ ಕೊಡಬೇಡಿ-ಇದು ಕನ್ಸರ್ವೇಟಿವ್ ಪಕ್ಷದ ಪ್ರಚಾರದ ಸಾರ.

ಕನ್ಸರ್ವೇಟಿವ್ ಪಕ್ಷ ಕಳೆದ ಹಲವು ವರ್ಷಗಳಿಂದ ಮುರಿದ ಮನೆ. ಯುರೋಪಿಯನ್ ಸಮುದಾಯದ ಜತೆ ಘನಿಷ್ಟ ಆರ್ಥಿಕ ಸಂಬಂಧ ಹೊಂದಿರುವ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿದೆ. ಈ ಭಿನ್ನಾಭಿಪ್ರಾಯ ಎಷ್ಟು ದೊಡ್ಡ ಸಮಸ್ಯೆಯಾಗಿದೆಯೆಂದರೆ ಪ್ರಸಕ್ತ ಪ್ರಧಾನಿ ಮೇಜರ್ ಟೋರಿ ಪಕ್ಷ ಅಧಿಕಾರಕ್ಕೆ ಬಂದರೆ ಯುರೋಪಿಯನ್ ಸಮುದಾಯದ 'ಸಾಮಾನ್ಯ ನಾಣ್ಯ' ಒಪ್ಪುವ ಬಗ್ಗೆ ಸದಸ್ಯರು ಸ್ವತಂತ್ರವಾಗಿ ಪಾರ್ಲಿಮೆಂಟಿನಲ್ಲಿ ಮತ ಚಲಾಯಿಸಬಹುದು ಎಂದು ಹೇಳುವ ಮಟ್ಟಕ್ಕೆ ಹೋಗಿದೆ. ಚುನಾವಣೆಯ ಮೊದಲು ಪಕ್ಷದ ಐಕ್ಯತೆ ಉಳಿಸಿಕೊಳ್ಳಲು ಹಲವಾರು ಕನ್ಸರ್ವೇಟಿವ್ ಪಕ್ಷದ ಪಾರ್ಲಿಮೆಂಟ್ ಸದಸ್ಯರೂ ಮಂತ್ರಿಗಳ ಮೇಲೆ ಭ್ರಷ್ಟಾಚಾರದ, ಅನೈತಿಕ ವರ್ತನೆಯ ತೀವ್ರ ಆಪಾದನೆ, ಇತ್ತೀಚಿನ ಹಲವಾರು ಉಪ ಚುನಾವಣೆಗಳಲ್ಲಿ ಸೋಲು, ಅನೈಕ್ಯತೆ-ಇವೆಲ್ಲಾ ಒಂದಾಗಿ ಕನ್ಸರ್ವೇಟಿವ್ ಪಕ್ಷದ ಸ್ಥೈರ್ಯ ಕುಂದಿದೆ. 1990 ರಿಂದ ತೀವ್ರವಾಗಿ ಬ್ರಿಟನನ್ನು ಕಾಡಿದ ಆರ್ಥಿಕ ಹಿಂಜರಿತ ಕಳೆದ ಒಂದೆರಡು ವರ್ಷಗಳಲ್ಲಿ ಪುನಃ ಚೇತರಿಕೆ ಆಗಿದ್ದರೂ, ಕನ್ಸರ್ವೇಟಿವ್ ಪಕ್ಷ ಜನರ ಸಮಸ್ಯೆಗಳನ್ನು ಕಡೆಗಣಿಸಿದೆ ಎಂಬ ಆಪಾದನೆಗೆ ತುತ್ತಾಗಿದೆ. ಕೈಗಾರಿಕೆಗಳಲ್ಲಿ ಹತ್ತು ಲಕ್ಷ ಉದ್ಯೋಗಗಳು ಕಳೆದು ಹೋದವು. ಹೊಸ ಆರು ಲಕ್ಷ ಉದ್ಯೋಗಗಳು ಸೃಷ್ಟಿಯಾಗಿವೆ. ನಾಲ್ಕು ಲಕ್ಷ ಉದ್ಯೋಗಗಳು ಶಾಶ್ವತವಾಗಿ ಕಳೆದುಹೋದವು, ಮಾತ್ರವಲ್ಲ, ಸೃಷ್ಟಿಯಾದ ಹೊಸ ಉದ್ಯೋಗಗಳು ಅಲ್ಪ ಕಾಲಾವಧಿಯ ಉದ್ಯೋಗಗಳು. ಕಳೆದು ಹೋದ ಉದ್ಯೋಗಗಳು ಪೂರ್ಣ ಕಾಲಾವಧಿಯ ಉದ್ಯೋಗಗಳು.

ಲೇಬರ್ ಪಕ್ಷ ಅಧಿಕಾರಕ್ಕೆ ಬರುವುದು ಹೆಚ್ಚು ಕಡಿಮೆ ಖಚಿತವಾಗಿದ್ದರೂ, ಬ್ರಿಟನ್‌ಗೊಂದು ಹೊಸ ಜನಪರ ಜನಪ್ರಿಯ ಸರಕಾರ ಕೊಡಬಲ್ಲರೇ? ಬ್ರಿಟಿಷ್ ರಾಜಕೀಯಕ್ಕೆ ಹೊಸ ತಿರುವು ಕೊಡಬಲ್ಲರೇ? ಎಂಬುದು ಪ್ರಶ್ನೆ.

ಕಾಂಬೋಡಿಯಾದಲ್ಲಿ ಚುನಾವಣಾ-ಪೂರ್ವ ಹಿಂಸಾಚಾರ-ಬಿಕ್ಕಟ್ಟು

ಕಾಂಬೋಡಿಯಾದಲ್ಲಿ ಚುನಾವಣಾ-ಪೂರ್ವ ಹಿಂಸಾಚಾರ ಹಾಗೂ ಆಳುವ ಒಕ್ಕೂಟದಲ್ಲಿ ತೀವ್ರ ಬಿಕ್ಕಟ್ಟು ಆರಂಭವಾಗಿದೆ. 1993ರಲ್ಲಿ ವಿಶ್ವ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ನಡೆದ ಚುನಾವಣೆಯ ನಂತರ, ಹಿಂದಿನ ಆಳುವ ಪಕ್ಷ ಕಾಂಬೋಡಿಯನ್ ಪೀಪಲ್ಸ್ ಪಾರ್ಟಿ(ಸಿಪಿಪಿ) ಹಾಗೂ ಮಾಜಿ ಕಾಂಬೋಡಿಯನ್ ರಾಜ ನರೋದಂ ಸಿಹಾನೌಕ್‌ರ ಬೆಂಬಲಿತ ಪಕ್ಷ ಫನ್‌ಸಿನ್‌ಪೆಕ್ ಇವುಗಳ ಒಕ್ಕೂಟ ರಾಷ್ಟ್ರೀಯ ಸರಕಾರ ರಚಿಸಿದ್ದವು. ಆದರೆ ಎರಡು ಪಕ್ಷಗಳ ನಡುವಣ ಸಂಬಂಧ ಅಷ್ಟೇನೂ ಚೆನ್ನಾಗಿರಲಿಲ್ಲ. ಅಂತಹ ಹೇಳಿಕೊಳ್ಳುವ ಜನ ಸಮೂಹದ ಬೆಂಬಲ ಇರದ ಫನ್‌ಸಿನ್‌ಪೆಕ್, ಹನ್‌ಸೇನ್‌ರವರಿಗೆ ಹಾಗೂ ಅವರ ಸಿಪಿಪಿ ಪಕ್ಷಕ್ಕೆ ಕಿರುಕುಳ ಕೊಡಲು ಆರಂಭಿಸಿತ್ತು.

1998ರಲ್ಲಿ ಚುನಾವಣೆಗಳು ನಡೆಯಬೇಕಾಗಿದ್ದು, ಆ ಬಗ್ಗೆ ಎರಡೂ ಪಕ್ಷಗಳ ನಡುವೆ ಭಿನ್ನಾಭಿಪ್ರಾಯದಿಂದಾಗಿ ಅನಿಶ್ಚಿತತೆ ಉಂಟಾಗಿದೆ. ಎರಡೂ ಪಕ್ಷಗಳು ಚುನಾವಣೆಗೆ ತಯಾರಿ ಮಾಡತೊಡಗಿವೆ.

ಸಿಪಿಪಿನ ಹನ್‌ಸೇನ್‌ರ ಕೊಲೆ ಅಪರಾಧದಲ್ಲಿ ಬಂಧಿಸಿ ದೇಶದಿಂದ ಗಡಿಪಾರು ಮಾಡಲಾಗಿದ್ದ, ರಾಜ ನರೋದಂ ಸಿಹನೌಕ್‌ರ ಸೋದರ ನರೋದಂ ಸಿರಿವುಡ್ ಪುನಃ ದೇಶಕ್ಕೆ ವಾಪಸಾಗಲು ಪ್ರಯತ್ನಿಸಿದ್ದರ ಬಗ್ಗೆ ಸರಕಾರದ ನಿಲುವಿನ ಬಗ್ಗೆ ತೀವ್ರ ರಾಜಕೀಯ ಬಿಕ್ಕಟ್ಟು ಉಂಟಾಗಿದೆ. ರಾಜ ನರೋದಂ ಸಿಹನೌಕ್ ಹಾಗೂ ಫನ್‌ಸಿನ್‌ಪೆಕ್ ಆತನಿಗೆ ಕ್ಷಮಾದಾನ ಕೊಡಬಾರದು ಎಂದು ಅಭಿಪ್ರಾಯ ಪಟ್ಟಿದೆ. ಎರಡನೇಯ ಪ್ರಧಾನಿ ಹನ್‌ಸೇನ್ ಇದನ್ನು ವಿರೋಧಿಸಿದ್ದಾರೆ. ನರೋದಂ ಸಿರಿವುಡ್ ದೇಶದೊಳಗೆ ಬಂದರೆ ಅವರು ಬರುವ ವಿಮಾನವನ್ನು ಹೊಡೆದುರುಳಿಸಲಾಗುವುದೆಂದು ಬೆದರಿಸಿದ್ದಾರೆ.

ಮಾರ್ಚ್ 30 ರಂದು ವಿರೋಧ ಪಕ್ಷವಾದ ಖ್ಮೇರ್ ನೇಶನಲ್‌ಪಾರ್ಟಿ(ಕೆಎನ್‌ಪಿ) ರ್‍ಯಾಲಿಯೊಂದನ್ನು ಸಂಘಟಿಸಿತು. ಆ ರ್‍ಯಾಲಿ ಮೇಲೆ ಅಪರಿಚಿತ ವ್ಯಕ್ತಿಗಳು ಮಾಡಿದ ಗ್ರೇನೇಡ್ ಧಾಳಿಯಲ್ಲಿ 10ಜನಮಡಿದಿದ್ದಾರೆ. ಕೆಎನ್‌ಪಿಯ ನಾಯಕ ರೈನ್ಸಿ ಎಂಬಾತ ಪೋಲೀಸ್ ಅಧಿಕಾರಿಯಾಗಿರುವ ಹನ್‌ಸೇನ್‌ರ ಭಾವನ ಕೊಲೆಯಲ್ಲಿ ಆಪಾದಿತ.

ಈ ನಡುವೆ ರಾಜ ನರೋದಂ ಸಿಹನೌಕ್ ತಾನು ಅಧಿಕಾರ ತ್ಯಾಗ ಮಾಡಿ, ಇನ್ನಷ್ಟು ರಾಜಕೀಯ ಬಿಕ್ಕಟ್ಟು ಹೆಚ್ಚಿಸಿದ್ದಾರೆ. ಆದರೆ ಚುನಾವಣೆಯ ನಂತರ ಅಧಿಕಾರ ತ್ಯಾಗ ಮಾಡುವುದಾಗಿ ಅವರು ಈಗ ಸ್ಪಷ್ಟನೆ ನೀಡಿದ್ದಾರೆ.

ಕಾಂಬೋಡಿಯಾ ಎಸ್ಯಾನ್ ದೇಶಗಳ ಗುಂಪನ್ನು ಸೇರುವುದರ ಬಗೆಗೂ ಎರಡು ಪಕ್ಷಗಳನಡುವೆಭಿನ್ನಾಭಿಪ್ರಾಯವಿದೆ.

ಆಗಸ್ಟ್ 1998ರಲ್ಲಿ ನಡೆಯಲಿರುವ ಚುನಾವಣೆಗೆ ಈಗಲೇ ರಾಜಕೀಯ ಹೋರಾಟ ಆರಂಭವಾಗಿದೆ. ಆದರೆ ಈ ರಾಜಕೀಯ ಹೋರಾಟ ದೇಶದ ವ್ಯವಸ್ಥೆಯ ಚೌಕಟ್ಟಿನ ಒಳಗೆ ನಡೆದೀತೆ ಎಂಬುದೇ ಪ್ರಶ್ನೆ.

ತಜಾಕಿಸ್ತಾನ ಸರಕಾರ-ಉಗ್ರವಾದಿಗಳ ನಡುವೆ ಒಪ್ಪಂದ

ಮಾಜಿ ಸೋವಿಯತ್ ಗಣರಾಜ್ಯ ಮಧ್ಯ ಏಶ್ಯಾದ ದೇಶ ತಜಾಕಿಸ್ತಾನದ ಸರಕಾರ ಹಾಗೂ ಇಸ್ಲಾಮಿಕ್ ಮೂಲಭೂತವಾದಿ ಗುಂಪಿನ ನಡುವೆ ಕದನ ವಿರಾಮ ಒಪ್ಪಂದ ಆಗಿದೆ. ಈ ಸಭೆ ಮಾಸ್ಕೋದಲ್ಲಿ ನಡೆದು, ಒಪ್ಪಂದಕ್ಕೆ ಅಲ್ಲೆ ಸಹಿ ಹಾಕಲಾಗಿದೆ. ರಾಜಕೀಯ ವಿಷಯಗಳ ಬಗ್ಗೆ ಒಪ್ಪಂದದ ಬಗ್ಗೆ ಮಾತುಕತೆ ಮುಂದುವರಿದಿದ್ದು, ಸದ್ಯದಲ್ಲೇ ಇರಾಕಿನ ರಾಜಧಾನಿ ತೆಹೆರಾನ್‌ನಲ್ಲಿ ಆಗಲಿದೆ. ಏಪ್ರಿಲ್ 9ರಿಂದ 15 ರವರೆಗೆ ಈ ಬಗ್ಗೆ ತೆಹೆರಾನ್‌ನಲ್ಲಿ ಮಾತುಕತೆಗಳು ನಡೆಯಲಿವೆ.

ಸುಮಾರು 60 ಸಾವಿರ ಜನರನ್ನು ಬಲಿ ತೆಗೆದುಕೊಂಡಿರುವ ಸರಕಾರ-ಹಾಗೂ ಉಗ್ರಗಾಮಿಗಳ ಕದನ ನಿಲ್ಲುವುದರಿಂದ ತಜಾಕಿಸ್ತಾನದ ಸಮಗ್ರತೆ, ಐಕ್ಯತೆಗೆ ಬಂದಿದ್ದ ಅಪಾಯ ದೂರವಾದಂತಾಗಿದೆ. ಈ ಒಪ್ಪಂದ ಬರಲು ತಜಾಕಿಸ್ತಾನ ಸರಕಾರದ ಮೇಲೆ ರಶ್ಯ ಹಾಗೂ ಉಗ್ರಗಾಮಿಗಳ ಮೇಲೆ ಇರಾನ್ ಸರಕಾರ ಪ್ರಭಾವ ಬೀರಿತ್ತು.

ಈ ಒಪ್ಪಂದ ತಜಾಕಿಸ್ತಾನಕ್ಕೆ ಮಾತ್ರವಲ್ಲ, ಇಡೀ ಮಧ್ಯ ಏಶ್ಯಾ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆ. ಸೋವಿಯತ್ ಒಕ್ಕೂಟ ವಿಘಟನೆಯಾದ ಮೊದಲಲ್ಲಿ ಹಲವಾರು ಮಧ್ಯ ಏಶ್ಯಾದ ಮಾಜಿ ಸೋವಿಯತ್ ಗಣರಾಜ್ಯಗಳ(ಮುಸ್ಲಿಂ ಧರ್ಮದ ಅನುಯಾಯಿಗಳು ದೊಡ್ಡ ಸಂಖ್ಯೆಯಿರುವಲ್ಲಿ) ಇಸ್ಲಾಮಿಕ್ ಮೂಲಭೂತವಾದಿ ಗುಂಪುಗಳು ತಲೆ ಎತ್ತಿದವು. ಇವಕ್ಕೆ ಇರಾನಿಯನ್ ಬೆಂಬಲ ಇತ್ತು. ಆದರೆ ಇತ್ತೀಚಿನ ಅಫಘಾನಿಸ್ತಾನದ ಬೆಳವಣಿಗೆಯಿಂದ ರಶ್ಯ ಹಾಗೂ ಇರಾನ್ ಎರಡೂ ಮಧ್ಯ ಏಶ್ಯಾದ ಮುಸ್ಲಿಂ ದೇಶಗಳಲ್ಲಿ ಮೂಲಭೂತವಾದ ಹಾಗೂ ಜಾತ್ಯಾತೀತತೆಯ ಶಕ್ತಿಗಳ ನಡುವಿನ ರಾಜಕೀಯ ಘರ್ಷಣೆ ಆ ದೇಶಗಳ ಸಮಗ್ರತೆ, ಐಕ್ಯತೆಗೆ ಭಂಗ ತರದಂತೆ ಮುತುವರ್ಜಿ ವಹಿಸಲು ಮುಂದಾಗಿವೆ.

ಅಫಘಾನಿಸ್ತಾನದಲ್ಲಿ ಈಗ ಸರಾಕರ ನಡೆಸುತ್ತಿರುವ ತಾಲಿಬಾನ್ ತನ್ನದೇ ಮೂಲಭೂತವಾದದ ಬ್ರಾಂಡನ್ನು ಮಧ್ಯ ಏಶ್ಯಾದ ದೇಶಗಳಿಗೆ ರಫ್ತು ಮಾಡಲು ಹವಣಿಸುತ್ತಿದೆ. ಮಧ್ಯ ಏಶ್ಯಾದ ಗಣರಾಜ್ಯಗಳ ತೈಲ ಸಂಪತ್ತಿನ ಮೇಲೆ ಕಣ್ಣಿಟ್ಟಿರುವ ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳು, ಪಾಕಿಸ್ತಾನ ಹಾಗೂ ತಾಲಿಬಾನ್‌ಗೆ ಪೂರ್ಣ ಕುಮ್ಮಕ್ಕು ಕೊಡುತ್ತಿವೆ. ಇದನ್ನು ಅರಿತಿರುವ ರಶ್ಯ, ಇರಾನ್‌ಗಳು ಇದಕ್ಕೆ ಪ್ರತಿಕ್ರಿಯೆಯಾಗಿ ಈ ಒಪ್ಪಂದ ಏರ್ಪಡಿಸಿವೆ.

ಮೆಕ್ಕಾದಲ್ಲಿ ಬೆಂಕಿ ಅಪಘಾತ-217 ಜನರ ಸಾವು

ಮೆಕ್ಕಾ ತೀರ್ಥಯಾತ್ರೆಗೆ ಹೋಗಿರುವ ಭಕ್ತರು ವಾಸಿಸುತ್ತಿದ್ದ ಟೆಂಟ್‌ಗೆ ಬೆಂಕಿ ಹಿಡಿದು, 217 ಜನ ಸತ್ತಿರುವ ದಾರುಣ ವಾರ್ತೆ ವರದಿಯಾಗಿದೆ. 800 ಜನಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ ಎಂದೂ ವರದಿಯಾಗಿದೆ. ಇದರಲ್ಲಿ ದೊಡ್ಡ ಪ್ರಮಾಣದಲ್ಲಿ ಭಾರತೀಯರು ಇದ್ದಾರೆ ಎನ್ನಲಾಗಿದೆ. ಸತ್ತವರ ದೇಹಗಳು, ವಸ್ತುಗಳು(ಪಾಸ್‌ಪೋರ್ಟ್ ಸೇರಿದಂತೆ) ಸುಟ್ಟು ಭಸ್ಮವಾಗಿರುವುದರಿಂದ ಸತ್ತವರ ಗುರುತು ರಾಷ್ಟ್ರೀಯತೆ ಇನ್ನೂ ಪತ್ತೆ ಹಚ್ಚಲಾಗಿಲ್ಲ.

ಭಾರತದ ವಿಶೇಷ ಪ್ರತಿನಿಧಿ ಮಂಡಳಿಯೊಂದು ಸೌಧಿ ಅರೇಬಿಯಾಕ್ಕೆ ತೆರಳಿದೆ.

ಮೇ ದಿನದ ಸಂದರ್ಭದಲ್ಲಿ

ಪುಟ 2ರಿಂದ

ಮಾಡಲು ಹುನ್ನಾರ ನಡೆಸುತ್ತಿದೆ.

ಇಂತಹ ಕೆಟ್ಟ ವ್ಯವಸ್ಥೆಯನ್ನು ಬದಲು ಮಾಡಲು ಸಿಐಟಿಯು ಪಣ ತೊಟ್ಟಿದೆ. ಈ ಹಿನ್ನೆಲೆಯಲ್ಲಿ ಹಂತ ಹಂತವಾದ ಹೋರಾಟವನ್ನು ನಡೆಸಲು ಸಿಐಟಿಯುನ 7ನೇ ರಾಜ್ಯ ಸಮ್ಮೇಳನ ಕರೆ ನೀಡಿದೆ. ಈಗ ಸಿಐಟಿಯು 9ನೇ ಅಖಿಲ ಭಾರತ ಸಮ್ಮೇಳನದಲ್ಲಿ ಕರೆ ನೀಡಿದೆ.

ಈಗಾಗಲೇ ಒಂದು ಲಕ್ಷ ಕಾರ್ಮಿಕರ ಸದಸ್ಯತ್ವ ಹೊಂದಿ ಕರ್ನಾಟಕದ ಸಕ್ರಿಯ ಕಾರ್ಮಿಕ ಸಂಘಟನೆಗಳ ಪೈಕಿ ಅಗ್ರ ಸ್ಥಾನದಲ್ಲಿರುವ ಸಿಐಟಿಯು ಎಲ್ಲ ಕಾರ್ಮಿಕರ ಐಕ್ಯತೆಯನ್ನು ಸಾಧಿಸಲು ಪಣ ತೊಟ್ಟಿದೆ. ರೈತ-ಕಾರ್ಮಿಕ ಸಖ್ಯತೆಯ ಮೂಲಕ ಶೋಷಿತ ಜನರ ಮುಕ್ತಿಗಾಗಿ, ಸಮ ಸಮಾಜಕ್ಕಾಗಿ ಹೋರಾಟ ನಡೆಸಲು ನಿರ್ಧರಿಸಿದೆ.

ಮೇ ದಿನ ಬಂಡವಾಳಿಗರ ಶೋಷಣೆ, ಅನ್ಯಾಯ, ದಮನಗಳ ವಿರುದ್ಧದ ಹೋರಾಟದಲ್ಲಿ ಕಾರ್ಮಿಕರ ಅಂತರ್‌ರಾಷ್ಟ್ರೀಯ ಸೌಹಾರ್ದತೆಯನ್ನು ನೆನಪಿಸಿಕೊಳ್ಳುವ ದಿನ. ಈ ಶ್ರಮಜೀವಿಗಳ ರಕ್ತ ವ್ಯರ್ಥವಾಗಲು ಕಾರ್ಮಿಕ ವರ್ಗ ಬಿಟ್ಟಿಲ್ಲ. ಹೆಜ್ಜಾಲದಲ್ಲಿ ಚೆಲ್ಲಿದ ರಕ್ತ ಕೂಡಾ ವ್ಯರ್ಥವಾಗಲು ಬಿಡುವುದಿಲ್ಲ ಎಂದು ಶಪಥ ಮಾಡೋಣ.

- ಬಾಲಕೃಷ್ಣ

ಧರ್ಮಕಾರಣ ಮುಟ್ಟುಗೋಲಿಗೆ ಖಂಡನೆ

ಮಂಡ್ಯ: ಡಾ|| ಪಿ.ವಿ.ನಾರಾಯಣರವರ 'ಧರ್ಮಕಾರಣ' ಕೃತಿಯನ್ನು ಸರಕಾರ ಮುಟ್ಟುಗೋಲು ಹಾಕಿಕೊಂಡಿರುವುದನ್ನು ಜಿಲ್ಲೆಯ ಪ್ರಗತಿಪರ ಸಂಘಟನೆಗಳಾದ ಎಸ್‌ಎಫ್‌ಐ, ಡಿವೈಎಫ್‌ಐ ಮತ್ತು ಸಿಪಿಐ(ಎಂ) ಪಕ್ಷ ಜಂಟಿಯಾಗಿ ಏಪ್ರಿಲ್ 16 ರಂದು ನಡೆದ ಸಭೆಯಲ್ಲಿ ಖಂಡಿಸಿವೆ.

ಧರ್ಮಕಾರಣ ಕೃತಿಯನ್ನು ಮುಟ್ಟುಗೋಲಿಸಿ, ಸರಕಾರವು ನಾಡಿನ ಜನತೆಯ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಡ್ಡಲಿಯೇಟು ನೀಡಿದೆ. ಕೆಲವು ಮೂಲಭೂತವಾದಿ, ಮತೀಯವಾದಿಗಳ ಒತ್ತಾಯಕ್ಕೆ ಮಣಿದು, ಈ ವಿಷಯ ನ್ಯಾಯಾಲಯದ ಮುಂದಿರುವಾಗಲೇ ರದ್ದು ಪಡಿಸಿ ಸಾಹಿತಿಗಳಿಗೆ, ಪ್ರಗತಿಪರರಿಗೆ, ಅಘಾತವನ್ನುಂಟು ಮಾಡಿದೆ. ಕೂಡಲೇ ಈ ಕ್ರಮವನ್ನು ವಾಪಸ್ಸು ಪಡೆಯಬೇಕೆಂದು ಈ ಸಂಘಟನೆಗಳು ಆಗ್ರಹಿಸಿವೆ.

..........ಹೊಸದೊಂದು ವಿಶ್ವಾಸ ಮೂಡಿಸಬೇಕು

ಪುಟ 1 ರಿಂದ

ವಿವಾದ ಹುಟ್ಟಿಸಿ ನ್ಯಾಯಾಲಯದ ಕಟ್ಟೆಯೇರಿಯಾಗಿತ್ತು. ಇದು ಎಲ್ಲರಿಗೂ ಗೊತ್ತಿರುವ ವಿಚಾರ ವಾಜಪೇಯಿಯವರಿಗೂ ತಿಳಿಯದ ವಿಚಾರವೇನೂ ಆಗಿರಲಿಕ್ಕಿಲ್ಲ.

ಆತಂಕದ ವಿಷಯ

ಆದರೆ ಈ ಚರ್ಚೆಯಲ್ಲಿ ಕಂಡು ಬಂದ ಇನ್ನೂ ಆತಂಕದ ವಿಷಯವೆಂದರೆ ಸಂಯುಕ್ತ ರಂಗದ ಕಡೆಯಿಂದ ಮಾತನಾಡಿದ ಭಾಷಣಕಾರರು ಬಿಜೆಪಿ ಮತ್ತು ಕಾಂಗ್ರೆಸ್ಸಿನ ವಿಷ ಧಾಳಿಗಳಿಗೆ ಪ್ರತ್ಯುತ್ತರ ನೀಡದೇ ಹೋದುದು. ಜಾತ್ಯಾತೀತತೆಯೆಂದರೆ ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುವುದಲ್ಲ ಎಂದು ವಾಜಪೇಯಿಯವರು ತಪ್ಪು ವ್ಯಾಖ್ಯೆ ಮಾಡಿದಾಗಲೂ ಸಂಯುಕ್ತ ರಂಗದ ಮುಖಂಡರು ಅವರನ್ನು ತರಾಟೆಗೆ ತಗೊಳ್ಳಲಿಲ್ಲ.

ಪ್ರಧಾನಮಂತ್ರಿಗಳೂ ಚರ್ಚೆಗೆ ಉತ್ತರ ನೀಡುವಾಗ ಈ ಬಗ್ಗೆ ಪ್ರಸ್ತಾಪಿಸಲಿಲ್ಲ. ಐಕ್ಯತೆ ಮತ್ತು ಸಹಕಾರದ ಬಗ್ಗೆಯಷ್ಟೇ ಹೇಳಿದರು. ಕಾಂಗ್ರೆಸ್ ಬಗ್ಗೆ ಅವರ ನಿಲುವನ್ನು ಅರ್ಥ ಮಾಡಿಕೊಳ್ಳಬಹುದು, ಏಕೆಂದರೆ ಅದು ಬೆಂಬಲ ನೀಡುವ ಪಕ್ಷವೆಂದು. ಆದರೆ ಬಿಜೆಪಿ ಬಗ್ಗೆಯೇಕೆ ಅಂತಹ ಮುಜುಗರ? ಬಹುಶಃ ಪ್ರಧಾನಮಂತ್ರಿಯಾಗಿ ಮೊದಲ ಬಾರಿಗೆ ಮಾತನಾಡುತ್ತಿದ್ದುದರಿಂದ ಅವರು ಸಹಕಾರಕ್ಕೆ ಮನವಿ ಮಾಡಲೇಬೇಕಾಗಿತ್ತು ಎಂದರೆ ಸದ್ಯಕ್ಕೆ ಅರ್ಥ ಮಾಡಿಕೊಳ್ಳಬಹುದು. ಆದರೆ ಇದನ್ನೇ ಮುಂದುವರೆಸಿದರೆ ಇದು ಸಂಯುಕ್ತ ರಂಗದ ರಚನೆಯ ಆಧಾರವನ್ನೇ ದುರ್ಬಲಗೊಳಿಸಿ ಕೊನೆಗೆ ಸರಕಾರಕ್ಕೆ ಅಪಾಯ ತರಬಹುದು ಎಂದು ಸುರ್ಜಿತ್ ಎಚ್ಚರಿಸಿದ್ದಾರೆ.

ಜನ ಕುತೂಹಲದಿಂದ ಕಣ್ಣಿಟ್ಟು ನೋಡುತ್ತಿದ್ದಾರೆ. ಸಂಯುಕ್ತರಂಗ ಬಿಜೆಪಿಯ ಸವಾಲನ್ನು ಎದುರಿಸಬೇಕಾದರೆ ಅದು ಒಂದು ಸ್ಪಷ್ಟ ಗೆರೆ ಎಳೆಯಬೇಕು. ಕೋಮುವಾದದೊಂದಿಗೆ ಯಾವ ರಾಜಿಗೂ ಅವಕಾಶವಿರಬಾರದು. ಸಂಯುಕ್ತ ರಂಗ ಯಾವ ಆಧಾರದ ಮೇಲೆ ರಚನೆಗೊಂಡಿದೆಯೇ ಅದನ್ನು ಕಾಯ್ದುಕೊಂಡರೆ ಮಾತ್ರವೇ ಅದರ ಐಕ್ಯತೆಯನ್ನು ಕಾಯ್ದುಕೊಳ್ಳಲು ಸಾಧ್ಯ ಎಂದು ಸುರ್ಜಿತ್ ಅಭಿಪ್ರಾಯಪಟ್ಟಿದ್ದಾರೆ.

ಅಲ್ಲದೆ ಹೊಸ ಸಂಯುಕ್ತ ರಂಗ ಸರಕಾರ ತನ್ನ ಆರ್ಥಿಕ ನೀತಿಗಳ ಬಗ್ಗೆ ಗಂಭೀರ ಪುನರಾಲೋಚನೆ ಮಾಡಬೇಕು ಎಂದೂ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಆಗ್ರಹಪಡಿಸಿದ್ದಾರೆ. ಗುತ್ತೇದಾರಿ ಉದ್ಯಮಿಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲವಾದ ಧೋರಣೆಗಳೆಂದರೆ ದುಡಿಯುವ ಜನರ, ರೈತಾಪಿ ಜನಗಳ, ದಲಿತ-ಶೋಷಿತ ವಿಭಾಗಗಳ ಜನರ, ಮಧ್ಯಮ ವರ್ಗಗಳ ಜನರ ಹಾಗೂ ದೊಡ್ಡ ಸಂಖ್ಯೆಯಲ್ಲಿರುವ ಶ್ರಮಜೀವಿಗಳ ಹಿತಾಸಕ್ತಿಗಳಿಗೆ ಕಂಟಕಪ್ರಾಯವಾದ ಧೋರಣೆಗಳು. ಈ ಧೋರಣೆಗಳನ್ನು ಅನುಸರಿಸಿದ್ದರಿಂದ ಅಸಮಾನತೆಗಳು ತ್ವರಿತವಾಗಿ ಹೆಚ್ಚುತ್ತಿವೆ. ಇವು ಹೆಚ್ಚು ಬಡತನ, ಹೆಚ್ಚು ನಿರುದ್ಯೋಗ ತರುತ್ತಿವೆ, ಕೇವಲ ಕೆಲವರನ್ನಷ್ಟೇ ಶ್ರೀಮಂತರನ್ನಾಗಿಸುತ್ತದೆ ಎಂದಿರುವ ಸುರ್ಜಿತ್ ಇಂತಹ ಧೋರಣೆಗಳು ದೇಶಕ್ಕೆ ಸ್ಥಿರತೆಯನ್ನು ತರಲಾರವು, ಆದ್ದರಿಂದ ಈ ಆರ್ಥಿಕ ಧೋರಣೆಗಳ ಬಗ್ಗೆ ಪುನರಾಲೋಚನೆ ಮಾಡಿ ಜನಗಳ ಆಕಾಂಕ್ಷೆಗಳನ್ನು ಈಡೇರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದ್ದಾರೆ. ಹಾಗೆ ಮಾಡಿದರೆ ಜನಗಳಲ್ಲಿ ಸಂಯುಕ್ತರಂಗದ ಬಗ್ಗೆ ಹೊಸದೊಂದು ವಿಶ್ವಾಸವನ್ನು ಉಂಟು ಮಾಡಿದಾಗ ಸಂಯುಕ್ತ ರಂಗವೂ ಅದರಿಂದ ಬಲಗೊಳ್ಳುವುದು, ಇದೀಗ ಮಾಡಲೇಬೇಕಾದ ಕೆಲಸ ಎಂದು ಸುರ್ಜಿತ್ ಹೊಸ ಸಂಯುಕ್ತರಂಗ ಸರಕಾರವನ್ನು ಆಗ್ರಹಪಡಿಸಿದ್ದಾರೆ. ❑

'ಹಿಂದುತ್ವ'ದವರೂ ಒಕ್ಕೂಟದ ಮಾತನಾಡಿದರೇನಂತೆ?

ನಾಯಿ ಬಾಲ ಡೊಂಕೇ ತಾನೇ!

ಮತ್ತೊಮ್ಮೆ ಬಿಜೆಪಿ ಸಮಯಸಾಧಕ ತನದ ಪ್ರದರ್ಶನ ಮಾಡಿದೆ. ದಿಲ್ಲಿಯಲ್ಲಿ ಹೇಗಾದರೂ ಅಧಿಕಾರ ಗಿಟ್ಟಿಸುವ ಹತಾಶೆಯಲ್ಲಿ ಅದೀಗ "ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ" ರಚಿಸುವ ಪ್ರಯತ್ನದಲ್ಲಿದೆ.

ಸಮ್ಮಿಶ್ರ ಸರಕಾರಗಳನ್ನು ಎಡಬಿಡದೆ ಗೇಲಿ ಮಾಡುತ್ತಿದ್ದ ಈ ಜನ ಈಗ "ಸಮಾನ ಕನಿಷ್ಟ ಕಾರ್ಯ ಕ್ರಮ"ದ ಬಗ್ಗೆ ಕೂಡಾ ಮಾತನಾಡಲಾ ರಂಭಿಸಿದ್ದಾರೆ! ಕೋತಿಯಂತೆ ನಕಲು ಮಾಡುವುದೇ ತಮ್ಮ ಧಾಳಿಗೆ ಅತ್ಯುತ್ತಮ ಅಸ್ತ್ರ ಎಂದು ಅವರು ನಿರ್ಧರಿಸಿದಂತಿದೆ.

ಶ್ರೀಯುತ ವಾಜಪೇಯಿಯವರ ತಿಪ್ಪರಲಾಗಗಳು ಎಲ್ಲರಿಗೂ ತಿಳಿದಿರುವ ಸಂಗತಿ. ಪ್ರಧಾನ ಮಂತ್ರಿಯಾಗುವ ಹತಾಶೆಯನ್ನು ತೋರಿಸುತ್ತವಷ್ಟೇ ಅವು. 1980 ರ ದಶಕದ ಆರಂಭದಲ್ಲಿ ಅವರು 'ಗಾಂಧಿ ಸಮಾಜವಾದ' ಎಂಬ ಬಿಜೆಪಿ ಘೋಷಣೆಯ ನೇತಾರರಾಗಿದ್ದರು. ಒಂದು ದಶಕದೊಳಗೆ ಬಾಬ್ರಿ ಮಸೀದಿಯ ಧ್ವಂಸದ ಮಟ್ಟಕ್ಕೆ ಅದು ಬಂತು ನಿಂತಿತು! ಇಂದು ಅವರು ಒಂದು ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗದ ಪ್ರಸ್ತಾವ ಇಟ್ಟಿದ್ದಾರೆ. ಆದರೆ ಅದೇ ವೇಳೆಗೆ ಭಾರತದ ಒಕ್ಕೂಟ ಸ್ವರೂಪದ ಮೇಲೆಯೇ ನೇರ ಧಾಳಿ ಮಾಡುವ ಒಂದು ಸಿದ್ಧಾಂತವನ್ನು ಅನುಸರಿಸುತ್ತಿದ್ದಾರೆ. ನಿಜ, ಬಿಜೆಪಿ ಕೂಡಾ ಈಗ ಇಂತಹ ರಂಗಗಳ ಬಗ್ಗೆ ಮಾತನಾಡಬೇಕಾಗಿ ಬಂದಿರುವುದು ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಹಾಗೂ ಒಕ್ಕೂಟ ಪ್ರಜ್ಞೆಯ ಶಕ್ತಿಗೆ ಸಂದಿರುವ ಗೌರವವೇ ಸರಿ.

ಒಕ್ಕೂಟ ದೃಷ್ಟಿ Vs ಹಿಂದುತ್ವದ ದೃಷ್ಟಿ

ಒಂದು ಜಾತ್ಯಾತೀತ, ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ಭಾರತಕ್ಕಾಗಿ ಸಮರ ಸ್ವಾತಂತ್ರ್ಯ ಹೋರಾಟದ ಕಾಲದಲ್ಲೇ ಆರಂಭವಾಗಿತ್ತು. ಇದಕ್ಕೆ ಪ್ರತಿಯಾಗಿ ಕೋಮುವಾದಿಗಳು 1920 ರ ದಶಕದಿಂದಲೇ ಪ್ರತ್ಯೇಕತೆ ಹಾಗೂ ಅಸಹಿಷ್ಣುತೆಯ ಮೇಲೆ ನಿಂತ ಒಂದು 'ಹಿಂದೂರಾಷ್ಟ್ರ'ವನ್ನು ಸೃಷ್ಟಿಸುವ ಪ್ರಯತ್ನ ನಡೆಸುತ್ತಾ ಬಂದಿದ್ದಾರೆ. ಅವರು ಭಾರತವನ್ನು ಭಾಷಾವಾರು ಪ್ರಾಂತ್ಯಗಳಾಗಿ ಮರು ಸಂಘಟಿಸುವುದರ ಅವಶ್ಯಕತೆಯನ್ನು, ಸಮಂಜಸತೆಯನ್ನು ಮಾನ್ಯ ಮಾಡಿರಲಿಲ್ಲ. ಈಗಲೂ ಮಾನ್ಯ ಮಾಡುತ್ತಿಲ್ಲ. ವಿಭಿನ್ನ ದೇಶೀ ಗುಂಪುಗಳು, ಸಂಸ್ಕೃತಿಗಳು, ಭಾಷೆಗಳು ಮತ್ತು ಧರ್ಮಗಳ ಸುಂದರ ಹೆಣಿಗೆಯಂತಿರುವ ದೇಶ ಭಾರತದ ವೈವಿಧ್ಯತೆಯನ್ನು ಅಲ್ಲಗಳೆದು ಹಿಂದೂ ರಾಷ್ಟ್ರ ಅಥವಾ ಹಿಂದುತ್ವದ ಹೆಸರಲ್ಲಿ ಏಕ ರೂಪತೆಯೊಂದನ್ನು ಹೇರುವುದೇ ಅವರ ಸಿದ್ಧಾಂತದ ತಿರುಳು. ಆದರೆ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತದ ಕಣ್ಣೋಟ ಸಂಪೂರ್ಣ ಭಿನ್ನವಾದಂತದ್ದು. ಭಾರತ ಒಂದು ವೈವಿಧ್ಯಮಯ ದೇಶ ಎಂದು ಒತ್ತಿಹೇಳುತ್ತಲೇ ಈ ವೈವಿಧ್ಯಮಯತೆಯಲ್ಲಿನ ಸಮಾನ ಅಂಶಗಳನ್ನು ಬಲಪಡಿಸುವ ನೋಟ ಅದು -ಒಕ್ಕೂಟ ದೃಷ್ಟಿಯೆಂದರೆ ಇದು.

ಭಾರತದ ಸ್ವಾತಂತ್ರ್ಯದ ಐವತ್ತನೇ ವರ್ಷವನ್ನು ಪ್ರವೇಶಿಸುವ ಈಗಿನ ಸಂದರ್ಭದಲ್ಲಿ ನಮ್ಮೀರಾಷ್ಟ್ರದ ವಿವಿಧ ದೇಶೀಯತೆಗಳ ನಡುವಿನ ಸಮಾನ ಅಂಶಗಳನ್ನು ಬಲಪಡಿಸುವ ಕಣ್ಣೋಟದಿಂದ ಮಾತ್ರವೇ ಭಾರತವನ್ನು ಬಲಿಷ್ಠಗೊಳಿಸಬಹುದೇ ಹೊರತು ಹಿಂದೂ ರಾಷ್ಟ್ರದ ಹೆಸರಲ್ಲಿ ಏಕರೂಪತೆಯನ್ನು ಹೇರುವ ಬಿಜೆಪಿ ಮತ್ತದರ ಮಿತ್ರರ ಸಿದ್ಧಾಂತ ಈ ವಿಶಾಲ ದೇಶದ ಐಕ್ಯತೆಯನ್ನು, ಸಮಗ್ರತೆಯನ್ನು ನಾಶಮಾಡುವುದಷ್ಟೇ.

ಏಕೆ ಒಕ್ಕೂಟ ರಾಜಕೀಯ ಬಲಗೊಳ್ಳುತ್ತಿದೆ?

1996 ರ ಚುನಾವಣೆಗಳಲ್ಲಿ ಬಿಜೆಪಿ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು ಎಂದು ಹೇಳಲಾಗುತ್ತಿದೆ. ಆದರೆ ಅದು ಚಲಾಯಿಸಲ್ಪಟ್ಟ ಮತಗಳಲ್ಲಿ ಕಾಲಂಶದಷ್ಟನ್ನೂ ಪಡೆಯಲಿಲ್ಲ ಎಂಬುದೂ ನಿಜವಲ್ಲವೇ? ದಕ್ಷಿಣ ಮತ್ತು ಪೂರ್ವ ಭಾರತದಲ್ಲಂತೂ ಅದರ ಹೆಸರೇ ಇಲ್ಲ. ತನ್ನ 'ಗಟ್ಟಿ' ಸಿದ್ಧಾಂತವನ್ನು ದುರ್ಬಲಗೊಳಿಸುವ ಶಕುನಿತನವನ್ನು ಬಳಸಿದರೂ ಮಿತ್ರರನ್ನು ಗಳಿಸಿಕೊಳ್ಳುವ ಅದರ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜಕವಾದವು. ಕೊನೆಗೂ ಒಂದು ಕಾಂಗ್ರೆಸ್ಸೇತರ ಜಾತ್ಯಾತೀತ ಸರಕಾರ ಬೇಕೆಂದು ಜನ ಬಯಸಿದಂತೆ ಸಂಯುಕ್ತ ರಂಗ ಸರಕಾರ ಬಂತು. ಒಂದು ಅರ್ಥದಲ್ಲಿ ಸಂಯುಕ್ತ ರಂಗದ ರಚನೆ ಭಾರತದ ಸಾಮಾಜಿಕ ವೈವಿಧ್ಯತೆಯ ವಾಸ್ತವತೆ ರಾಜಕೀಯದಲ್ಲೂ ಪ್ರತಿಫಲನಗೊಳ್ಳಲಾರಂಭಿಸಿರುವುದರ ಸಂಕೇತ. ವಿಭಿನ್ನ ಪ್ರದೇಶಗಳಲ್ಲಿ ವಿಭಿನ್ನ ಪಕ್ಷಗಳನ್ನು ಜನತೆ ಒಪ್ಪಿರುವುದು ಭಾರತದಲ್ಲಿನ ವಾಸ್ತವತೆಯನ್ನು ಬಿಂಬಿಸುವ ಸಂಗತಿ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ಗುರುತಿಸಬಹುದು. ಮೊದಲನೆಯದಾಗಿ, ಪ್ರಾದೇಶಿಕ ಅಸಮತೋಲನ-ಮತ್ತು ಸಾಮಾಜಿಕ ಅಸಮತೋಲನ - ಮತ್ತು ಅಸಮಾನ ಆರ್ಥಿಕ ಬೆಳವಣಿಗೆಯಿಂದಾಗಿ ವಿಭಿನ್ನ ಜನ ವಿಭಾಗಗಳಲ್ಲಿ ವಿಭಿನ್ನ ಆಶೋತ್ತರಗಳು ಮೂಡಿ ಬರಲಾರಂಭಿಸುತ್ತವೆ. ಎರಡನೆಯದಾಗಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ವಿಭಿನ್ನ ಆಶೋತ್ತರ ಗಳನ್ನು ಒಂದು ಸಾಮಾಜಿಕ ಆರ್ಥಿಕ ಧೋರಣೆಯ ಚೌಕಟ್ಟಿನಲ್ಲಿ ಸಮಗ್ರಗೊಳಿಸಿ ಕಾಂಗ್ರೆಸ್ ವಿಕಾಸಗೊಳಿಸಿದ, ಪ್ರತಿಪಾದಿಸಿದ ಕಣ್ಣೋಟ ತ್ವರಿತವಾಗಿ ಮಾಯವಾಗುತ್ತಿದೆ. ಇಂತಹ ಒಂದುಗೂಡಿಸುವ ಚೌಕಟ್ಟಿಲ್ಲದೆ, ಅತ್ತ ಹಲವು ಜನ ವಿಭಾಗಗಳನ್ನು ದೂರ ಸರಿಸುವ 'ಹಿಂದೂ ರಾಷ್ಟ್ರ'ದ ಪ್ರತಿಪಾದನೆಯ ಸವಾಲು ಬಂದಾಗ, ಜನಗಳ ಜಾತ್ಯಾತೀತ ಪ್ರಜಾ ಪ್ರಭುತ್ವ ಪ್ರಜ್ಞೆಗೆ ತದ್ವಿರುದ್ಧವಾದ ಇಂತಹ ಸವಾಲು ಬಂದಾಗ ಜನ ವಿಭಿನ್ನ ಪ್ರದೇಶಗಳಲ್ಲಿ ವಿಭಿನ್ನ ಪ್ರಾದೇಶಿಕ ಪಕ್ಷಗಳಲ್ಲಿ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು. ಆದರೆ ಇದೊಂದು ಸಂಕ್ರಮಣ ಘಟ್ಟ- ವೈವಿಧ್ಯತೆಯಲ್ಲಿನ ಸಮಾನ ಅಂಶಗಳ ಮೇಲೆ ನಿಂತ ಒಂದು ಕಣ್ಣೋಟ ಮೂಡಿಬರುವವರೆಗೆ ಮುಂದುವರಿಯುವ ಘಟ್ಟ. ಇಂತಹ ಒಂದು ಕಣ್ಣೋಟವನ್ನು ಇಂದು ನೀಡುತ್ತಿರುವವರು ಎಡ ಶಕ್ತಿಗಳು.


ತಿರುಕನ ಕನಸು!

ಈ ವಾಸ್ತವತೆಯಿಂದಾಗಿಯೇ ಬಿಜೆಪಿ ಇಂದು ಪ್ರಾದೇಶಿಕ ಪಕ್ಷಗಳಲ್ಲಿ ತನ್ನ ಮಿತ್ರರನ್ನು ಹುಡುಕಬೇಕಾಗಿ ಬಂದಿದೆ. ಅದಕ್ಕಾಗಿ ಸಮಯಸಾಧಕತನದ ಪ್ರಪಾತಕ್ಕೆ ಇಳಿದಿರುವ ಈ ಪಕ್ಷ ಒಂದೆಡೆ 'ಹಿಂದೂ ರಾಷ್ಟ್ರ'ದ ತನ್ನ ಕನಸಿಗೆ ಸೈದ್ಧಾಂತಿಕವಾಗಿ ಅಂಟಿಕೊಂಡೇ ಇನ್ನೊಂದೆಡೆ ಪ್ರಾದೇಶಿಕ ಪಕ್ಷಗಳನ್ನು ಆಕರ್ಷಿಸಲು 'ಒಕ್ಕೂಟ' ದ ಮಾತನಾಡುತ್ತಿದೆ. ಆದರೆ ಈ ಎಲ್ಲಾ ಪ್ರಯತ್ನಗಳು ನಿಷ್ಪ್ರಯೋಜಕವಾಗುವುದು ಖಂಡಿತ, ಏಕೆಂದರೆ ಸಂಯುಕ್ತರಂಗದ ಭಾಗವಾಗಿರುವ ಪ್ರಾದೇಶಿಕ ಪಕ್ಷಗಳಿಗೆ ಭಾರತ ಒಂದು ವಿವಿಧ ದೇಶೀ ಗುಂಪುಗಳ ಒಕ್ಕೂಟ ಎಂಬ ಒಕ್ಕೂಟ ವಾದವೇ, ದೇಶದ ಒಕ್ಕೂಟ ರಾಜಕೀಯ ವ್ಯವಸ್ಥೆಯ ಆಧಾರವಾಗಿದ್ದರೆ, ಬಿಜೆಪಿಗೆ ಅದು ಒಪ್ಪಿಗೆಯಾಗದ ಸಂಗತಿ. ಆದ್ದರಿಂದಲೇ 13 ದಿನಗಳ ಕುಖ್ಯಾತ ಆಳ್ವಿಕೆಯ ಕಾಲದಲ್ಲಿ ಅಧಿಕಾರದಲ್ಲಿದ್ದಾಗ್ಯೂ ಈ ಯಾವ ಪ್ರಾದೇಶಿಕ ಪಕ್ಷಗಳೂ ಬಿಜೆಪಿಯತ್ತ ಕಣ್ಣೂ ಹೊರಳಿಸಲಿಲ್ಲ. ಈ ಪ್ರಾದೇಶಿಕ ಪಕ್ಷಗಳು ಬದುಕುಳಿಯಬೇಕಾದರೆ ಅವು ಒಕ್ಕೂಟವಾದವನ್ನು ಎತ್ತಿ ಹಿಡಿಯಲೇ ಬೇಕು. ಹೀಗಿರುವಾಗ ಇಂತಹ ಪಕ್ಷಗಳ ಬೆಂಬಲ ಪಡೆದು ಅಧಿಕಾರ ಗಿಟ್ಟಿಸುವ ಬಿಜೆಪಿಯ ಕನಸು ಕೇವಲ ತಿರುಕನ ಕನಸು. ಅತ್ತ ಉತ್ತರ ಪ್ರದೇಶದಲ್ಲಿ ಬಿಎಸ್‌ಪಿಯೊಡಗೂಡಿ ಸರಕಾರ ರಚಿಸಿದ್ದಾಗಲೀ, ಈಗ ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗದ ಮಾತೇ ಆಗಲಿ- ಬಿಜೆಪಿಯ ಈ ಅಧಿಕಾರದ ಕನಸು ಹಾಗೂ ಅದರ ಸಮಯ ಸಾಧಕತೆಯನ್ನು ಸಂಪೂರ್ಣವಾಗಿ ಬಯಲಿಗೆಳೆದು ತಂದಿಟ್ಟಿದೆ. ಚಿರತೆಯ ಪಟ್ಟೆಗಳು ಮಾಯವಾಗಬಲ್ಲವೇ? ನಾಯಿ ಬಾಲ ಡೊಂಕೇ ತಾನೇ?



ಇದು ಬಾಬರಿಮಸೀದಿಯ ಧ್ವಂಸವಾದಾಗ ಪ್ರಕಟವಾದ ಪ್ರೊನ್ನಪ್ಪನವರ ಒಂದು ವ್ಯಂಗ ಚಿತ್ರ. - ಬೆಂಕಿ ಹಚ್ಚಿ, ಆಮೇಲೆ 'ಸಾರಿ!' ಎಂದರೆ ಗತಿ"

ಬೆವರಿನ ಪಾಲು



ಬೆವರನು ಸುರಿಸಿ ದುಡಿಯುವ ಜನ ನಾವು
ನಮ್ಮ ಬೆವರಿನ ಪಾಲನು ಕೇಳುವೆವು
ತುಂಡು ಭೂಮಿಯಲ್ಲ ಒಂದು ದೇಶವಲ್ಲ
ಇಡಿಯ ಭೂಲೋಕವನೇ ಕೇಳುವೆವು
ಇಲ್ಲಿ ಸಾಗರ ಸಾಗರ ಮುತ್ತುಗಳಿವೆ
ಇಲ್ಲಿ ಪರ್ವತ ಪರ್ವತ ವಜ್ರಗಳಿವೆ
ಈ ಸಂಪತ್ತೆಲ್ಲಾ ನಮ್ಮೆಲ್ಲರದು
ಎಲ್ಲ ಖಜಾನೆಯನೇ ಕೇಳುವೆವು
ನೆತ್ತರನೆಷ್ಟು ಹರಿಸಿದರೋ
ಹೂಗಳನೆಷ್ಟು ಹೊಸಕಿದರೋ
ಹಾಡುಗಳನದೆಷ್ಟು ಎದೆಯಾಳದಲ್ಲೇ
ಹಿಸುಕಿದರೋ
ಪ್ರತಿ ನೆತ್ತರಿಗೆ ಹೂ ಹೂಗಳಿಗೆ
ಪ್ರತಿ ಹಾಡಿಗೆ ಸೇಡನು ಕೇಳುವೆವು
ಈ ಸಾಮ್ರಾಜ್ಯದಾರ ಸೇಟುಗಳು
ಸಾವಿರ ಸಾವಿರವಾದೊಡೆ ನಾವು ಕೋಟಿ ಕೋಟಿ
ಅದೆಷ್ಟು ದಿನ ಆ ಅಮೇರಿಕಾದಿಂದ
ಇವರು ಧಾಳಿಗೆ ನೆರವನು ಕೇಳುವರು?

ಎಲ್ಲೆಲ್ಲವೂ ಸರಿ ಹೋದಾಗ
ಜಗಳಗಳೆಲ್ಲಾ ಹರಿದಾಗ
ಪ್ರತಿಯೊಂದು ದೇಶದಾ ಬಾವುಟದಿ
ಒಂದು ಕೆಂಪು ತಾರೆಯ ಕೇಳುವೆವು.

ಉರ್ದು ಮೂಲ: ಫೈಜ್ ಅಹ್ಮದ್ ಫೈಜ್

ಅಣಕ — ಶರತ್ ಚಂದ್ರ

ಅಜ್ಜಿಗೆ ಅರಿವೆ ಚಿಂತೆ ಮೊಮ್ಮಗಳಿಗೆ.....

ಕೇಸರಿಯವರ 'ಏಪ್ರಿಲ್ ಫೂಲ್' ನಿಂದ ದೇಶಕ್ಕೆ ಬಂದ ಗಂಡಾಂತರ, ಅದರಿಂದ ಪಾರಾದ ಬಗ್ಗೆ, ನಮ್ಮ ವರದಿಗಾರ ನಕ್ಷತ್ರಿಕನಿಗೆ ದೇಶದ ಪ್ರತಿಕ್ರಿಯೆ ಏನು ಅಂತ ವರದಿ ಮಾಡಪ್ಪ ಅಂದರೆ ಆತ ಈ ಕೆಳಗಿನ ಸಂದರ್ಶನ ಕಳಿಸಿದ್ದಾನೆ. ನಕ್ಷತ್ರಿಕ ಹೇಗೋ ಉದ್ಯಮಿ, ಕರೋಡಪತಿ ಟೋಪಿವಾಲನೇ ದೇಶ ಅಂತ ನಿರ್ಧಾರ ಮಾಡಿ ಅವನ ಸಂದರ್ಶನ ಮಾಡಿ ಕಳಿಸಿದ್ದಾನೆ. ಓದಿ ನಕ್ಷತ್ರಿಕನ ಪ್ರಕಾರ 'ದೇಶ'ದ ಪ್ರತಿಕ್ರಿಯೆ ಓದಿ:

ನಕ್ಷತ್ರಿಕ:(ಟೋಪಿವಾಲಾನಾ ಸೆಕ್ರೆಟರಿಗೆ) ದೇಶಕ್ಕೆ ಬಂದ ಗಂಡಾಂತರ, ಅದರಿಂದ ಪಾರಾದ ಬಗ್ಗೆ ಟೋಪಿವಾಲಾರ ಸಂದರ್ಶನ ತೆಗೆದುಕೊಳ್ಳಲು ಬಂದಿದ್ದೇನೆ.

ಸೆಕ್ರೆಟರಿ: ಆದರೆ ಅವರಿಗೆ ಹುಷಾರಿಲ್ಲ. ಸಂದರ್ಶನ ಕೊಡುವ ಸ್ಥಿತಿ ಇಲ್ಲ.

ನ:ಏನಾಗಿದೆ? ಜ್ವರಗಿರಬಂದಿದೆಯೇ?

ಸೆ: ಇಲ್ಲ ಏಪ್ರಿಲ್ 1 ರಿಂದ ಫುಲ್ ಅಪ್‌ಸೆಟ್ ಆಗಿ ಬಿಟ್ಟಿದ್ದಾರೆ. ಒಂಥರಾ ಮಂಕಾಗಿ ಕೂತಿದ್ದಾರೆ.

ನ: ಓಹೋ! ಅಂದರೆ ದೇವೇಗೌಡರ ಸರಕಾರ ಬಿದ್ದು ಹೋಗಿದ್ದಕ್ಕೆ 'ವರಿ' ಹತ್ತಿರಬೇಕು.

ಸೆ: ಇಲ್ಲ, ಯಾವ ಸರಕಾರ ಇದ್ದರೆ ನನಗೇನು ಅಂತಾರೆ.

ನ: ಹಾಗಾದರೆ ದೇಶದಲ್ಲಿ ಅಸ್ಥಿರತೆ ಉಂಟಾಗಿದೆ ಅಂತ 'ತಲೆಬಿಸಿ'ಯಾ?

ಸೆ: ಇಲ್ಲ ದೇಶದಲ್ಲಿ ಅಸ್ಥಿರತೆ ಬಗ್ಗೆ ಅವರೇನೂ ಅಪ್‌ಸೆಟ್ ಆಗಲ್ಲ, ಸ್ವಲ್ಪ ಅಸ್ಥಿರತೆ ಇದ್ರೆ ಒಳ್ಳೇದು ಅಂತಾರೆ.

ನ: ಅಂದ್ರೆ ಮಧ್ಯಂತರ ಚುನಾವಣೆಯ ಅಪಾಯ ಇನ್ನೂ ಹೋಗಿಲ್ಲ. ಪುನಃ ಪಾರ್ಟಿಗಳಿಗೆ 'ಕಾಣಿಕೆ' ಕೊಡಬೇಕು ಅಂತ ಮಂಕಾಗಿದ್ದಾರಾ?

ಸೆ: ಇಲ್ಲಪ್ಪ 'ಕಾಣಿಕೆ' ಚುನಾವಣೆ ಇಲ್ಲದಾಗ್ಲೂ ಕೊಡ್ತಾ ಇರ್ತಾರೆ. ಅದೇನೂ ಅವರಿಗೆ ದೊಡ್ಡದಲ್ಲ.

ನ: ಅಂದ್ರೆ ಗುಜ್ರಾಲ್ ಸರಕಾರ ಬಂದಿದ್ದು ಅವರಿಗೆ ಇಷ್ಟವಾಗಲಿಲ್ವ. ಇವರೇನು ಕಾಂಗ್ರೆಸ್ ಬೆಂಬಲಿಗರಾ?

ಸೆ: ಛೆ! ಛೆ! ಇಲ್ಲ, ಕಾಂಗ್ರೆಸ್ ಬಗ್ಗೆ ಅವರೇನೂ ತಲೆಕೆಡಿಸಿಕೊಳ್ಳಲ್ಲ!

ನ: ಮತ್ತೇನಪ್ಪಾ, ಮಂಕಾಗಿ ಕೂರುವಂಥದ್ದು ಏನಾಗಿದೆ? ಇಡೀ ದೇಶದ ಜನ ಗಂಡಾಂತರ ತೊಲಗಿತಲ್ಲಾ ಅಂತ ಖುಷಿ ಪಡ್ತಿದ್ರೆ.

ಸೆ: ಚಿದಂಬರಂರವರ 'ಕನಸಿನ'ಬಜೆಟ್ ಗತಿ ಏನು? ಅದರಲ್ಲಿ ಭಾರಿ ಬದಲಾವಣೆ ಆಗ್ಬಹುದೋ ಅಂತ ಕಳೆದ ಮೂರು ವಾರದಿಂದ ಅವರಿಗೆ ನಿದ್ದೇನೂ ಬರ್ತಿಲ್ಲ. ಚಿದಂಬರಂ ಸರಕಾರ ಸೇರದ್ದರಿಂದ 'ಜುಲಾಬು' ಬೇರೆ ಶುರುವಾಗಿದೆ.

ನ: (ಅವನಷ್ಟಕ್ಕೆ ಗೊಣಗಿಕೊಳ್ಳುತ್ತ) ಈ ಟೋಪಿವಾಲಾರವರ ಸಂದರ್ಶನ ಮಾಡಿದ್ರೆ ದೇಶದ ಪ್ರತಿಕ್ರಿಯೆ ಗೊತ್ತಾಗ್ತದೆ ಅಂತ ಬಂದ್ರೆ ಏನೋ ಹೇಳ್ತಾರಲ್ಲ - ಅಜ್ಜಿಗೆ ಅರಿವೆ ಚಿಂತೆ ಮೊಮ್ಮಗಳಿಗೆ ಇನ್ನೇನೋ ಚಿಂತೆ ಅಂತ ಹಂಗಾಯ್ತಲ್ಲ.

ಶ್ರೀ ಬಿಜು ಪಟ್ನಾಯಕ್

ಸಿಪಿಐ(ಎಂ) ಶ್ರದ್ಧಾಂಜಲಿ

ಏಪ್ರಿಲ್ 17 ರಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ದೇಶದ ಒಬ್ಬ ಪ್ರಮುಖ ರಾಜಕೀಯ ಮುಖಂಡರಾದ ಬಿಜು ಪಟ್ನಾಯಕ್ ನಿಧನರಾದರು. ಅವರ ಸಾವಿನ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿರುವ ಸಿಪಿಐ (ಎಂ) ಪೊಲಿಟ್‌ಬ್ಯೂರೋ, ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ, ಸಾರ್ವಜನಿಕ ಅಧಿಕಾರ ಸ್ಥಾನಗಳಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ ಪೀಳಿಗೆಯ ಕೊನೆಯ ಮುಖಂಡರಲ್ಲೊಬ್ಬರು ಎಂದು ಹೇಳಿದೆ. ಇಂಡೋನೇಷ್ಯಾದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಸುಕಾರ್ನೊ ಮತ್ತು ಆ ದೇಶದ ಇತರ ಮುಖಂಡರಿದ್ದ ವಿಮಾನವನ್ನು ಸುರಕ್ಷಿತ ಸ್ಥಳಕ್ಕೊಯ್ದ ಅವರ ಸಾಹಸ ಚಿರಸ್ಮರಣೀಯ. ಅದು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಕ್ಕೊಂದು ಅಮೋಘ ಕೊಡುಗೆ ಎಂದಿರುವ ಸಿಪಿಐ(ಎಂ) ಒರಿಸ್ಸಾದಲ್ಲಿ 1961 ರಲ್ಲಿ ಮತ್ತು ನಂತರ ಹಲವು ಬಾರಿ ಮುಖ್ಯ ಮಂತ್ರಿಯಾಗಿ ರಾಜ್ಯದ ಅತ್ಯುನ್ನತ ಮುಖಂಡರಾಗಿ ಬೆಳೆದರು ಎಂದಿದೆ. ವಿಭಿನ್ನ ಕೇಂದ್ರ ಸರಕಾರಗಳಲ್ಲೂ ಮಂತ್ರಿಯಾಗಿ ಅವರು ಸೇವೆ ಸಲ್ಲಿಸಿದರು. ಜನತಾಪಕ್ಷ ಹಾಗೂ ಜನತಾದಳದ ಮುಖಂಡರಾಗಿ ಅವರು ರಾಷ್ಟ್ರಮಟ್ಟದಲ್ಲಿ ಒಂದು ಕಾಂಗ್ರೆಸ್ಸೇತರ ಜಾತ್ಯಾತೀತ ರಂಗವನ್ನು ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದರು ಎಂದು ಶ್ರದ್ಧಾಂಜಲಿ ಅರ್ಪಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅವರ ಪತ್ನಿ ಹಾಗೂ ಕುಟುಂಬದ ಸದಸ್ಯರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು